
## ೧೯ನೇ ಶತಮಾನದ

# ಕರ್ನಾಟಕ ವಾಗ್ಗೇಯಕಾರರು

• ಡಾ.ಎಂ. ಸೂರ್ಯ ಪ್ರಸಾದ್



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-560002.

# ೧೯ನೇ ಶತಮಾನದ

# ಕರ್ನಾಟಕ ವಾಗ್ಗೇಯಕಾರರು

## ೧

ಲೇಖಕರು

–ಡಾ. ಎಂ. ಸೂರ್ಯ ಪ್ರಸಾದ್,

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ,
14/3, ಕೆನರಾ ಫೈನಾನ್ಸ್ ಕಟ್ಟಡ,
ನೃಪತುಂಗ ರಸ್ತೆ, ಬೆಂಗಳೂರು–560002.

"೧೯ನೇ ಶತಮಾನದ ಕರ್ನಾಟಕ ವಾಗ್ಗೇಯಕಾರರು" ಲೇಖಕರು, ಪ್ರಧಾನ ಸಂಪಾದಕರು - ಡಾ. ಎಂ.ಸೂರ್ಯ ಪ್ರಸಾದ್, ಪ್ರಕಾಶಕರು-ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, 14/3, ಕೆನರಾ ಫೈನಾನ್ಸ್ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-560002. ☎: 2215072

ಮೊದಲ ಮುದ್ರಣ : 1994

ಬೆಲೆ : 15-00 ರೂ.
ಹದಿನೈದು ರೂ.ಗಳು.

ಮುದ್ರಣ :
ಶ್ರೀರಂಗ ಪ್ರಿಂಟರ್ಸ್ ಅಂಡ್ ಬೈಂಡರ್ಸ್,
ಹನುಮಂತನಗರ, ಬೆಂಗಳೂರು-560 019.
ಫೋನ್ : 602333

# ಅಧ್ಯಕ್ಷರ ನುಡಿ

ಕರ್ನಾಟಕ ಸಂಗೀತಕ್ಕೆ ಕರ್ನಾಟಕದ ಕೊಡುಗೆ ಅಪಾರ ಹಾಗೂ ಬಹುಮುಖವಾದದ್ದು. ಅರಸೊತ್ತಿಗೆಯಿಂದ ಹಿಡಿದು ಈಗಿನ ಪ್ರಜಾಪ್ರಭುತ್ವದ ಸರಕಾರದ ಆಡಳಿತದ ಸಮಯದಲ್ಲೂ ಸಂಗೀತ, ನೃತ್ಯಾದಿಕಲೆಗಳ ಪೋಷಣೆ–ಪ್ರಚಾರ–ಪ್ರಸಾರ ನಿರಂತರವಾಗಿ ನಡೆದಿದೆ. ಕರ್ನಾಟಕ ರಾಜ್ಯವು ಕೇವಲ ಕಲಾವಿದ–ಕಲಾವಿದೆಯರನ್ನಷ್ಟೇ ಸೃಷ್ಟಿಸಲಿಲ್ಲ. ಇಲ್ಲಿಅನೇಕ ಲಕ್ಷ್ಯ–ಲಕ್ಷಣ ವಿದ್ವಾಂಸರೂ ಜನ್ಮ ತಳೆದಿದ್ದಾರೆ. ಅವರುಗಳು ತಮ್ಮ ವಿದ್ವತ್ಪ್ರತಿಭೆಗಳಿಂದ ಕರ್ನಾಟಕ ಸಂಗೀತ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿದ್ದಾರೆ.

ನಿಜವಾದ ಅರ್ಥದಲ್ಲಿ, ಸತ್ವಯುತ ವಾಗ್ಗೇಯಕಾರರನ್ನು ಈ ಕ್ಷೇತ್ರಕ್ಕೆ ನಮ್ಮ ರಾಜ್ಯವು ಕೊಡುಗೆಯಾಗಿ ನೀಡಿದೆ. ಸ್ವತಃ ಶಾಸಕರು–ಕಲಾ ಪೋಷಕರೂ ಆಗಿದ್ದ ಮೈಸೂರಿನ ಮಹಾರಾಜರು ಪರಿಣತ ಕಲಾವಿದರಾಗಿರುವುದರೊಂದಿಗೆ ವಾಗ್ಗೇಯಕಾರರಾಗಿಯೂ ಪ್ರಕಾಶಿಸಿ ಒಂದು ಆದರ್ಶ ಹಾಗೂ ಅಪೂರ್ವ ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟಿದ್ದಾರೆ. ಅಲ್ಲಿನ ರಾಜಾಸ್ಥಾನದಲ್ಲಿದ್ದ ಅನೇಕ ಕಲಾವಿದರೂ , ರಾಜಾಸ್ಥಾನದ ಹೊರಗೆ ಕೆಲವರೂ ಇದರಿಂದ ಪ್ರೇರಿತರಾಗಿ ಉತ್ತಮ ಗುಣ–ಮೌಲ್ಯದ ವಾಗ್ಗೇಯಗಳನ್ನು ರಚಿಸಿದ್ದಾರೆ. ಅಂತಹ ವಾಗ್ಗೇಯಕಾರರ ವ್ಯಕ್ತಿತ್ವ ಮತ್ತು ಕೃತಿಗಳ ಬಗೆಗೆ ಸಾಕಷ್ಟು ಮಾಹಿತಿ ಒಂದೆಡೆ ಉಪಲಭ್ಧವಿಲ್ಲ.

ಈ ಕೊರತೆಯನ್ನು ನೀಗಿಸುವಂತಹ ಪ್ರಯತ್ನವನ್ನು ನುರಿತ ಲೇಖಕ–ವಿಮರ್ಶಕ ಡಾ.ಎಂ.ಸೂರ್ಯ ಪ್ರಸಾದ್ ಅವರು ತಮ್ಮ ಈ "೧೯ನೇ ಶತಮಾನದ ಕರ್ನಾಟಕ ವಾಗ್ಗೇಯಕಾರರು" ಎಂಬ ಪುಸ್ತಕದ ಮೂಲಕ ಫಲಕಾರಿಯಾಗಿ ಮಾಡಿದ್ದಾರೆ. ಉತ್ಕೃಷ್ಟ ವಾಗ್ಗೇಯಕಾರರಾಗಿ ಮಿಂಚಿದ ಕಲಾವಿದರ ಬಗ್ಗೆ ಉಪಯುಕ್ತ ವಿವರಗಳನ್ನು ಇದರಲ್ಲಿ ಪ್ರಸ್ತುತ ಪಡಿಸಲಾಗಿದೆ. ತುಂಬು ಶ್ರಮದಿಂದ ವಿವರಗಳನ್ನು ಸಂಗ್ರಹಿಸಿ ಅವುಗಳನ್ನು ಅಚ್ಚುಕಟ್ಟಾಗಿ ಡಾ.ಸೂರ್ಯಪ್ರಸಾದ್ ಅವರು ನಿರೂಪಿಸಿದ್ದಾರೆ. ಇಂತಹ ಶ್ಲಾಘನೀಯ ಕಾರ್ಯ ಮಾಡಿರುವ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ.

ಈ ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಶ್ರೀರಂಗ ಪ್ರಿಂಟರ್ಸ್ ಅವರಿಗೆ, ಇದನ್ನು ಹೊರತರಲು ಸಹಕರಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ದುರ್ಗಾ ಸಿ.ಆವರ್ತಿ, ಸಿಬ್ಬಂದಿ ಹಾಗೂ ಎಲ್ಲ ಸದಸ್ಯರಿಗೂ ನಾನು ಆಭಾರಿಯಾಗಿದ್ದೇನೆ.

–ಪಂ.ಆರ್.ವಿ.ಶೇಷಾದ್ರಿ ಗವಾಯಿ

ಅಧ್ಯಕ್ಷರು.

# ಲೇಖಕರ ಮಾತು

ಕರ್ನಾಟಕ ಸಂಗೀತವನ್ನು ಶ್ರೀಮಂತಗೊಳಿಸುವಲ್ಲಿ ಕರ್ನಾಟಕ ಪಾತ್ರ ಸತ್ವ–ತತ್ವ– ಮಹತ್ವ ಪೂರ್ಣವಾಗಿದೆ. ಇಲ್ಲಿನ ಶ್ರೇಷ್ಠ ಕಲಾವಿದರು ಕರ್ನಾಟಕ ಸಂಗೀತದ ಅಂತಃಸತ್ವದ ಹಿರಿಮೆ–ಗರಿಮೆಗಳ ಕಂಪನ್ನು ತಮ್ಮ ತಮ್ಮ ಕಾರ್ಯಕ್ರಮಗಳ ಮೂಲಕ ಎಲ್ಲೆಡೆ ಪಸರಿಸುತ್ತಾ ಬಂದ್ದಾರೆ. ಹಾಗೆಯೇ ಇಲ್ಲಿನ ವಿಶಿಷ್ಟ ವೈದುಷ್ಯದ ವಿದ್ವಾಂಸರು ಉತ್ತಮ ವಾಗ್ಗೇಯಕಾರರಾಗಿ ಕರ್ನಾಟಕ ಸಂಗೀತದ ಆಯಾಮವನ್ನು ವಿಸ್ತರಿಸಿದ್ದಾರೆ. ಪರಮೋತ್ಕೃಷ್ಟ ವಾಗ್ಗೇಯಕಾರರಲ್ಲಿ ಕಾಣ ಬರುವ ಎಲ್ಲ ಗುಣ–ವಿಶೇಷಗಳೂ ಹತ್ತೊಂಬತ್ತನೇ ಶತಮಾನದ ಕರ್ನಾಟಕ ವಾಗ್ಗೇಯಕಾರರಲ್ಲೂ ತುಂಬಿ ತುಳುಕಾಡುತ್ತಿವೆ. ಕರ್ನಾಟಕ ರಾಜ್ಯವನ್ನು ಆಳಿದ ರಾಜ–ಮಹಾರಾಜರೂ ಸ್ವಯಂ ವಾಗ್ಗೇಯಕಾರರಾಗಿ ತಮ್ಮ ಕಲಾ–ಸಿರಿತನವನ್ನು ಪ್ರದರ್ಶಿಸಿ ಹಂಚಿಕೊಂಡಿದ್ದಾರೆ. ಈ ಎಲ್ಲ ವಾಗ್ಗೇಯಕಾರರ ರಚನೆಗಳಲ್ಲಿ ಮಾತು–ಧಾತುಗಳೆರಡೂ ಏಕಕಾಲದಲ್ಲಿ ಆವಿರ್ಭವಿಸುವ ರಸ ಸನ್ನಿವೇಶಗಳೆಷ್ಟೋ ಇವೆ. ಕರ್ನಾಟಕ ಸಂಗೀತದಲ್ಲಿ ಪ್ರಚಲನೆಯಲ್ಲಿರುವ ಬಹುತೇಕ ಎಲ್ಲ ಕೃತಿ–ಪ್ರಕಾರಗಳಲ್ಲಿ ನಮ್ಮ ರಾಜ್ಯದ ವಾಗ್ಗೇಯಕಾರರು ತಮ್ಮ ಪಾಂಡಿತ್ಯ–ಪ್ರತಿಭೆಗಳನ್ನು ಪ್ರದರ್ಶಿಸಿರುವುದು ಮತ್ತೊಂದು ಗಮನಾರ್ಹ ವಿಷಯ. ಕರ್ನಾಟಕ ಸಂಗೀತದ ತ್ರಿಮೂರ್ತಿಗಳ ವಾಗ್ಗೇಯಗಳಲ್ಲಿ ಕಾಣಸಿಗುವ ಗುಣ–ವಿಶೇಷಗಳು ಇಲ್ಲಿನ ವಾಗ್ಗೇಯಕಾರರ ರಚನೆಗಳಲ್ಲೂ ಪ್ರತಿಬಿಂಬಿತವಾಗಿರುವುದು ಶೋಭಾಪೂರ್ಣವೂ ಶುಭಕರವೂ ಆಗಿದೆ.

ಇತಿಹಾಸವನ್ನು ಅವಲೋಕಿಸಿದಾಗ ನಮ್ಮಲ್ಲಿ ವಾಗ್ಗೇಯಕಾರರ ಅಬಾಧಿತ ಪರಂಪರೆಯೇ ಕಂಡು ಬರುವುದು. ಆ ಪರಂಪರೆಗೆ ಸೇರಿದ ಕೆಲವು ವಾಗ್ಗೇಯಕಾರರ ಬಗೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿಯಾದರೂ ಸೂಕ್ಷ್ಮ ಮತ್ತು ಸ್ಥೂಲ ಪರಿಚಯ ಲಭ್ಯವಿದೆ. ಹತ್ತೊಂಭತ್ತನೇ ಶತಮಾನದ ಕರ್ನಾಟಕದ ವಾಗ್ಗೇಯಕಾರರ ಬಗ್ಗೆ ಸೂಕ್ತ ಮಾಹಿತಿ ಒಂದೆಡೆ ಸಂಗ್ರಹಿತವಾಗದೆ ಚೆದುರಿ ಹೋಗಿದೆ. ಅಲ್ಲಲ್ಲಿ ಚೆದುರಿಹೋಗಿರುವ ಮಾಹಿತಿಯನ್ನು ಒಂದೆಡೆ ಸಂಗ್ರಹಿಸಿ ದಾಖಲಿಸಬೇಕೆಂಬ ಬಹು ದಿನಗಳ ನನ್ನ ಕನಸು, ಇಂದು ಈ ಪುಸ್ತಕದ ರೂಪದಲ್ಲಿ ನನಸಾಗಿದೆ. ಆಯ್ದ ವಾಗ್ಗೇಯಕಾರರ ಸಂಕ್ಷಿಪ್ತ ಜೀವನ, ಸಾಧನೆಯೊಂದಿಗೆ ಅವರ ರಚನೆಗಳ ಬಗ್ಗೆ ವಿಸ್ತಾರ ಮತ್ತು ಸ್ಥಳಾಭಾವದ ಪ್ರಯುಕ್ತ ಸೂಕ್ಷ್ಮ ನಮೂದು ಮಾತ್ರ ಮಾಡಲಾಗಿದೆ. ಮಾಹಿತಿಯನ್ನು ಬಲ್ಲ ಹಾಗೂ ಅಧಿಕಾರಿಕ ಮೂಲಗಳಿಂದ ಸಂಗ್ರಹಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಯಾವುದೇ ರೀತಿಯ ಏರು–ಪೇರುಗಳು ಕಂಡು ಬಂದಲ್ಲಿ ಸಹೃದಯಿ–ಓದುಗರು ದಯವಿಟ್ಟು ಅವುಗಳನ್ನು ನನ್ನ ಗಮನಕ್ಕೆ ತರಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಈ ಪುಸ್ತಕದ ಹಸ್ತ ಪ್ರತಿಯನ್ನು ಓದಿ, ಪ್ರತಿಪಾದಿಸಲಾದ ವಿಷಯಗಳ ಬಗೆಗೆ ಪ್ರೇರಕ ಮಾರ್ಗದರ್ಶನ ನೀಡ ಪದ್ಮಭೂಷಣ ಡಾ.ವಿ.ದೊರೆಸ್ವಾಮಿ ಅಯ್ಯಂಗಾರ್ ಅವರು ಆಶೀರ್ವದಿಸಿದ್ದಾರೆ. ಅವರಿಗೆ ನನ್ನ ನಮನಗಳು. ಲೇಖನ ಕಾರ್ಯವು ಸುಗಮವಾಗಿ, ಶೀಘ್ರವಾಗಿ ನಡೆಯಲು ಕಾಲಾನುಕಾಲಕ್ಕೆ ಉತ್ತೇಜನ ನೀಡಿ ಬೆನ್ನುತಟ್ಟಿದವರು ಅಕಾಡೆಮಿಯ ಅಧ್ಯಕ್ಷರಾದ ಪೂಜ್ಯ ಪಂ.ಆರ್.ವಿ.ಶೇಷಾದ್ರಿ ಗವಾಯಿಗಳವರು. ಅವರ ನಿರಂತರ ಪ್ರೋತ್ಸಾಹಕ್ಕೆ ನಾನು ಚಿರಋಣಿ. ಈ ಪುಸ್ತಕವು ಪ್ರಕಟಗೊಳ್ಳಲು ಸಹಕಾರ ನೀಡಿದ ಅಕಾಡೆಮಿಯ ರಿಜಿಸ್ಟ್ರಾರ್ ದುರ್ಗಾ ಸಿ.ಆವರ್ತಿ ಮತ್ತು ಎಲ್ಲ ಸದಸ್ಯರಿಗೂ ನಾನು ಆಭಾರಿಯಾಗಿದ್ದೇನೆ. ಅಂದವಾಗಿ ಅಚ್ಚುಕಟ್ಟಾಗಿ ಮುದ್ರಣಕಾರ್ಯವನ್ನು ನೆರವೇರಿಸಿರುವ ಶ್ರೀರಂಗ ಪ್ರಿಂಟರ್ಸ್‌ನ ಬಾಲಕೃಷ್ಣ ಅವರಿಗೆ ವಂದನೆಗಳು.

14-11-1994

ಶ್ರೀಭಾವ ಸಂವತ್ಸರ ಕಾರ್ತೀಕ

ಶುದ್ಧ ದ್ವಾದಶಿ, ಸೋಮವಾರ

–ಡಾ.ಎಂ.ಸೂರ್ಯ ಪ್ರಸಾದ್.

# ಪರಿವಿಡಿ


ಪುಟಸಂಖ್ಯೆ

ಪ್ರಸ್ತಾವನೆ

**ಅ. ಹಿಂದಿನ ಮೈಸೂರು ಒಡೆಯರು**

01. ಮುಮ್ಮಡಿ ಕೃಷ್ಣರಾಜ ಒಡೆಯರು (1799 – 1868) 2
02 ಮೈಸೂರು ಸದಾಶಿವರಾವ್ (10ನೇ ಶತಮಾನ) 3
03. ಮೂಗೂರು ಸುಬ್ಬಣ್ಣ 7
04. ವೀಣಾ ಕೃಷ್ಣಯ್ಯ 7
05. ವೀಣಾ ಶೇಷಣ್ಣ (1852 – 1926) 8
06. ಮೈಸೂರು ಕರಿಗಿರಿರಾವ್ (1853 – 1927) 10
07. ವೀಣಾ ಸುಬ್ಬಣ್ಣ (1854 – 1939) 12
08. ಮೈಸೂರು ವಾಸುದೇವಾಚಾರ್ಯ 14
09. ಬಿಡಾರಂ ಕೃಷ್ಣಪ್ಪ (1866 – 1931) 16
10. ವೀಣಾ ಶಿವರಾಮಯ್ಯ (1886 – 1946) 18
11. ವೀಣಾ ವೆಂಕಟಗಿರಿಯಪ್ಪ (1887 – 1952) 19
12. ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ (1888 – 1936) 22
13. ಚಿಕ್ಕರಾಮರಾಯರು (1890 – 1945) 24
14. ರಾಳಪಳ್ಳಿ ಅನಂತ ಕೃಷ್ಣಶರ್ಮ (1893 – 1979) 26
15. ಟಿ. ಚೌಡಯ್ಯ (1894 – 1967) 28
16. ವೀಣಾ ಕೃಷ್ಣಮಾಚಾರ್ಯ 32
17. ಸಿ. ರಂಗಯ್ಯ (1895 – 1984) 33
18. ಬಿ.ಕೆ. ಪದ್ಮನಾಭರಾವ್ (1903 – 1966) 35
19. ಜಯಚಾಮರಾಜ ಒಡೆಯರ್ (1919 – 1974) 37
20. ಟಿ.ವಿ. ಮುತ್ತಾಚಾರ್ (1927 – 1994) 39
21. ಬಳ್ಳಾರಿ ಎಂ. ಶೇಷಗಿರಿ ಆಚಾರ್ (1935) 40

**ಆ. ಇಂದಿನ ವಾಗ್ಗೇಯಕಾರರು:**

22. ಆರ್. ಚಂದ್ರಶೇಖರಯ್ಯ (1915) 42
23. ಆರ್.ಎನ್. ದೊರೆಸ್ವಾಮಿ (1916) 44
24. ವಿ. ರಾಮರತ್ನಂ (1917) 45
25. ಆರ್. ವಿಶ್ವೇಶ್ವರನ್ (1931) 47
26. ಆರ್.ಕೆ. ಸೂರ್ಯನಾರಾಯಣ (1937) 48
27. ಗೀತಾ ಸೀತಾರಾಮ್ (1953) 49
28. ಆರ್.ವಿ. ಶೇಷಾದ್ರಿ ಗವಾಯಿ (1924) 50

# ಪ್ರಸ್ತಾವನೆ

ವಾಗ್ಗೇಯಕಾರನು ಯಾರು? ಸಂಸ್ಕೃತದಲ್ಲಿರುವ ಲಕ್ಷಣ ಗ್ರಂಥಗಳು ವಾಗ್ಗೇಯಕಾರನು ಯಾರು ಎಂಬುದನ್ನು ವಿವರಿಸಿವೆ.

ಗೇಯಾಂ ಸಮಾತ್ರಂ ತುಕುರ್ವನ್ ಗಾಯನ್ತ್ರೋಯಂ ಪ್ರಕೀರ್ತಿತ।
ವಾಚಂಗೇಯಂ ಚ ವಾಗ್ಗೇಯಕಾರಮಿತೀಯತೇ ।।
ವಾಙ್ಮರುಚ್ಯತೇಗೇಯಂ ಧಾತುಭಿರಿತ್ಯಭಿಧೀಯತೇ ।
ವಾಚಂಗೇಯಂ ಚ ಕುರುತೇಯಸ್ಸವಾಗ್ಗೇಯ ಕಾರಕ।।
ಸ್ವರಪಾಟಪ್ರಯೋಗೇಷು ಪ್ರವೀಣ: ಪದಬಂಧನೇ।
ಶ್ರೇಷ್ಠೋವಾಗ್ಗೇಯಕಾರೋಯಂ ಉತ್ತಮೋತ್ತಮ ಉಚ್ಯತೇ ।।

ಗಾಯನ ಮಾತ್ರ ಮಾಡುವವನು ಗಾಯಕನೆನಿಸಿಕೊಳ್ಳುತ್ತಾನೆ. ಹಾಡಿನ ಸಾಹಿತ್ಯ (ಮಾತು) ಮತ್ತು ಸಂಗೀತ (ಧಾತು) ಇವೆರಡನ್ನೂ ರಚಿಸುವವನು ವಾಗ್ಗೇಯಕಾರನೆನಿಸಿಕೊಳ್ಳುತ್ತಾನೆ. ಆತನು ಕಾವ್ಯ ಛಂದಸ್ಸು, ಅಲಂಕಾರ ಶಾಸ್ತ್ರ, ಪುರಾಣೇತಿಹಾಸಗಳು, ವ್ಯಾಕರಣ ಮುಂತಾದವುಗಳಲ್ಲಿ ಪ್ರವೀಣನಾಗಿರಬೇಕು. ಅಂತಹವನೇ ಶ್ರೇಷ್ಠ ವಾಗ್ಗೇಯಕಾರನೆನಿಸಿಕೊಳ್ಳುತ್ತಾನೆ. ಮತ್ತೊಬ್ಬರ ಸಾಹಿತ್ಯಕ್ಕೆ ಸಂಗೀತವನ್ನು ಹೊಂದಿಸುವವನು ಮತ್ತು ತನ್ನ ಸಾಹಿತ್ಯಕ್ಕೆ ಇನ್ನೊಬ್ಬರಿಂದ ಸಂಗೀತವನ್ನು ಹೊಂದಿಸುವವನು ಉತ್ತಮ ವಾಗ್ಗೇಯಕಾರನೆನಿಸಿಕೊಳ್ಳುವುದಿಲ್ಲ. ವ್ಯಾಕರಣ, ಸಾಹಿತ್ಯ, ಪುರಾಣೇತಿಹಾಸಗಳು, ಲಕ್ಷಣ ಶಾಸ್ತ್ರ ಮತ್ತು ಸಂಗೀತದಲ್ಲಿ ಪಾಂಡಿತ್ಯವಿದ್ದ ಮಾತ್ರಕ್ಕೆ ವಾಗ್ಗೇಯಕಾರನಾಗಲು ಸಾಧ್ಯವಾಗುವುದಿಲ್ಲ. ಇವೆಲ್ಲವೂ ಇದ್ದು ಸೃಜನಶೀಲತೆ ಇದ್ದರೆ ಮಾತ್ರ ವಾಗ್ಗೇಯಕಾರನಾಗಲು ಸಾಧ್ಯ. ಅತ್ಯುತ್ತಮ ಕಾವ್ಯ, ಚಿತ್ರಕಲೆ, ಶಿಲ್ಪಕಲೆ ಸಂಗೀತ ಮುಂತಾದ ಯಾವುದೇ ಅದ್ಭುತ ಲಲಿತ ಕಲಾ ಪ್ರತಿಗಳು ಸೃಷ್ಟಿಯಾಗಲು ಅವುಗಳ ಹಿಂದೆ ಭಗವಂತನ ಕೈವಾಡವಿದೆ ಎಂದು ನಾವು ಭಾರತೀಯರು ನಂಬುತ್ತಾ ಬಂದಿದ್ದೇವೆ. ಭಗವಂತನ ಕೃಪೆಯಿಲ್ಲದೆ ಕಾವ್ಯ ಬರದು ಎಂದು ಒಬ್ಬ ಕನ್ನಡ ಕವಿ ಹೇಳಿದ್ದಾನೆ. ಶ್ರೀ ಪುರಂದರದಾಸರು, ಸದ್ಗುರು ತ್ಯಾಗರಾಜರು ಮತ್ತು ಇತರ ಮಹಾ ವಾಗ್ಗೇಯಕಾರರ ರಚನೆಗಳು ಭಗವಂತನ ಕೃಪೆಯಿಂದ ಬಂದುವೇ ವಿನಹ ಕೇವಲ ಮನುಷ್ಯ ಪ್ರಯತ್ನದಿಂದ ಆದುವಲ್ಲ. ಆದ್ದರಿಂದಲೇ ಈ ಮಹಾತ್ಮರನ್ನು ದೈವಾಂಶ ಸಂಭೂತರೆಂದು ಭಾವಿಸಿ ಪೂಜಿಸುತ್ತಿದ್ದೇವೆ. ಅವರ ರಚನೆಗಳನ್ನು ಬಹಳ ಗೌರವದಿಂದ ಕಾಣುತ್ತಿದ್ದೇವೆ. ಹಿಂದಿನ ಮಹಾ ವಾಗ್ಗೇಯಕಾರರು ನಾವು ಅವರನ್ನು ಅನುಸರಿಸಿ, ಅನುಕರಿಸಬೇಕೆಂದು ಮೇಲ್ಪಂಕ್ತಿ ಹಾಕಿಕೊಟ್ಟರು. ನಮ್ಮ ಅನುಕರಣವು ಎಷ್ಟೇ ಸಾಧಾರಣವಾಗಿದ್ದರೂ ನಾವು ಅದರಿಂದ ಮಾನಸಿಕ ಮತ್ತು ಆಧ್ಯಾತ್ಮಿಕವಾಗಿ ಒಳ್ಳೆಯದನ್ನು ಪಡೆಯಲೆಂದು ಬಯಸಿದರು.

ಸಂಗೀತ ವಿದ್ವಾಂಸರು ಏಕೆ ವಾಗ್ಗೇಯವನ್ನು ರಚಿಸುತ್ತಾನೆ? ಒಂದು ದೃಷ್ಟಿಯಲ್ಲಿ

ಅವನು ಬ್ರಹ್ಮನಂತೆ ಸೃಷ್ಟಿಕರ್ತ. ಮಕ್ಕಳು ಏಕೆ ಆಟವಾಡುತ್ತಾರೆ? ಅವರು ಕ್ರೀಡಾಸಕ್ತರಾಗಲು ಏನು ಕಾರಣ? ಪಕ್ಷಿಗಳು ಏಕೆ ಆಡುತ್ತವೆ? ಯಾರನ್ನು ಸಂತೋಷಪಡಿಸಲು ಹಾಡುತ್ತವೆ? ಯಾರನ್ನು ಮೆಚ್ಚಿಸಲು "ಪುಷ್ಪ ಸಾಧರಣೇ ಕಾಲೇ ಪಿಕಃ ಕೂಜತಿ ಪಂಚಮಂ" (ಅಮರಕೋಶ) ಚಂದ್ರನು ತಂಪಾದ ಬೆಳಕನ್ನು ಕೊಡುವುದು? ಯಾರನ್ನು ಮೆಚ್ಚಿಸುವುದಕ್ಕೋಸ್ಕರ ಹುಲ್ಲು ಹಸಿರಾಗಿರುವುದು? ನಮ್ಮನ್ನು ಮೆಚ್ಚಿಸಲೆಂದೇ? "ದೇವಶ್ಯಷ ಸ್ವಭಾವೋಯಂ ಆಪ್ತ ಕಾಮಸ್ಯ ಕಾಸ್ಪೃಹಾ" ಎಂದು ಗೌಡಪಾದಾಚಾರ್ಯರು ಹೇಳಿರುವಂತೆ ವಾಗ್ಗೇಯ ರಚನೆ ಅವನ ಸ್ವಭಾವ ಅವನ ಮನಸ್ಸಿಗೆ ಸುಂದರವಾದ ಯಾವುದೋ ಆಲೋಚನೆ ಬಂತು. ಅವನ ಕಣ್ಣಿಗೆ ಒಂದು ಸುಂದರ ಸನ್ನಿವೇಶ ಕಾಣಿಸಿತು. ಆತನ ಮನಸ್ಸಿನಲ್ಲಿ ನಾನಾ ಬಗೆಯ ಭಾವನಾವೇಶ ಉಂಟಾಯಿತು. ಆ ಸೌಂದರ್ಯಾನುಭವ ಮತ್ತು ಇತರ ವಿವಿಧ ಅನುಭವಗಳನ್ನು ಪೂರ್ತಿಗೊಳಿಸಬೇಕೆಂದು ವಾಗ್ಗೇಯ ರಚನೆ ಮಾಡುತ್ತಾನೆ. ಅದು ಅವನ ಸ್ವತಂತ್ರ ಆತ್ಮ ಸಂತೋಷ, ಆತ್ಮಾಭಿವ್ಯಕ್ತಿ, ಮನೋಲ್ಲಾಸ ಆತನ ಮನಸ್ಸಿನಲ್ಲಿ, ಅಂತರಂಗದಲ್ಲಿ ಹುದುಗಿಕೊಂಡಿದ್ದ ಅನುಭವದಿಂದ ಕೂಡಿದ ಭಾವನೆಗಳು ಸಂದರ್ಭಾನುಕೂಲ ಒದಗಿ ಬಂದಾಗ ವಾಗ್ಗೇಯ ಮೇಲಕ್ಕೆ ಬಂತು. ಇದು ಸ್ವಾನುಭವದ ಉದ್ಗಾರ. ಸದ್ಗುರು ತ್ಯಾಗರಾಜರನ್ನು ನೋಡೋಣ. ಅವರು ಮಹಾಕವಿ, ಸಂಗೀತ ಪ್ರಪಂಚದಲ್ಲಿ ಮಿನುಗುತ್ತಿರುವ ಧೃವತಾರೆ. ರಾಮಧ್ಯಾನವೇ ಅವರ ಪಾಲಿಗೆ ಅಮೃತಪಾನ. ರಾಮಮೂರ್ತಿಯ ದರ್ಶನದಿಂದಲೇ ಅವರ ಜನ್ಮ ಸಾರ್ಥಕ್ಯ. ಅವರಿಗೆ ಬೇರೆ ವಿಧವಾದ ನಿಧಿ ಬೇಕಿರಲಿಲ್ಲ. ಆದ್ದರಿಂದ ಅವರು "ನಿಧಿ ಚಾಲಾಸುಖಮಾ? ರಾಮುನಿ ಸನ್ನಿಧಿಸೇವಸುಖಮಾ? ನಿಜಮುಗ ಬಲ್ಕು ಮನಸಾ" ಎಂದು "ವನಜ ನಯನ ಮೋಮುನು ಜೂಚುಟ ಜೀವನಮುನಿನೆನರುನ—ಮನಸು ಮರ್ಮಮುದೆಲಸಿ ನನು ಪಾಲಿಂಪ ನಡಚಿವಚ್ಚಿತವೋ ನಾ ಪ್ರಾಣ ನಾಥ ಎಂದು ಹಾಡಿದರು. ಪುರಂದರದಾಸರಿಗೆ ಹಣ ಬೇಕಿತ್ತೆ? ಕೀರ್ತಿ ಪ್ರತಿಷ್ಠೆಗಳು ಬೇಕಾಗಿದ್ದವೇ? ಶ್ರೀಕಾಂತ ಎನಿಗಿಷ್ಟು ಏಕಾಂತದಲ್ಲಿ ನಿನ್ನ ಭಜಿಸುವ ಸೌಭಾಗ್ಯ ದಯ ಮಾಡೋ ತಂದೆ ಎಂದು ಹಾಡಿದರು. ತನ್ನ ಹೃದಯದ ಭಾವನೆಯನ್ನು ತೋಡಿಕೊಂಡರು. ಯತಿಶೇಖರರಾದ ಸದಾಶಿವಬ್ರಹ್ಮೇಂದ್ರರು ಏನೆಂದಿದ್ದಾರೆ? ಅವರಿಗೆ ಯಾವುದರ ಚಿಂತೆ? ಚಿಂತಾನಾಸ್ತಿಕಿಲತೇಷಾಂ ಪರಮಹಂಸ ಪದಚಿತ್ತಾನಾಂ ಬ್ರಹ್ಮಾನಂದಮೃತ ಮತ್ತಾನಾಂ ಎಂದು ಹಾಡಿದ್ದಾರೆ. ತಮ್ಮ ಆತ್ಮಾನಂದಕ್ಕಾಗಿ ಅವರು ಹಾಡಿಕೊಂಡರು. ಕನಕದಾಸರು, ಮಹಾಕವಿನಾರಣಪ್ಪ, ಹರಿದಾಸರು ಇವರೆಲ್ಲರೂ ರಾಜಾಶ್ರಯ, ಕೀರ್ತಿ ಇತ್ಯಾದಿಗಳಿಗಾಗಿ ಶ್ರಮಿಸಿದರೇ? ಅವರು ತಮ್ಮ ಆತ್ಮಾಭಿವ್ಯಕ್ತಿಗಾಗಿ, ಆತ್ಮ ಸಂತೋಷಕ್ಕಾಗಿ ಹಾಡಿದರು. ವಾಗ್ಗೇಯ ರಚಿಸಿದರು. ಇಂತಹವರು ಶ್ರೇಷ್ಠ ವಾಗ್ಗೇಯಕಾರರು.

ಇತರ ವಾಗ್ಗೇಯಕಾರರು ಬೇರೆ ಬೇರೆ ಕಾರಣಗಳಿಂದ ಪ್ರಚೋದಿತರಾಗಿ ವಾಗ್ಗೇಯ ರಚಿಸಿದ್ದಾರೆ. ತನ್ನ ಪೋಷಕರನ್ನು ಮೆಚ್ಚಿಸಲು, ರಾಜರನ್ನು ಹೊಗಳಿ ತಮ್ಮ ಅವಶ್ಯಕತೆಗಳ ಪೂರೈಕೆಗಾಗಿ, ಧನ ಪಡೆಯಲು, ಕಾಂತಾಸಂಮಿತಿಗಾಗಿ, ಬಡತನದಿಂದ ಬಳಲುತ್ತಿರುವಾಗ ಮನೋವೇದನೆಯನ್ನು ವ್ಯಕ್ತಗೊಳಿಸಲು, ಕೆಲವು ವೇಳೆ ತನ್ನ ಪಾಂಡಿತ್ಯ ಪ್ರದರ್ಶನ ಮಾಡಲು ಹಲವರು ವಾಗ್ಗೇಯ ರಚಿಸಿದ್ದಾರೆ. ಮೇಲಾಗಿ ಹಾಡುಗಳನ್ನು ರಚಿಸುವುದು, ನೂತನ ರಾಗಗಳನ್ನು ರೂಪಿಸಿ ತಮ್ಮ ಸಾಹಿತ್ಯವನ್ನು ಆ ರಾಗಗಳಿಗೆ ಅಳವಡಿಸುವುದು ಮುಂತಾದವುಗಳಿಂದ ಬೌದ್ಧಿಕ ಮತ್ತು ಮಾನಸಿಕತೃಪ್ತಿ ಸಂತೋಷಗಳು ಲಭ್ಯವಾಗುತ್ತವೆ.

ಈಗಿನ ಕಾಲದಲ್ಲಿ ವಿಷಯಗಳಿಗಾಗಿ ವಾಗ್ಗೇಯಕಾರನು ಶ್ರಮ ಪಡಬೇಕಾಗಿಲ್ಲ. ವಾಗ್ಗೇಯ ರಚನೆಯಲ್ಲಿ ತೊಡಗಲು ಹಿಂದಿನವರು ಹಾಕಿಕೊಟ್ಟ ಮಾರ್ಗ ಸಿದ್ಧವಾಗಿದೆ. ಕರ್ನಾಟಕ ಸಂಗೀತದಲ್ಲಿ ಅನೇಕ ದೇವತೆಗಳನ್ನು, ದೇವಿಯರನ್ನು ಕುರಿತು ಸಕಲ ಅಭೀಷ್ಟಗಳನ್ನು ನೆರವೇರುವಂತೆ ಪ್ರಾರ್ಥಿಸುವ ಸಂಕಟ ನಿವಾರಿಸುವಂತೆ ಬೇಡುವ, ಭಕ್ತಿ, ಶಕ್ತಿ ಮುಕ್ತಿಯನ್ನು ನೀಡುವಂತೆ ಪ್ರಾರ್ಥಿಸುವ ಅನೇಕ ಸ್ತೋತ್ರಗಳಿವೆ. ಭಗವಂತನು ಧೃವ, ದ್ರೌಪದಿ, ಅಜಾಮಿಳ, ಮಾರ್ಕಂಡೇಯ, ಅಹಲ್ಯ ಮತ್ತು ಇತರರನ್ನು ಅನುಗ್ರಹಿಸಿ ಅವರ ಸಂಕಟ ಕಷ್ಟಗಳನ್ನು ನಿವಾರಣೆ ಮಾಡಿದ ಹಲವು ಪುರಾಣ ಪ್ರಸಿದ್ಧ ಕಥನಗಳಿವೆ. ಇವಲ್ಲದೆ ಭಗವಂತನ, ದೇವದೇವಿಯರ ಗುಣ ವಿಶೇಷಗಳು ಮತ್ತು ಮಹಿಮೆಯನ್ನು ತಿಳಿಸುವ ಅನೇಕ ನಾಮಾವಳಿಗಳು ಅಷ್ಟೋತ್ತರಗಳು, ಶತನಾಮಾವಳಿಗಳು, ಸಹಸ್ರನಾಮಾವಳಿಗಳಿವೆ. ಅನೇಕ ರಚನೆಗಳು ಹೆಚ್ಚು ಕಡಿಮೆ ಇಂತಹ ನಾಮ ವಿಶಿಷ್ಠಗಳನ್ನು ಸುಂದರವಾಗಿ ಹೆಣೆದ ಮಾಲೆಗಳಾಗಿವೆ. ಅವು ರಾಗ, ಸ್ವರ ತರಂಗಗಳಿಂದ ಕೂಡಿ ಕೇಳಲು ಸಂತೋಷದಾಯಕವಾಗಿವೆ. ಈಗಿನ ವಾಗ್ಗೇಯಕಾರರು, ಮಾಡಬೇಕಾದುದು ಇಷ್ಟೆ. ತಮಗೆ ಬೇಕಾದ ಸಿದ್ದವಾದ ವಸ್ತು—ವಿಷಯಗಳನ್ನು ಆರಿಸಿಕೊಂಡು ತಮಗೆ ಬೇಕಾದ ರಾಗ ಮತ್ತು ಅದರ ಸ್ವರಗಳ ಕ್ರಮಕ್ಕೆ ತಕ್ಕಂತೆ ಪುನಃ ರಚಿಸಿ ಜೋಡಿಸುವುದು. ತಮ್ಮ ಸಂಗೀತದ ಭಾವನೆಗಳನ್ನು ಆ ಪದಗಳೊಂದಿಗೆ ರಾಗಕ್ಕೆ ತಕ್ಕಂತೆ ಮತ್ತು ರಾಗಭಾವವನ್ನು ಅನುಸರಿಸಿ ಆ ವಿಶೇಷಣ ಮತ್ತು ಭಾವನೆಗಳನ್ನು ಸುಂದರವಾಗಿ ಮೇಳೈಸುವುದೇ ನಿಜವಾದ ಕಲೆ. ರಾಗಭಾವ ಮತ್ತು ಸಾಹಿತ್ಯ ಭಾವವನ್ನು ಸಂಪೂರ್ಣವಾಗಿ ಪ್ರದರ್ಶಿಸುವಂತಿರಬೇಕು. ಸಾಮಾನ್ಯವಾಗಿ, ವಾಗ್ಗೇಯಕಾರನು ಜನಪ್ರಿಯವಾದ, ತನಗೆ ಚಿರಪರಿಚಿತವಾದ ರಾಗಗಳಲ್ಲಿ ಮೊದಲು ವಾಗ್ಗೇಯವನ್ನು ರಚಿಸಿದ್ದಾನೆ. ಇವುಗಳು ಸುಲಭವಾದ ತಾಳಗಳಲ್ಲಿರಬೇಕು ಮತ್ತು ಆ ತಾಳಗಳ ಸಾಹಿತ್ಯಕ್ಕೆ ಹೊಂದುವಂತಿರಬೇಕು. ಸಾಹಿತ್ಯವು ಮೊದಲು ರಚಿಸಲ್ಪಟ್ಟರೆ ಮತ್ತು ಹಾಡು ಒಂದು ಗೊತ್ತಾದ ತಾಳದಲ್ಲಿರಬೇಕಾದರೆ, ಆಗ ತಾಳಕ್ಕೆ ಹೊಂದಿಕೊಳ್ಳುವಂತೆ ಸಾಹಿತ್ಯವನ್ನು ರಚಿಸುತ್ತಾನೆ. ವಾಗ್ಗೇಯ ರಚನೆಯಲ್ಲಿ ಸ್ವಲ್ಪ

ಪ್ರಗತಿ ಸಾಧಿಸಿದ ನಂತರ, ಸ್ವಲ್ಪ ಕ್ಲಿಷ್ಟವಾದ ರಾಗಗಳಲ್ಲೂ ತಾಳಗಳನ್ನು ರಚಿಸುತ್ತಾನೆ. ಆ ರಾಗಗಳು ಪುರಾತನವಾಗಿರುತ್ತವೆ. ಅಂತೆಯೇ ತ್ಯಾಗರಾಜ ಸ್ವಾಮಿಯ ನಂತರದ ಕಾಲದಲ್ಲಿ ಅನೇಕ ಸಂಗೀತ ವಿದ್ವಾಂಸರು ತೆಲುಗು, ಕನ್ನಡ, ಸಂಸ್ಕೃತ ಮತ್ತು ತಮಿಳು, ಕೆಲವರು ಮಣಿ ಪ್ರವಾಳ ಮತ್ತು ಹಿಂದಿ ಭಾಷೆಯಲ್ಲಿ ವಿವಿಧ ಪ್ರಕಾರಗಳ ಸಂಗೀತ ರಚನೆಗಳನ್ನು ರಚಿಸಿ ವಾಗ್ಗೇಯಕಾರರೆನಿಸಿಕೊಂಡಿದ್ದಾರೆ. ಕೆಲವರು ತಮ್ಮ ಒಳತೋಟವನ್ನು ವ್ಯಕ್ತಗೊಳಿಸಲು ರಚಿಸಿದರು. ಕೆಲವು ಪರೋಕ್ಷವಾದ ಶಕ್ತಿಯುತವಾದ ಪ್ರಚೋದನೆಯಿಂದ ರಚಿಸಿದರು. ತಮಗೆ ಅನುಕೂಲಕರವಾದ ಸಂಗೀತ ಮತ್ತು ವಸ್ತುಗಳು ಅವರಿಗೆ ಹಾಡುಗಳನ್ನು ರಚಿಸಲು ತಮಗೆ ತಾವೇ ಒದಗಿದವು.

1

# ಮೈಸೂರಿನ ಹಿಂದಿನ ಒಡೆಯರ ಕಾಲ

1399ರಲ್ಲಿ ಯದುರಾಯರಿಂದ ಸ್ಥಾಪಿಸಲ್ಪಟ್ಟ ಮೈಸೂರು ಒಡೆಯರ್ ರಾಜವಂಶಜರು ವಿಜಯನಗರ ಮತ್ತು ಕರ್ನಾಟಕದ ಪರಂಪರೆಗೆ ಉತ್ತರಾಧಿಕಾರಿಗಳಾದರು. ವಿಜಯನಗರದ ಪತನಾನಂತರ ಈ ವಂಶದ ರಾಜರು ಲಲಿತ ಕಲೆಗಳ ಪ್ರೇಮಿಗಳೂ, ಪೋಷಕರೂ ಆಗಿದ್ದರು. ತತ್ಪರಿಣಾಮವಾಗಿ ಸಂಗೀತ ಮತ್ತು ನೃತ್ಯ ಕಲೆಗಳ ಕೇಂದ್ರಗಳಲ್ಲಿ ಮೈಸೂರು ಒಂದು ಪ್ರಮುಖ ಕೇಂದ್ರವಾಯಿತು.

ರಾಜ ಒಡೆಯರು (1578 – 1617) ವಿಜಯನಗರದ ಇಮ್ಮಡಿ ಶ್ರೀರಂಗರಾಯನ ಸಾಮಂತರಾಗಿದ್ದರು. ಶ್ರೀರಂಗಪಟ್ಟಣವನ್ನು ಪಡೆದು, ಅದನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡು ಮಹಾನವಮಿ ಅಥವಾ ನವರಾತ್ರಿ ದರ್ಬಾರನ್ನು ವ್ಯವಸ್ಥೆ ಮಾಡಿ, ವಿಜಯನಗರದ ಸಂಪ್ರದಾಯವನ್ನು ಮುಂದುವರಿಸಿದರು. ಸಾಹಿತ್ಯಾದಿ ಕಲೆಗಳ ಪೋಷಣೆಯನ್ನು ಇವರ ನಂತರದ ರಾಜರು ಮುಂದುವರಿಸಿದರು.

ರಾಜ ಒಡೆಯರ ನಂತರ ಆಳಿದ 5ನೇ ಚಾಮರಾಜ ಒಡೆಯರು (1617 – 1638) ಕಲೆಗಳಲ್ಲಿ ಪ್ರವೀಣರಾಗಿದ್ದರು. ಅದರಲ್ಲೂ ಸಂಗೀತಾಭ್ಯಾಸಿಗಳಾಗಿ ವೀಣಾ ವಾದಕರಾಗಿದ್ದರು. (ವೀಣೆದಳೆದು ಬಣ್ಣವಾದುಗಳಂ ಬಾಜಿಪೋಜೆ). ಇವರ ನಂತರದ ರಾಜರಾದ ಕಂಠೀರವ ನರಸರಾಜ ಒಡೆಯರು (1638 – 1659) ಸಂಗೀತ ಮತ್ತು ಸಾಹಿತ್ಯದಲ್ಲಿ ಪ್ರಾವೀಣ್ಯ ಪಡೆದು 'ಸಂಗೀತ ಸಾಹಿತ್ಯ ವಿಶಾರದ'ರೆಂಬ ಬಿರುದಾಂಕಿತರಾಗಿದ್ದರು. ಅವರ ಆಸ್ಥಾನ ಕವಿ ಗೋವಿಂದ ವೈದ್ಯನು ಆಸ್ಥಾನದ ವೈಭವವನ್ನು ವರ್ಣಿಸುತ್ತ ರಾಜಧಾನಿಯು ಸಂಗೀತ ಮತ್ತು ನೃತ್ಯದ ನಿನಾದದಿಂದ ಪ್ರತಿಧ್ವನಿಗೈಯ್ಯುತ್ತಿತ್ತು ಎಂದು ಹೇಳಿದ್ದಾನೆ. ಅವರ ನಂತರದ ಚಿಕ್ಕದೇವರಾಜ ಒಡೆಯರು (1672 – 1704) ಹಿಂದಿನ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದರು. ದರ್ಬಾರಿನ ಕಾರ್ಯಕ್ರಮದಲ್ಲಿ ಗಾಯನ, ವಾದ್ಯ ಸಂಗೀತ ಮತ್ತು ನೃತ್ಯ ಪ್ರಮುಖವಾಗಿದ್ದುವು. ಒಡೆಯರು ಕಲೆಯಲ್ಲಿ ಪ್ರವೀಣರಾಗಿದ್ದರು. ರಾಜರು ವೀಣೆಯ ವಾದನದಲ್ಲಿ ನಿಪುಣರಾಗಿದ್ದು 'ರಸಿಕಜನ ಕರ್ಣ ರಸಾಯನಾಕೃತ ಸಂಗೀತ ವಿಸ್ತರ' ಎಂಬ ಬಿರುದಿಗೆ ಅರ್ಹರಾಗಿದ್ದರು. ಅವರು ಕವಿ ಮತ್ತು ವಾಗ್ಗೇಯಕಾರರಾಗಿದ್ದರು. 'ಗೀತಗೋಪಾಲ ಮತ್ತು ಚಿಕ್ಕದೇವರಾಯ ಬಿನ್ನಪ'ಗಳನ್ನು ಅವರು ರಚಿಸಿದ್ದಾರೆ. "ಚಿಕ್ಕದೇವರಾಯ ಸಪ್ತಪದಿ" ಎಂಬುದು ಅವರ ಸಂಗೀತ ರೂಪಕ.

ಹೈದರಾಲಿ ಮತ್ತು ಟಿಪ್ಪುವು ಸಂಗೀತ ಪರಂಪರೆಯನ್ನು ಮುಂದುವರೆಸಿದರು. ಟಿಪ್ಪುವಿನ ಕಾಲದಲ್ಲಿ (1784) ಪಿಟೀಲು ಪ್ರಥಮ ಬಾರಿ, ತಿರುವಾಂಕೂರು ಮತ್ತು ತಮಿಳುನಾಡಿನಲ್ಲಿ ಪರಿಚಯವಾಗುವ ಮುನ್ನ ಪಕ್ಕವಾದ್ಯವಾಗಿ ಕರ್ನಾಟಕ ಸಂಗೀತದ ಭಾಗವಾಯಿತು.

# ಮುಮ್ಮಡಿ ಕೃಷ್ಣರಾಜ ಒಡೆಯರು (1799 – 1868)

ಟಿಪ್ಪುವಿನ ಪತನಾನಂತರ ಮೈಸೂರು ರಾಜ್ಯವನ್ನು ಒಡೆಯರ್ ವಂಶದವರಿಗೆ ಹಿಂದಿರುಗಿ ಕೊಡಲಾಯಿತು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ್ (1799 – 1868) ಮೈಸೂರಿನ ಮಹಾರಾಜರಾದರು. ಅವರು ಸಂಗೀತ, ನೃತ್ಯ ಮತ್ತು ಸಂಗೀತ ಶಾಸ್ತ್ರಗಳಲ್ಲಿ ಪರಿಣತರಾಗಿದ್ದರು. ಸಂಗೀತವನ್ನು ಕುರಿತು ಹಲವು ಗ್ರಂಥಗಳನ್ನು ರಚಿಸಿದರು. ಅವರು ಬರೆದಿರುವ 'ಸ್ವರ ಚೂಡಾಮಣಿ' ಎಂಬ ಗ್ರಂಥವು ಸಂಗೀತ ಸ್ವರಗಳ ವಿಜ್ಞಾನ ಮತ್ತು ಕಲೆಯನ್ನು ಕುರಿತಾದ ಸಂಗ್ರಹ ಗ್ರಂಥ. "ಶ್ರೀ ತತ್ವನಿಧಿ" ಎಂಬ ಮತ್ತೊಂದು ಗ್ರಂಥವು ಧ್ಯಾನ ಶ್ಲೋಕಗಳು, ಸುಂದರವಾದ ರಾಗ—ರಾಗಿಣಿ ಚಿತ್ರಗಳು, ಸಂಗೀತದ ವಿಷಯುವನ್ನು ಕುರಿತು ಅಧಿಕೃತವಾದ ವಿವರಣೆಗಳಿರುವ ಒಂದು ವಿಶ್ವಕೋಶ. ಅವರ ಮತ್ತೊಂದು ಗ್ರಂಥ 'ಭರತ ಸಾರ ಸಂಗ್ರಹ' ಎಂಬುದು ಭರತನಾಟ್ಯಶಾಸ್ತ್ರ ಮತ್ತು ಪ್ರಯೋಗವನ್ನು ಕುರಿತು ದೃಷ್ಟಾಂತಗಳಿರುವ ರಚನೆ. ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯನ್ನು ಕುರಿತು ಹಾಡುಗಳನ್ನು ಅವರು ರಚಿಸಿದ್ದಾರೆ.

# ಮೈಸೂರು ಸದಾಶಿವರಾಯರು (19ನೇ ಶತಮಾನ)

ಒಡೆಯರ್ ಅವರು ತಮ್ಮ ಕಾಲದ ಪ್ರಸಿದ್ಧ ಸಂಗೀತ ವಿದ್ವಾಂಸರನ್ನು ತಮ್ಮ ಆಸ್ಥಾನವನ್ನು ಅಲಂಕರಿಸುವಂತೆ ಮಾಡಿದರು. ಅವರಲ್ಲಿ ವೀಣಾ ವೆಂಕಟಸುಬ್ಬಯ್ಯನವರು ಮಹಾರಾಜರ ಸಂಗೀತದ ಗುರುವಾಗಿದ್ದರು. ಈ ವಿದ್ವಾಂಸರು 'ಸಪ್ತ ತಾಳೇಶ್ವರಿ ಗೀತಾ' ಎಂಬುದನ್ನು ರಚಿಸಿರುವರು. ವಾಗ್ಗೇಯಕಾರ ಹಾಗೂ ಘನ ವಿದ್ವಾಂಸರಾಗಿದ್ದ ಮೈಸೂರು ಸದಾಶಿವರಾಯರು ಮಹಾರಾಜರ ಆಸ್ಥಾನವನ್ನಲಂಕರಿಸಿದ್ದರು. ರಾಯರು ಶ್ಯಾಮಾಶಾಸ್ತ್ರಿ ಮತ್ತು ದೀಕ್ಷಿತರ ನಂತರ 19ನೇ ಶತಮಾನದ ಒಬ್ಬ ಮಹಾ ಸಂಗೀತ ವಿದ್ವಾಂಸರಾಗಿದ್ದರು. ಅವರ ಪ್ರಭಾವವು ಅಗಣಿತವಾದುದು.

ಮರಾಠದೇಶಸ್ಥ ಬ್ರಾಹ್ಮಣರಾದ ಗಣೇಶರಾವ್ ಮತ್ತು ಕೃಷ್ಣಬಾಯಿ ದಂಪತಿಗಳ ಪುತ್ರನಾಗಿ ಸದಶಿವರಾಯರು ಆಂಧ್ರ ಪ್ರದೇಶದ ಚಿತ್ತೂರಿನ ಒಂದು ಬಡಾವಣೆಯಾದ ಗ್ರೀಮ್ಸ್ ಪೇಟೆಯಲ್ಲಿ (ಇದಕ್ಕೆ ಗಿರಂಪೇಟೆ ಎಂದೂ ಹೆಸರು) ಜನ್ಮ ತಾಳಿದರು. ಅವರು ಯಾವ ವರ್ಷ ಅಥವಾ ದಿನ ಜನಿಸಿದರು ಎಂಬುದು ಖಚಿತವಾಗಿ ತಿಳಿದು ಬಂದಿಲ್ಲ. ಅವರು ಸುಮಾರು 80 ವರ್ಷಗಳಿದ್ದು 1885ರಲ್ಲಿ ಕಾಲವಾದರು. ಅಂದಮೇಲೆ ಅವರು 1800 – 1805ರ ಅವಧಿಯಲ್ಲಿ ಜನಿಸಿದರೆಂದು ಹೇಳಬಹುದು. ಇವರಿಗೆ ಒಬ್ಬ ತಮ್ಮ ಮಲ್ಲಾರಿರಾವ್ ಮತ್ತು ಒಬ್ಬ ತಂಗಿಯಿದ್ದರು.

ತಮ್ಮ 12ನೇ ವಯಸ್ಸಿನಲ್ಲಿ ರಾಯರು ಯಾರಿಗೂ ತಿಳಿಸದೆ ಮನೆಬಿಟ್ಟು ಹೋದರು. ಅವರು ಯಾವ ರೀತಿ ಜೀವನ ಮಾಡಿದರು ಮತ್ತು ವಿದ್ಯಾಭ್ಯಾಸ ಪಡೆದರು ಎಂಬುದು ಅಧಿಕೃತವಾಗಿ ತಿಳಿಯದಾಗಿದೆ. ಅವರು ಚಿತ್ತೂರು ಜಿಲ್ಲಾಧಿಕಾರಿಯ ಕಚೇರಿಯಲ್ಲಿ ಸ್ವಲ್ಪಕಾಲ ಗುಮಾಸ್ತರಾಗಿ ಕೆಲಸ ಮಾಡಿದರು. ಆರ್ಣಿ ಜಹಗೀರ್‌ದಾರರಾಗಿದ್ದ ತಿರುಮಲರಾವ್ ಸಾಹೇಬ್ ಎಂಬುವರ ಸಮೀಪದ ಬಂಧು ಸುಂದರಾಬಾಯಿಯವರೊಡನೆ ಇವರ ವಿವಾಹವಾಯಿತು.

ಅವರು ಎಲ್ಲಿ ಮತ್ತು ಯಾವಾಗ ಸಂಗೀತಾಭ್ಯಾಸ ಮಾಡಿದರು ಎಂಬುದನ್ನು ಕುರಿತು ಯಾವ ದಾಖಲೆಯೂ ಇಲ್ಲ. ತಮ್ಮ ಮನೆಯನ್ನು ಬಿಟ್ಟು ಹೊರಟು ಅವರು ವಾಲಾಜಪೇಟೆಗೆ ಹೋಗಿ ಅಲ್ಲಿಯ ಶಾಲೆಯನ್ನು ಸೇರಿರಬೇಕು. ವಾಲಾಜಪೇಟೆ ವೆಂಕಟರಮಣ ಭಾಗವತರ ಮನೆಯಲ್ಲಿರುವ ಒಂದು ಹಳೆಯ ಚಿತ್ರದಲ್ಲಿ ರಾಯರು ತಮ್ಮ ಗುರುವಿನ ಮುಂದೆ ಇತರ ಶಿಷ್ಯರೊಡನೆ ಕುಳಿತಿರುವುದು ಕಂಡು ಬರುತ್ತದೆ. ಸದ್ಗುರು ತ್ಯಾಗರಾಜಸ್ವಾಮಿಯ ಆತ್ಮೀಯ ಶಿಷ್ಯರಾದ ಭಾಗವತರಲ್ಲಿ ಇವರು ಸಂಗೀತ ಶಿಕ್ಷಣವನ್ನು ಪಡೆದರೆಂದು ತಿಳಿಯಬಹುದು. ತ್ಯಾಗರಾಜರು ತಮ್ಮ ತೀರ್ಥಯಾತ್ರೆಯ ಸಮಯದಲ್ಲಿ ಪೇಟೆಗೆ ಭೇಟಿಯಿತ್ತು ಅಲ್ಲಿ ಹನ್ನೆರಡು ದಿನಗಳು ಬಿಡಾರ ಮಾಡಿದರು. ಸದಾಶಿವರಾಯರು ವಾಲಾಜಪೇಟೆಗೆ ಪ್ರಯಾಣ ಮಾಡಿ, ತ್ಯಾಗರಾಜಸ್ವಾಮಿಯು ವಾಲಾಜಪೇಟೆಯನ್ನು ಪ್ರವೇಶಿಸಿದ ಸಂದರ್ಭದಲ್ಲಿ 'ತ್ಯಾಗರಾಜಸ್ವಾಮಿ ವೆಡಲಿನ' ಎಂಬ ತೋಡಿ ರಾಗದ ಕೃತಿಯನ್ನು

ರಚಿಸಿ, ಆ ಮಹಾಪುರುಷರ ಸಮ್ಮುಖದಲ್ಲಿ ಹಾಡಿದರು. ಇದರಿಂದ ಸಂಪ್ರೀತರಾಗಿ ರಾಯರನ್ನು ಅವರು ಹರಸಿದರು.

ಮೈಸೂರಿನ ಶ್ರೀಮಂತ ಸಹೋದರರೂ ಹಾಗೂ ವ್ಯಾಪಾರಿಗಳೂ ಆಗಿದ್ದ ಕುಪ್ಪರಂ ಚಿನ್ನಸ್ವಾಮಿಶೆಟ್ಟಿ ಮತ್ತು ಪೆದ್ದ ಮುನಿಸ್ವಾಮಿ ಅವರುಗಳು ರಾಯರನ್ನು ಮೈಸೂರಿಗೆ ಕರೆತಂದು ಮಹಾರಾಜ ಕೃಷ್ಣರಾಜ ಒಡೆಯರಿಗೆ ಪರಿಚಯ ಮಾಡಿಕೊಟ್ಟರು. ರಾಯರ ವಿದ್ವತ್ತು, ವಾಗ್ಗೇಯ ಪ್ರತಿಭೆ, ಸಂಗೀತದ ಘನತೆಯನ್ನು ಮೆಚ್ಚಿ ಅವರನ್ನು ತಕ್ಷಣವೇ ಮಹಾರಾಜರು ತಮ್ಮ ಆಸ್ಥಾನದ ಪ್ರಮುಖ ವಿದ್ವಾಂಸರಾಗಿ ನೇಮಿಸಿದರು. ಅಲ್ಲಿಂದ ಮುಂದೆ ರಾಯರು ಮೈಸೂರಿನಲ್ಲೇ ನೆಲೆಸಿದರು. ಮೈಸೂರು ಸದಾಶಿವರಾಯರೆಂಬ ಹೆಸರು ಬಂದಿತು. ಆಗ ರಾಯರಿಗೆ ಸುಮಾರು 30 ವರ್ಷ.

ಊರನ್ನು ಬಿಟ್ಟು ಬರುವಾಗ ಗ್ರೀವ್ಸ್ ಪೇಟೆಯಲ್ಲಿದ್ದ ತಮ್ಮ ಮನೆಯನ್ನು ರಾಯರು ಒಬ್ಬ ಬಡಬ್ರಾಹ್ಮಣನಿಗೆ ದಾನವಾಗಿ ಕೊಟ್ಟುಬಿಟ್ಟರು. ರಾಜರ ಪೋಷಣೆ, ಶ್ರೀಮಂತರಾದ ಶಿಷ್ಯರು ಮತ್ತು ವರ್ತಕರು ಹಾಗೂ ಮೆಚ್ಚಿಕೊಂಡವರು --- ಇದರಿಂದ ರಾಯರಿಗೆ ಜೀವನ ಮಾಡಲು ಯಾವ ಕೊರತೆಯೂ ಇರಲಿಲ್ಲ. ಅರ್ಹವಾದ ವಿಷಯಗಳಿಗೆ ರಾಯರು ಬಹಳ ಉದಾರವಾಗಿ ಖರ್ಚು ಮಾಡುತ್ತಿದ್ದರು. ಪ್ರತಿದಿನ ಮಧ್ಯಾಹ್ನದ ಊಟದ ವೇಳೆಯಲ್ಲಿ ಶ್ರೀರಾಮಪೇಟೆಯಲ್ಲಿದ್ದ ತಮ್ಮ ಮನೆ ಬಾಗಿಲ ಬಳಿ ಬೀದಿಗೆ ಅಭಿಮುಖವಾಗಿ ನಿಂತು ದಾರಿಯಲ್ಲಿ ಹೋಗುತ್ತಿದ್ದ ಬ್ರಾಹ್ಮಣರನ್ನು ತಮ್ಮೊಂದಿಗೆ ಭೋಜನ ಮಾಡಲು ಪ್ರಾರ್ಥಿಸಿ ಆಹ್ವಾನಿಸುತ್ತಿದ್ದರು. ಅನೇಕ ಶಿಷ್ಯರು, ಬ್ರಾಹ್ಮಣರು ಮತ್ತು ಆಶ್ರಿತರೊಂದಿಗೆ ಭೋಜನ ಮಾಡುವುದರಿಂದ ರಾಯರಿಗೆ ಬಹಳ ತೃಪ್ತಿಯಾಗುತ್ತಿತ್ತು. ಅವರ ಔದಾರ್ಯ ಮನೋಧರ್ಮ ಲೋಕಪ್ರಸಿದ್ಧವಾಗಿತ್ತು. ಅವರು ಉದಾರಿಗಳೂ ಸರಳ ಸ್ವಭಾವದವರೂ ಆಗಿದ್ದರು.

ರಾಯರು ನರಸಿಂಹದೇವರ ಉಪಾಸಕರಾಗಿದ್ದರು. ಪವಾಡದಂತೆ ತೋರುವ ಅನೇಕ ಘಟನೆಗಳು ಅವರ ಅಕಾಲಿಕ ಶಕ್ತಿಯನ್ನು ತೋರಿಸುತ್ತದೆ. ರಾಯರು ಒಂದು ಸಲ ಕಾಂಭೋಜಿ ರಾಗದ ''ಸಾಮ್ರಾಜ್ಯದಾಯಕೇಶ' ಎಂಬ ಕೃತಿಯನ್ನು ಹಾಡುತ್ತಿದ್ದಾಗ ಜರುಗಿದ ಒಂದು ಘಟನೆಯನ್ನು ಅವರ ಪ್ರಮುಖ ಶಿಷ್ಯರು ಆಗಾಗ್ಗೆ ಹೇಳುತ್ತಿದ್ದರು. ಅವರು ಹಾಡುತ್ತಿದ್ದಾಗ ಒಂದು ಸರ್ಪವು ಎಲ್ಲಿಂದಲೋ ಬಂದು ಅವರ ತೋಳಿಗೆ ಸುತ್ತಿಕೊಂಡು ಭುಜದ ಮೇಲೆ ಹೆಡೆಯನ್ನು ಬಿಚ್ಚಿತು. ರಾಯರು ಇದರ ಯಾವ ಪರಿಜ್ಞಾನವೂ ಇಲ್ಲದೆ ಮೈಮರೆತು ಹಾಡುತ್ತಿದ್ದರು. ಆ ಸರ್ಪವು ಹೊರಟು ಹೋದಮೇಲೆ ಅವರಿಗೆ ಶಿಷ್ಯರು ತಿಳಿಸಿದಾಗಲೇ ತಿಳಿದದ್ದು. ರಾಯರು ಮೋಹನರಾಗದ 'ಪೆದ್ದದೇವೂಡನಿ' ಎಂಬ ಕೃತಿಯನ್ನು ಹಾಡಿದಾಗ ದೀಪಗಳು ಹೆಚ್ಚು ಕಡಿಮೆ ಆಗುತ್ತಿದ್ದುವು ಎಂದು ತಮಗೆ ಒಬ್ಬ ವೃದ್ಧೆ ಹೇಳಿದ್ದನ್ನು ಬಿಡಾರಂ ಕೃಷ್ಣಪ್ಪನವರು ಆಗಾಗ್ಗೆ ಸ್ಮರಿಸಿಕೊಳ್ಳುತ್ತಿದ್ದರು.

ಮೈಸೂರಿನಲ್ಲಿ ಶ್ರೀರಾಮೋತ್ಸವವನ್ನು ಆಚರಿಸಲು ಪ್ರಾರಂಭಿಸಿದವರು

ಸದಾಶಿವರಾಯರು. ಸೀತಾರಾಮಸ್ವಾಮಿಯ ಪಟವಿದ್ದ ಮರದ ಮಂಟಪವು ಇಂದಿಗೂ ಮೈಸೂರಿನ ಕನ್ಯಕಾಪರಮೇಶ್ವರಿ ದೇವಾಲಯದಲ್ಲಿದೆ.

ಕರ್ನಾಟಕ ಸಂಗೀತಕ್ಕೆ ಸದಾಶಿವರಾಯರ ಕೊಡುಗೆ ಅಮೂಲ್ಯವಾದುದು. ಅವರು ಅದ್ಭುತ ಶಕ್ತಿಯುಳ್ಳ ಮಹಾ ಸಂಗೀತ ವಿದ್ವಾಂಸರಾಗಿದ್ದರು. ಅವರ ರಚನೆಗಳಲ್ಲಿ ಧಾತು ಮತ್ತು ಮಾತು ಸಹಜವಾಗಿ ಮೇಳೈಸಿವೆ. ಅವರು ತಮ್ಮ ಹೆಸರಾದ 'ಸದಾಶಿವ' ಎಂಬ ಮುದ್ರೆಯೊಡನೆ ಕವಿ, ಆರ್ತಿಹರ, ಭಾಗದೇಯ, ಭಯಹರ ಇತ್ಯಾದಿ ಉಪಸರ್ಗ ಮತ್ತು ಪ್ರತ್ಯಯಗಳನ್ನು ಒಳಗೊಂಡಂತೆ ಕೃತಿಗಳನ್ನು ರಚಿಸಿದರು. ಬಲಹಂಸ, ಕಮಲಾಮನೋಹರಿ, ಗಂಭೀರನಾಟ, ಪೂರ್ಣಷಡ್ಜ, ಪುನ್ನಾಗತೋಡಿ ಮತ್ತು ಚಂದ್ರಚೂಡ ರಾಗಗಳಲ್ಲಿರುವ ಅವರ ಕೃತಿಗಳು ಬಹಳ ಅಪರೂಪವಾದುವು. ಅವರು ತೆಲುಗು ಮತ್ತು ಸಂಸ್ಕೃತದಲ್ಲಿ ಕೃತಿ ರಚನೆ ಮಾಡಿದ್ದಾರೆ. ಅವರ ಧನ್ಯಾಸಿರಾಗದ ಪದ ವರ್ಣವು ಬಹಳ ಪ್ರಸಿದ್ಧವಾಗಿದೆ. 'ಏ ಮಗುವಾ' ಎಂಬುದು ಒಂದು ಸ್ವರಜತಿ. ತಮ್ಮ ಹಲವು ರಚನೆಗಳಲ್ಲಿ ದಾಟು ಸ್ವರ ಪ್ರಯೋಗಗಳನ್ನು ಜಟಿಲವಾದ ಸ್ಥಾಯಿಭೇದಗಳನ್ನು ಬಳಸಿದ್ದಾರೆ. ಅವರ ಸಂಗೀತವು ಸಾಹಿತ್ಯದ ರಸ ಮತ್ತು ಭಾವದ ಸೊಗಸಾದ ಮಧುರ ಸಮ್ಮಿಳನ. ಇವು ಯತಿ, ಗಣ ಮತ್ತು ಪ್ರಾಸಗಳ ನಿಯಮಗಳಿಗೆ ಬದ್ಧವಾಗಿವೆ. ಅವರ ಕೆಲವು ರಚನೆಗಳಲ್ಲಿರುವ ಚಿಟ್ಟೆಸ್ವರಗಳು, ಸ್ವರ ಸಾಹಿತ್ಯವು ಅವರ ಕಲ್ಪನಾಶಕ್ತಿಯನ್ನು ಪ್ರತಿಬಿಂಬಿಸುತ್ತವೆ. 'ಸಾಕೇತ ನಗರನಾಥ' (ಹರಿಕಾಂಭೋಜಿ), 'ಸಾಮರಾಜ್ಯ ದಾಯಕೇಶ' (ಕಾಂಭೋಜಿ), 'ವಾಚಾಮಗೋಚರುಂಡನಿ' (ಅಠಾಣ), 'ಪರಮಾದ್ಭುತ' (ಖಮಾಚ್). 'ಶ್ರೀಪಾರ್ಥಸಾರಥೇ (ಭೈರವಿ), 'ಎವರುನ್ನಾರು' ಮತ್ತು 'ನಿನುವಿನಾಗತಿ' (ಬಲಹಂಸ), ''ಶ್ರೀಕಾಮಕೋಟಿ ಪೀಠಸ್ಥಿತೇ' (ಸಾವೇರಿ), 'ಪೂಲುಚೆಲ್ಲರೇ' (ಆನಂದಭೈರವಿ), 'ರಾಮಾನಿನು' (ಶಂಕರಾಭರಣ), 'ದೊರಕೆನುನೇಡು' (ದೇವಗಾಂಧಾರಿ), 'ಗಂಗಾಧರ' (ಪೂರ್ವಿಕಲ್ಯಾಣಿ) ಮುಂತಾದುವು ಅವರ ಕೆಲವು ಪ್ರಸಿದ್ಧವಾದ ಕೃತಿಗಳು. ಪಳನಿಯ ಶ್ರೀವೇಲಾಯುಧ ಸ್ವಾಮಿಯನ್ನು ಕುರಿತಾದ 'ಶ್ರೀರಮಣನೀವೇ (ಪೂರ್ಣಷಡ್ಜ) ''ಶ್ರೀ ಸುಬ್ರಮಣ್ಯ'' (ಕಾಂಭೋಜಿ), ಭವಾನಿಯ ಶ್ರೀಲಕ್ಷ್ಮಿರಮಣಸ್ವಾಮಿಯನ್ನು ಕುರಿತಾದ 'ಶ್ರೀಲಕ್ಷ್ಮೀರಮಣ' (ಭೈರವಿ), ವಾಲಾಜಪೇಟೆ ಭಜನಮಂದಿರಕ್ಕೆ ಶ್ರೀಕೋದಂಡಸ್ವಾಮಿಯ ಮೂರ್ತಿಯನ್ನು ಬಿಜಮಾಡಿಸಿದ ಸಂದರ್ಭಕ್ಕೆ ಸೇರಿದ 'ಶ್ರೀ ಸೀತಾ ಲಕ್ಷ್ಮಣ ಸಮೇತ' ಕಾಂಭೋಜಿ ಎಂಬ ಕೃತಿಗಳೂ ಈ ರಚನೆಗಳ ಸಾಹಿತ್ಯ ಮಾತ್ರ ದೊರಕಿವೆ. ವರ್ಣ ಮಟ್ಟುಗಳು ದೊರಕಿಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರು ನಡೆಸಿದ ವಿಷ್ಣುವಿನ ಪೂಜೆಯನ್ನು ಕುರಿತು ಮೆಚ್ಚಿ ರಾಯರು ದೇವಗಾಂಧಾರಿ ರಾಗದಲ್ಲಿ 'ದೊರಕೆನುನೇಡು ಶ್ರೀಕೃಷ್ಣುಡು' ಎಂಬ ಕೃತಿಯನ್ನು ರಚಿಸಿ ಹಾಡಿದರೆಂದು ಪ್ರತೀತಿ.

ರಾಯರಿಗೆ ಶಿಷ್ಯರು ಅನೇಕ. ವೀಣಾ ಶೇಷಣ್ಣ, ವೀಣಾ ಸುಬ್ಬಣ್ಣ, ಬೆಟ್ಟದಪುರ ಶ್ಯಾಮಣ್ಣ, ಚಿಕ್ಕನಾಯಕನ ಹಳ್ಳಿ ವೆಂಕಟೇಶಯ್ಯ, ಗಂಜಾಂ ಸೂರ್ಯನಾರಾಯಣ ಮುಂತಾದವರು ಅವರ ಪ್ರಮುಖ ಶಿಷ್ಯರು.

ರಾಯರ ವಂಶೀಕರಲ್ಲಿ ಯಾರಿಗೂ ಅವರ ಸಂಗೀತ ಕಲೆ ಬರಲಿಲ್ಲ. ಅವರ ದೌಹಿತ್ರ ರಾಮರಾವ್ ಎಂಬುವರು ಪ್ರತಿಭಾ ಸಂಪನ್ನರಾದ ರಂಗಭೂಮಿ ನಟರಾಗಿ ಸರ್ಟೆನ್ (ಕರ್ಟೆನ್ ಪದದ ಅಪಭ್ರಂಶ) ರಾಮರಾವ್ ಎಂದು ಪ್ರಸಿದ್ಧರಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರು ಒಂದು ನಿಧಿಯನ್ನು ಸ್ಥಾಪಿಸಿದರು. ರಾಯರ ತರುವಾಯ ಅವರ ಪತ್ನಿ ಸುಂದರಾಬಾಯಿ, ತರುವಾಯ ಅವರ ಕಿರಿಯ ಸೊಸೆ ರಾಧಾಬಾಯಿ ಅವರ ನಂತರ ಅವರ ಹಿರಿಯ ಪುತ್ರ ಸದಾಶಿವರಾವ್ ಮತ್ತು ಅವರ ಎರಡನೆಯ ಸಹೋದರ ಸುಂದರರಾವ್, ಆಮೇಲೆ ಅವರ ಮೂರನೆಯ ಸಹೋದರ ಆನಂದರಾವ್ ಈ ನಿಧಿಯಿಂದ ನಿವೃತ್ತಿ ವೇತನ ಪಡೆಯುತ್ತಿದ್ದರು.

ಸದಾಶಿವರಾಯರ ರಚನೆಗಳಲ್ಲಿ ಮೂವತ್ತೈದನ್ನು ಸ್ವರ - ಲಿಪಿ ಸಹಿತ ಮತ್ತು ಇತರ 12ಕೃತಿಗಳ ಸಾಹಿತ್ಯವನ್ನುಳ್ಳ ''ಮೈಸೂರು ಸದಾಶಿವರಾಯರ ಕೃತಿಗಳು' ಎಂಬ ಗ್ರಂಥವನ್ನು ಮೈಸೂರಿನ ಸಂಗೀತ ಕಲಾಭಿವರ್ಧಿನಿ ಸಭೆಯು ಪ್ರಕಟಿಸಿದೆ. ರಾಯರ ಉಳಿದ ರಚನೆಗಳನ್ನು ಬೆಳಕಿಗೆ ತರಬೇಕಾಗಿದೆ.

ರಾಯರಿಗೆ ತಮ್ಮ ಇಹಲೋಕದ ಅಂತಿಮ ದಿನವು ಮೊದಲೇ ತಿಳಿದಿತ್ತೆಂದು ತೋರುತ್ತದೆ. ತಮ್ಮ ಕೊನೆಯ ದಿನ ಪ್ರಾತಃಕಾಲದ ವಿಧಿಗಳನ್ನು, ಪೂಜೆಯನ್ನು ಪೂರೈಸಿ, ಉತ್ತರಾಭಿಮುಖವಾಗಿ ಒಂದು ಕುರ್ಚಿಯಲ್ಲಿ ಕುಳಿತರು. ತಮ್ಮ ಪತ್ನಿಯಿಂದ ಒಂದು ಚಮಚ ತುಪ್ಪವನ್ನು ಪಡೆದು, 'ವಸಂತರಾಗ'ದ 'ಕಮಲಾಕಾಂತ ಶ್ರೀಕೃಷ್ಣನಾಥ' ಎಂಬ ಹಾಡನ್ನು ಮೆಲ್ಲನೆ ಹಾಡಿಕೊಳ್ಳುತ್ತಾ ಆ ತುಪ್ಪವನ್ನು ತಲೆಯ ಮೇಲೆ ಉಜ್ಜಿಕೊಂಡರು. ಶ್ವಾಸವನ್ನು ಬಂಧಿಸಿದರು ಮತ್ತು ಶಾಂತವಾಗಿ ಭಗವಂತನಲ್ಲಿ ಲೀನವಾದರು. ಆಗ ಅವರ ಮನೆಯಲ್ಲಿದ್ದ ತಂಬೂರಿ ಮತ್ತು ಇತರ ಸಂಗೀತ ವಾದ್ಯಗಳು ರಾಯರ ಪರಮಪದ ಯಾತ್ರೆಯನ್ನು ಸೂಚಿಸುತ್ತಿವೆಯೇನೋ ಎಂಬಂತೆ ತಮಗೆ ತಾವೇ ಧ್ವನಿ ಮಾಡಿದುವು!!

## ಮೂಗೂರು ಸುಬ್ಬಣ್ಣ

ಸುಬ್ಬಣ್ಣನವರು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದರು. ಇವರು ಹಲವು ಸ್ವರಜತಿಗಳು, ವರ್ಣಗಳು ಮತ್ತು ಕೃತಿಗಳನ್ನು ರಚಿಸಿರುವರೆಂದು ತಿಳಿದು ಬರುತ್ತದೆ.

## ವೀಣಾ ಕೃಷ್ಣಯ್ಯ

ಕೃಷ್ಣಯ್ಯನವರು ಪ್ರಸಿದ್ಧ ವೈಣಿಕರೂ, ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರೂ ಆಗಿದ್ದರು. ಭೈರವಿ ರಾಗದ ಪ್ರಸಿದ್ಧ ವರ್ಣ 'ವಿರಿಬೋಣಿ'ಯ ವಾಗ್ಗೇಯಕಾರರಾದ ಪಚ್ಚಿಮಿರಿಯಾ ಆದಿ ಅಪ್ಪಯ್ಯನವರ ಪುತ್ರರು. ಏಳು ಸುಳಾದಿ ಸಪ್ತ ತಾಳಗಳಲ್ಲಿ ಹಾಡಬಹುದಾದ ''ಸಪ್ತತಾಳೇಶ್ವರಂ' ಎಂಬುದು ಇವರ ವಿಶಿಷ್ಟವಾದ ರಚನೆ. ಇದನ್ನು ಏಳು ಮಂದಿ ಗಾಯಕರು ಒಬ್ಬೊಬ್ಬರು ಒಂದೊಂದು ಸುಳಾದಿ ತಾಳದಲ್ಲಿ ಹಾಡುತ್ತಾ ತಾಳಗಳ ಕೊನೆಯ ಆವರ್ತನದಲ್ಲಿ ಒಂದಾಗಿ ಹಾಡಬಹುದಾಗಿದೆ. ನೆರವಲ್ ಮತ್ತು ಸ್ವರ ಕಲ್ಪನೆಯನ್ನು ಯಾವ ತಾಳದಲ್ಲಿ ಹಾಡಿದರೂ, ಸಂಗೀತವು ಆ ತಾಳಕ್ಕೆ ಮೇಳೈಸಿಕೊಳ್ಳುತ್ತದೆ.

# ವೀಣಾ ಶೇಷಣ್ಣ (1852 – 1926)

ವೈಣಿಕ ಶಿಖಾಮಣಿ ವೀಣಾ ಶೇಷಣ್ಣನವರು ಅವರ ಕಾಲದ ಬಹುಖ್ಯಾತರಾದ ವೈಣಿಕರಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದ ವೀಣಾ ಭಕ್ಷಿಯಾಗಿದ್ದ ಚಿಕ್ಕರಾಮಪ್ಪನವರ ಪುತ್ರರಾಗಿ ಜನಿಸಿದರು. ಇವರು ಮಾಧ್ವ ಬ್ರಾಹ್ಮಣ ಮನೆತನದವರು. ಮಾತಾಪಿತೃಗಳ ವಂಶಗಳೆರಡೂ ಸಂಗೀತಕ್ಕೆ ತೌರುಮನೆಯಾಗಿದ್ದುವು. ಆದಿ ಅಪ್ಪಯ್ಯನವರು ಇವರ ವಂಶದ ಮೂಲ ಪುರುಷರು. ಶೇಷಣ್ಣನವರು ಪ್ರಾರಂಭದಲ್ಲಿ ತಮ್ಮ ತಂದೆಯವರಿಂದ ಸಂಗೀತ ಶಿಕ್ಷಣ ಪಡೆದರು. ಕೇವಲ 10 ವರ್ಷದ ಬಾಲಕನಾಗಿದ್ದಾಗಲೇ ಎಲ್ಲಾ ವಿದ್ವಾಂಸರು ಮತ್ತು ಮಹಾರಾಜರ ಸಮ್ಮುಖದಲ್ಲಿ ಪಲ್ಲವಿಯೊಂದನ್ನು ಹಾಡಿ ಎಲ್ಲರನ್ನೂ ವಿಸ್ಮಯಗೊಳಿಸಿದರು. ಮಹಾರಾಜರು ಇವರಿಗೆ ಅಮೋಘವಾದ ಸನ್ಮಾನವನ್ನಿತ್ತರು. 16ನೇ ವಯಸ್ಸಿನಲ್ಲಿ ಇವರಿಗೆ ಪಿತೃ ವಿಯೋಗವಾಯಿತು. ಪ್ರೌಢ ವೀಣಾ ಪಾಠವನ್ನು ತಮ್ಮ ತಂದೆಯವರ ಸಮೀಪ ಬಂಧುವಾಗಿದ್ದ ದೊಡ್ಡ ಶೇಷಣ್ಣನವರಲ್ಲೂ, ತ್ಯಾಗರಾಜರ ಕಿರಿಯ ಸಮಕಾಲೀನರೂ ಪ್ರಶಿಷ್ಯರೂ ಆಗಿದ್ದ ಮೈಸೂರು ಸದಾಶಿವರಾಯರಲ್ಲಿ ಹಾಡುಗಾರಿಕೆಯನ್ನು ಮುಂದುವರಿಸಿದರು.

ಶೇಷಣ್ಣನವರು ತಮ್ಮ 26ನೇ ವಯಸ್ಸಿನಲ್ಲಿ ದಕ್ಷಿಣ ಭಾರತದಲ್ಲೆಲ್ಲಾ ಹಲವು ರಾಜರ, ಮಠಾಧಿಪತಿಗಳ, ಜಹಗೀರುದಾರರ ಸಮ್ಮುಖದಲ್ಲೂ, ಸಭೆಗಳಲ್ಲೂ ತಮ್ಮ ವೀಣಾ ಕಚೇರಿಗಳನ್ನು ಮಾಡಿ ಸಂಗೀತ ಪ್ರಪಂಚದ ಮೆಚ್ಚುಗೆಗೆ ಪಾತ್ರರಾಗಿ ಖ್ಯಾತರಾದರು. ಮಹಾರಾಜ ಚಾಮರಾಜ ಒಡೆಯರು ಇವರನ್ನು ತಮ್ಮ ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿ ಗೌರವಿಸಿದರು. ಮುಂದಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ತಾವು ಸಿಂಹಾಸನಾರೋಹಣ ಮಾಡಿದ ಮೂರನೆಯ ದಿನವೇ ವಿಶೇಷ ದರ್ಬಾರನ್ನು ನಡೆಸಿ ಇವರಿಗೆ 'ವೈಣಿಕ ಶಿಖಾಮಣಿ' ಎಂಬ ಬಿರುದನ್ನಿತ್ತು ಗೌರವಿಸಿದರು.

ಶೇಷಣ್ಣನವರು ಒಬ್ಬ ಮಹಾಪ್ರತಿಭಾವಂತ ವೈಣಿಕರಾಗಿದ್ದರು. ಅವರು ತಮ್ಮ ವೀಣೆಯಿಂದ ಹೊರಹೊಮ್ಮಿಸುತ್ತಿದ್ದ ರಾಗ, ಭಾವ ಮತ್ತು ಸ್ವರಸಂಯೋಗ, ಕಲ್ಪನಾಸ್ವರ, ನೆರವಲ್ ಮುಂತಾದ ಮನೋಧರ್ಮ ಸಂಗೀತದ ಎಲ್ಲಾ ಭಾಗಗಳಲ್ಲೂ ತಮ್ಮದೇ ಸೃಜನ ಶೀಲತೆಯಿಂದ, ಶೈಲಿಯಿಂದ ಸಭಿಕರನ್ನು ಮುಗ್ಧರನ್ನಾಗಿ ಮಾಡುತ್ತಿದ್ದರು. ಅವರ ಕಛೇರಿಯು ನಾಲ್ಕು ಗಂಟೆಗಳಿಗೆ ಕಡಿಮೆ ಇರುತ್ತಿರಲಿಲ್ಲ. ಹೆಚ್ಚು ಕಾಲವನ್ನು ರಾಗ, ತಾನ ಮತ್ತು ಪಲ್ಲವಿಗಳಿಗಾಗಿ ವಿನಿಯೋಗಿಸುತ್ತಿದ್ದರು. ಇವರು 10 – 15 ಕೃತಿಗಳಿಗಿಂತ ಹೆಚ್ಚಾಗಿ ನುಡಿಸುತ್ತಿರಲಿಲ್ಲ. ಶ್ರೋತೃಗಳಿಗೆ ಸುಲಭವಾಗಿ ಗುರುತಿಸಲು ಸಾಧ್ಯವಾಗುವ 4 – 5 ರಾಗಗಳಲ್ಲಿ ಪಲ್ಲವಿ ನುಡಿಸುತ್ತಿದ್ದರು. ತಾಳಗಳಲ್ಲಿ ತ್ರಿಶ್ರತ್ರಿಪುಟ, ಚತುರಶ್ರತ್ರಿಪುಟ ಮತ್ತು ರೂಪಕ ತಾಳಗಳೇ ಅವರಿಗೆ ಹೆಚ್ಚು ಪ್ರಿಯವಾದುವುಗಳು. ಕಛೇರಿಯ ಮುಕ್ತಾಯಕ್ಕೆ ಮುನ್ನ ದೇಶೀ ರಾಗಗಳನ್ನು ನುಡಿಸಿ ಶ್ರೋತೃಗಳು ಆನಂದಪರವಶರಾಗುವಂತೆ ಮಾಡುತ್ತಿದ್ದರು. ಜಾವಳಿ ಅಥವಾ ದೇವರ ನಾಮವನ್ನು ನುಡಿಸಿ ಕಛೇರಿಯನ್ನು

ಮುಕ್ತಾಯಗೊಳಿಸುತ್ತಿದ್ದರು. ಅವರು ಕೇವಲ ವೈಣಿಕರು ಮಾತ್ರವೇ ಅಲ್ಲ, ಪಿಟೀಲು, ಪಿಯಾನೋ, ಜಲತರಂಗ್ ಹಾಗೂ ಸ್ವರಬತ್ ವಾದನಗಳನ್ನು ನುಡಿಸುವುದರಲ್ಲಿಯೂ ಪ್ರವೀಣರಾಗಿದ್ದರು. ತಮ್ಮ ಮನೆಯಲ್ಲಿ ಪ್ರತಿವರ್ಷವೂ ಕೃಷ್ಣೋತ್ಸವವನ್ನು ವೈಭವದಿಂದ ನೆರವೇರಿಸುತ್ತಿದ್ದರು. ಸ್ಥಳ ಮತ್ತು ಪರಸ್ಥಳದ ಸುಪ್ರಸಿದ್ಧ ವಿದ್ವಾಂಸರು ಚಿರಸ್ಮರಣೀಯವಾದ ಸಂಗೀತ ಸೇವೆಯನ್ನು ಸಲ್ಲಿಸಿ ತಾವೂ ಕೃತಾರ್ಥರಾಗುತ್ತಿದ್ದುದಲ್ಲದೆ ಶ್ರೋತೃಗಳನ್ನೂ ಕೃತಾರ್ಥರನ್ನಾಗಿ ಮಾಡುತ್ತಿದ್ದರು. ಅವರ ಗೃಹವು ಪವಿತ್ರವಾದ ಸಂಗೀತ ಕ್ಷೇತ್ರದಂತೆ ಭಾಸವಾಗುತ್ತಿತ್ತು.

ಶೇಷಣ್ಣನವರು ಕೇವಲ ವೈಣಿಕರಾಗಿದ್ದುದಲ್ಲದೆ ವಾಗ್ಗೇಯಕಾರರೂ ಆಗಿದ್ದರು. ಸುಮಾರು 53 ಬೇರೆ ಬೇರೆ ರೀತಿಯ ರಚನೆಗಳನ್ನು ಕರ್ನಾಟಕ ಮತ್ತು ಹಿಂದುಸ್ಥಾನಿ ರಾಗಗಳಲ್ಲಿ ರಚಿಸಿದ್ದಾರೆ. ಇವುಗಳನ್ನು ಮೈಸೂರಿನ ಸಂಗೀತ ಕಲಾಭಿವರ್ಧಿನಿ ಸಭೆಯು 1965ರಲ್ಲಿ ಗ್ರಂಥ ರೂಪದಲ್ಲಿ ಹೊರತಂದಿದೆ. ಇವರ ರಚನೆಗಳಲ್ಲಿ ಸ್ವರಜತಿ, ವರ್ಣಕೃತಿ ಮತ್ತು ತಿಲ್ಲಾನಗಳಿವೆ. ಪ್ರತಿಯೊಂದು ರಚನೆಯೂ ಒಂದೊಂದು ಹಿನ್ನೆಲೆಯಿಂದ ಕೂಡಿರುತ್ತದೆ. ಹೆಚ್ಚಿನ ರಚನೆಗಳು ಚಾಮರಾಜ ಅಥವಾ ಕೃಷ್ಣರಾಜ ಎಂಬ ಅಂಕಿತದಿಂದ ಕೂಡಿ ಮಹಾರಾಜರುಗಳಿಗೆ ಅರ್ಪಿಸಲ್ಪಟ್ಟಿವೆ. ಇದಕ್ಕಾಗಿ ದೊರೆಗಳು ಇವರಿಗೆ ದ್ರವ್ಯವೇ ಮುಂತಾದ ಹಲವು ರೀತಿಯ ಸಂಭಾವನೆಗಳನ್ನು ನೀಡುತ್ತಿದ್ದರು. ಶೇಷಣ್ಣನವರು ಚಾಮರಾಜ ಒಡೆಯರು ಮತ್ತು ಕೃಷ್ಣರಾಜ ಒಡೆಯರು ಇಬ್ಬರಿಗೂ ವೀಣಾ ಗುರುವಾಗಿದ್ದರು. ಇವರ ರಚನೆಗಳಲ್ಲಿ ಇರುವ ಸ್ವನಾಮ ಮುದ್ರೆಯು ''ಶೇಷದಾಸ' ಎಂಬುದು. ''ಶೇಷಗಿರೀಶ'', ''ಶೇಷಾದ್ರೀಶ'', ''ಶೇಷ'', ''ಶೇಷ ಶಯನ'', ''ಶೇಷಾದ್ರಿ'' ಇತ್ಯಾದಿಗಳೂ ಅವರ ಇನ್ನಿತರ ಅಂಕಿತಗಳಾಗಿವೆ. ಇವರ ತಿಲ್ಲಾನಗಳು ಸುಪ್ರಸಿದ್ಧವಾದುವು. ದಾಟು ಸ್ವರಗಳ ಸಂಯೋಜನೆ, ಭಾವಪೂರಿತವಾದ ಅಪರೂಪ ಸಂಚಾರಗಳು, ಸರಳವಾಗಿ ಕಂಡರೂ ಸರಳವಲ್ಲದ ತಾಳದ ಬಿಕ್ಕಟ್ಟು ಇವುಗಳೆಲ್ಲವೂ ಬಹಳ ಉನ್ನತ ಮಟ್ಟದ್ದಾಗಿವೆ. ಸಾಮಾನ್ಯವಾದ ತಾಳಗಳನ್ನು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಬಳಸುತ್ತಿದ್ದರು. ಅವರ ರಚನೆಗಳು ಹೆಚ್ಚಾಗಿ ತೆಲುಗಿನಲ್ಲಿವೆ. ಕೆಲವು ಕನ್ನಡದಲ್ಲಿವೆ.

ಶೇಷಣ್ಣನವರ ಅನೇಕ ಶಿಷ್ಯರಲ್ಲಿ ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರು, ಶರ್ಮಾದೇವಿ, ಸುಬ್ರಹ್ಮಣ್ಯಶಾಸ್ತ್ರಿ, ವೀಣಾ ಲಕ್ಷ್ಮೀನಾರಾಯಣಪ್ಪ, ಕಲಾವಿದ ವೆಂಕಟಪ್ಪ, ನಾರಾಯಣ ಅಯ್ಯರ್, ತಿರುಮಲೆ ರಾಜಮ್ಮ, ಎಂ.ಎಸ್. ಭೀಮರಾವ್ ಮತ್ತು ಅವರ ಮೊಮ್ಮಕ್ಕಳಾದ ಎ.ಎಸ್. ಚಂದ್ರಶೇಖರಯ್ಯ, ಸ್ವರಮೂರ್ತಿ ವೆಂಕಟನಾರಾಯಣರಾವ್, ಶ್ರೀರಂಗಂ ರಾಮಸ್ವಾಮಿ ಅಯ್ಯಂಗಾರ್ ಮುಂತಾದವರು ಪ್ರಮುಖರು. ಸ್ವರಮೂರ್ತಿಯವರ ಪುತ್ರ ಈಗ ಬೆಂಗಳೂರಿನಲ್ಲಿ ನೆಲೆಸಿರುವ ಮೈಸೂರು ವಿ. ಸುಬ್ರಹ್ಮಣ್ಯ ಈ ಪರಂಪರೆಯವರು.

# ಮೈಸೂರು ಕರಿಗಿರಿರಾಯರು (1853 – 1927)

ಕರ್ನಾಟಕದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಮೈಸೂರು ಅರಮನೆಯ ಪಂಡಿತರಾಗಿದ್ದ ವೇದಾಂತಿ ಲಕ್ಷ್ಮೀನರಸಿಂಹಾಚಾರ್ಯರ ದ್ವಿತೀಯ ಪುತ್ರರಾಗಿ ಕರಿಗಿರಿರಾಯರು ಜನ್ಮ ತಾಳಿದರು. ತಂದೆ ಮತ್ತು ಅಣ್ಣನವರಲ್ಲಿ ಸಂಸ್ಕೃತ ಮತ್ತು ತರ್ಕ ಶಾಸ್ತ್ರಾಧ್ಯಯನ ಮಾಡಿದರು. ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ರಾಜಧಾನಿಯನ್ನು ಮೈಸೂರಿಗೆ ಬದಲಾಯಿಸಿದಾಗ ವೇದಾಂತಿ ಲಕ್ಷ್ಮೀನರಸಿಂಹಾಚಾರ್ಯರು ಸಕುಟುಂಬರಾಗಿ ಮೈಸೂರನ್ನು ಸೇರಿದರು. ಆಗ ಕರಿಗಿರಿರಾಯರಿಗೆ 15 ವರ್ಷ ಬಾಲಕನಾಗಿದ್ದರೂ ರಾಜಸಭೆಯ ಪರಿಚಯವಿದ್ದಿತು.

ರಾಯರಿಗೆ ಸಂಗೀತ ಕಲೆಯಲ್ಲಿ ಅಪಾರ ಆಸಕ್ತಿ. ತಂದೆಯ ಸ್ನೇಹಿತರಾಗಿದ್ದ ಆಸ್ಥಾನ ವಿದ್ವಾನ್ ಸಂಗೀತದ ಸುಬ್ಬರಾಯರು ಇವರ ಪ್ರಥಮ ಗುರು. ಪರಮ ವೈದಿಕರಾಗಿದ್ದ ತಂದೆ ಮತ್ತು ಅಣ್ಣನಿಗೆ ರಾಯರ ಸಂಗೀತಾಭ್ಯಾಸವು ಸ್ವಲ್ಪವೂ ಸಮ್ಮತವೆನಿಸಲಿಲ್ಲ. ತತ್ಕಾರಣ ಅವರು ಗುಟ್ಟಾಗಿ ಸಂಗೀತಾಭ್ಯಾಸ ಮಾಡುತ್ತಿದ್ದರು. ಇದು ಅವರ ತಂದೆಗೆ ತಿಳಿದು ಅದನ್ನು ತಡೆಗಟ್ಟುವ ಪ್ರಯತ್ನದಲ್ಲಿ ವಿಫಲರಾದರು. ತಂದೆ ಮಕ್ಕಳಲ್ಲಿ ವಿರಸ ಬೆಳೆಯಿತು. ಒಂದು ಸಂದರ್ಭದಲ್ಲಿ ಮನೆಯುವರೆಲ್ಲರೂ ಶ್ರೀ ರಾಘವೇಂದ್ರ ಸ್ವಾಮಿಯ ಆರಾಧನೆಗೆ ಸಂಜನಗೂಡಿನ ಮಠಕ್ಕೆ ಹೋಗಿದ್ದಾಗ, ಪೂಜಾನಂತರ ಸ್ವಾಮಿಗಳ ಅಪ್ಪಣೆಯಂತೆ ಕರಿಗಿರಿರಾಯರು ಹಾಡಿ ಅವರು ಅಲ್ಲಿದ್ದ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಮನೆಗೆ ಹಿಂತಿರುಗಿದ ಮೇಲೆ ತಂದೆ—ಮಗನಿಗೆ ವಾಗ್ಯುದ್ಧವಾಗಿ ರಾಯರು ಮನೆಬಿಟ್ಟು ಹೈದರಾಬಾದಿಗೆ ಹೋಗಿ ನೆಂಟರೊಬ್ಬರ ಮನೆಯಲ್ಲಿದ್ದು ಸಂಗೀತಾಭ್ಯಾಸವನ್ನು ಮುಂದುವರಿಸಿದರು. ಕೆಲವು ಕಾಲಾನಂತರ ತಂದೆಯು ರುಗ್ಣಶಯ್ಯೆಯಲ್ಲಿದ್ದಾಗ ಮೈಸೂರಿಗೆ ಹಿಂದಿರುಗಿದರು. ತಂದೆಯು ಕಾಲವಾದ ನಂತರ ಸಂಗೀತ ದ್ವೇಷಿಯಾದ ಅಣ್ಣ ವೆಂಕಟನರಸಿಂಹಾಚಾರ್ಯರೊಡನೆ ಪುನಃ ವಿರಸ ಉಂಟಾಯಿತು. ರಾಯರು ಮೈಸೂರನ್ನು ಬಿಟ್ಟು ಪ್ರವಾಸ ಮಾಡಿ ದಕ್ಷಿಣ ಭಾರತದ ಹಲವೆಡೆಗಳಲ್ಲಿ ಕಛೇರಿ ಮಾಡಿ ಕೀರ್ತಿ ಪಡೆದರು. ಅಣ್ಣ ತೀರಿಕೊಂಡ ಸುದ್ದಿ ತಿಳಿಯಿತು. ಮೈಸೂರಿಗೆ ಹಿಂತಿರುಗಿದ ರಾಯರ ಸಂಗೀತವನ್ನು ಮೆಚ್ಚಿ ಮಹಾರಾಜ ಚಾಮರಾಜ ಒಡೆಯರು ಅವರನ್ನು ತಮ್ಮ ಆಸ್ಥಾನ ವಿದ್ವಾಂಸರಾಗಿ ನೇಮಿಸಿ ಇವರನ್ನು ಗೌರವಿಸಿದರು. ಆಸ್ಥಾನದ ವಿದ್ವಾಂಸರೆಲ್ಲರೂ ಸೇರಿ ಇವರಿಗೆ ಸಂಗೀತ ವಿದ್ಯಾ ಕಂಠೀರವ ಎಂಬ ಪ್ರಶಸ್ತಿಯನ್ನು, ಚಿನ್ನದ ಗಂಟೆ ತೋಡಾವನ್ನೂ ಸಮರ್ಪಿಸಿ ಇವರ ವಿದ್ಯಾ ಪ್ರೌಢಿಮೆಯನ್ನು ಗೌರವಿಸಿದರು. ಮಹಾರಾಜರು ಇವರಿಗೆ 'ಗಾನಕಲಾ ದುರಂಧರ' ಎಂಬ ಬಿರುದನ್ನಿತ್ತರು. ಗದ್ವಾಲ್ ರಾಜ್ಯದ ರಾಜರು ಇವರಿಗೆ ಸನ್ಮಾನವಿತ್ತು ವಿಫುಲವಾಗಿ ಸತ್ಕರಿಸಿದರು ಮತ್ತು 1920ರಲ್ಲಿ ಕಾಶೀ ವಿದ್ಯಾ ಪೀಠದ ಅಧಿಕಾರಿಗಳು ಇವರಿಗೆ 'ಸಂಗೀತಭೂಷಣ' ಎಂಬ ಪ್ರಶಸ್ತಿಯಿತ್ತರು. ರಾಯರು ಹಲವು ಗುರುಪೀಠಗಳಿಂದಲೂ ಸನ್ಮಾನಿತರಾದರು.

ರಾಯರು ಲಕ್ಷ್ಯಲಕ್ಷಣ ವಿದ್ವಾಂಸರಾಗಿದ್ದರು. "ಸಂಗೀತ ಸುಬೋಧಿನಿ" ಮತ್ತು "ಗಾನ ವಿದ್ಯಾರಹಸ್ಯ ಪ್ರಕಾಶಿನೀ" ಎಂಬ ಎರಡು ಸಂಗೀತ ಶಾಸ್ತ್ರ ಗ್ರಂಥಗಳನ್ನು

ಬರೆದು ಪ್ರಕಟಿಸಿದರು. ವಾಗ್ಗೇಯಕಾರರಾಗಿ ಅನೇಕ ವರ್ಣಗಳು, ಕೃತಿಗಳು ಮತ್ತು ದೇವರ ನಾಮುಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಸುಮಾರು 40 ಕೃತಿಗಳು ಸ್ವರ ಪ್ರಸ್ತಾರ ಸಹಿತ ದೊರಕುತ್ತವೆ. ಇವರು ತಮ್ಮ ಶಿಷ್ಯರಿಗೆ ಗಾನಕಲೆಯಲ್ಲದೆ ಶಾಸ್ತ್ರವನ್ನೂ ಬೋಧಿಸುತ್ತಿದ್ದರು. ಶ್ರೀಮಂತರಾಗಿದ್ದರಿಂದ ಶಿಷ್ಯರಿಗೆ ಉಚಿತವಾಗಿ ವಿದ್ಯಾದಾನ ಮಾಡುತ್ತಿದ್ದರು. 1900ರ ಸುಮಾರಿನಲ್ಲಿ ಗ್ರಾಮಫೋನ್ ನಮ್ಮ ದೇಶಕ್ಕೆ ಕಾಲಿಡುತ್ತಿದ್ದಂತೆಯೇ ಒಂದು ಯಂತ್ರವನ್ನು ತರಿಸಿಕೊಂಡು ಸಿಲಿಂಡರ್ ವಿಧಾನದಿಂದ ತಮ್ಮ ಮತ್ತು ಇತರ ವಿದ್ವಾಂಸರ ಸಂಗೀತದ ಧ್ವನಿ ಮುದ್ರಣ ಮಾಡಿಕೊಂಡು ಬಳಸಿದರು. ಇವರ ಅನೇಕ ಶಿಷ್ಯರಲ್ಲಿ ಬಿಡಾರಂ ಕೃಷ್ಣಪ್ಪ, ಚಿಕ್ಕರಾಮರಾಯರು, ಗದ್ವಾಲನ ಅನಂತಶಾಸ್ತ್ರಿ, ಬಿಜವಾಡ ಸುಬ್ಬರಾಯಶಾಸ್ತ್ರಿ, ಮೈಸೂರು ಅಚ್ಚಪ್ಪ, ರಾಳ್ಳಪಳ್ಳಿ ಅನಂತ ಕೃಷ್ಣಶರ್ಮರು ಪ್ರಮುಖರು. ಅನಂತ ಕೃಷ್ಣಶರ್ಮರು ತಮ್ಮ ಪ್ರಥಮ ಗುರುವನ್ನು ಕುರಿತು 'ವರದಗಿರೀಶ, ವಾಂಛಿತ ಫಲದಾಯಕ' ಎಂಬ ಗೀತವನ್ನು ರಚಿಸಿದ್ದಾರೆ.

— x —

# ವೀಣಾ ಸುಬ್ಬಣ್ಣ (1854–1939)

ಸುಬ್ಬಣ್ಣನವರು ಶೇಷಣ್ಣನವರಂತೆಯೇ ಮೈಸೂರಿನ ಖ್ಯಾತ ವೈಣಿಕ ಪರಂಪರೆಗೆ ಸೇರಿದವರು. ಇವರು ಶೇಷಣ್ಣನವರ ಸಮೀಪ ಬಂಧುಗಳು. ವೀಣಾ ಭಕ್ಷಿಯಾಗಿದ್ದ ದೊಡ್ಡ ಶೇಷಣ್ಣನವರ ಹಿರಿಯ ಪುತ್ರರಾಗಿ ಜನ್ಮತಾಳಿದರು. ಇವರದು ವಿದ್ಯೆ ಮತ್ತು ಹಣ ಎರಡರಲ್ಲೂ ಶ್ರೀಮಂತವಾಗಿದ್ದ ಮನೆತನ. ಇವರಿಗೆ ಮತ್ತು ಶೇಷಣ್ಣನವರಿಗೆ ಸಂಗೀತ ಶಿಕ್ಷಣವು ದೊಡ್ಡ ಶೇಷಣ್ಣನವರಲ್ಲಿ ಆರಂಭವಾಯಿತು. ಮೈಸೂರು ಸದಾಶಿವರಾಯರಲ್ಲಿ ಗಾಯನದಲ್ಲಿ ಶಿಕ್ಷಣ ಪಡೆದರು. ಪ್ರತಿದಿನ ಅನೇಕ ಗಂಟೆಗಳ ಕಾಲ ಗಾಯನ ಮತ್ತು ವಾದನದಲ್ಲಿ ಸಾಧನೆ ಮಾಡಿ ವಿದ್ವಾಂಸರಾದರು. ತಮ್ಮ 25ನೆಯ ವಯಸ್ಸಿನಲ್ಲಿ ಇವರಿಗೆ ಪಿತೃವಿಯೋಗವಾಯಿತು. ತರುವಾಯ ಶೇಷಣ್ಣನವರೊಡನೆ ವೀಣಾವಾದನವನ್ನು ಮುಂದುವರೆಸಿದರು. ಕಾಲಕ್ರಮದಲ್ಲಿ ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾಗಿ, ನಂತರ ವೀಣಾ ಭಕ್ಷಿಯ ಪದವಿಯನ್ನು ಪಡೆದರು. ಪ್ರಾರಂಭದಲ್ಲಿ ಶೇಷಣ್ಣನವರೊಡನೆ ದ್ವಂದ್ವ ವೀಣಾ ಕಚೇರಿಗಳನ್ನು ನಡೆಸಿ ಖ್ಯಾತಿ ಹೊಂದಿದರು. ವೀಣಾ ವಾದನದ ಜೊತೆಗೆ ಇಂಪಾಗಿಯೂ ಹಾಡುತ್ತಿದ್ದರು. ಮಹಾರಾಜ ಚಾಮರಾಜ ಒಡೆಯರು ರಾಯಲ್ ಸ್ಕೂಲಿನಲ್ಲಿ ಇವರ ಸಹಪಾಠಿಗಳಾಗಿದ್ದರು. ಶೇಷಣ್ಣನವರ ವೀಣಾವಾದನ, ಸುಬ್ಬಣ್ಣನವರ ಗಾಯನ, ಮಹಾರಾಜರ ಪಿಟೀಲು ವಾದನವುಳ್ಳ ಅನೇಕ ಸಂಗೀತ ಗೋಷ್ಠಿಗಳು ನಡೆಯುತ್ತಿದ್ದವು.

ಸುಬ್ಬಣ್ಣನವರು ಧನಾರ್ಜನೆಗಾಗಿ ಸಂಗೀತ ಕಛೇರಿಗಳನ್ನು ಮಾಡಲಿಲ್ಲ. ಕೀರ್ತಿಗಾಗಿ ಪದೇ ಪದೇ ದೇಶ ಸಂಚಾರ ಮಾಡಲಿಲ್ಲ. ಅವರ ಮನೆಯಲ್ಲಿ ಹೆಚ್ಚು ಕಡಿಮೆ ನಿತ್ಯವೂ ಸಂಗೀತೋತ್ಸವ ನಡೆಯುತ್ತಿತ್ತು. ಅರಮನೆಗೆ ಬಂದ ಸಂಗೀತಗಾರರು ಇವರ ಮನೆಯಲ್ಲಿ ಕಛೇರಿ ಮಾಡಿ ಉದಾರವಾದ ಸಂಭಾವನೆಯನ್ನು ಪಡೆದು ಹೋಗುತ್ತಿದ್ದರು. ಮಹಾ ವೈದ್ಯನಾಥ ಅಯ್ಯರ್, ಪೂಚಿ ಶ್ರೀನಿವಾಸ ಅಯ್ಯಂಗಾರ್, ತಿರುಕ್ಕೋಡಿ ಕಾವಲ್ ಕೃಷ್ಣ ಅಯ್ಯರ್, ವೆಂಕಟರಮಣ ದಾಸರು ಇವರೇ ಮುಂತಾದವರು ಇವರ ಪ್ರೋತ್ಸಾಹ ಹಾಗೂ ಔದಾರ್ಯವನ್ನು ಪಡೆದರು. ಇದಲ್ಲದೆ ಸುಬ್ಬಣ್ಣನವರು ತಾವು ಹೋದ ಕಡೆ ರಾಜರುಗಳನ್ನು ಭೇಟಿ ಮಾಡಿ, ತಾವೇ ಬೆಲೆ ಬಾಳುವ ಕಾಣಿಕೆಗಳನ್ನಿತ್ತು ತಮ್ಮ ಕಲಾ ಪ್ರದರ್ಶನ ಮಾಡಿ ಬರುತ್ತಿದ್ದರು. ರಾಮನಾಥಪುರಂ, ತಿರುವಾಂಕೂರು, ದೇವಕೋಟೆ, ಪಂಡಾರ್ ಸನ್ನಿಧಿ ಮುಂತಾದ ಕಡೆ ಸಂಚಾರ ಮಾಡಿ ತಮ್ಮ ಕಲಾ ಪ್ರದರ್ಶನದಿಂದ ಕೀರ್ತಿಯನ್ನು ಪಡೆದರು. ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ 'ವೈಣಿಕ ಪ್ರವೀಣ' ಎಂಬ ಬಿರುದನ್ನಿತ್ತು ಗೌರವಿಸಿದರು. 1930ರಲ್ಲಿ ನಂಜನಗೂಡಿನಲ್ಲಿ ನಡೆದ ಕರ್ನಾಟಕ ಸಂಗೀತ ಸಮ್ಮೇಳನಾಧ್ಯಕ್ಷರಾಗಿ ಗೌರವವನ್ನು ಪಡೆದರು.

ಸುಬ್ಬಣ್ಣನವರು ಮಹಾರಸಿಕರಾಗಿದ್ದರು. ಗಂಧ, ಹೂ, ಸುಗಂಧ, ದ್ರವ್ಯಗಳೆಂದರೆ ಅವರಿಗೆ ಪರಮ ಪ್ರೀತಿ. ದೊಡ್ಡ ಅಂಚಿನ ಸೊಗಸಾದ ಜರಿಯುಳ್ಳ ಪಂಚೆ, ಜರಿಪೇಟ, ಬೆಲೆಬಾಳುವ ಸುಗಂಧ ಪೂಸಿರುವ ನಿಲುವಂಗಿ, ಬೆಳ್ಳಿಯ ಹಿಡಿ

ಇರುವ ಕರಿ ಮರದ ಬೆತ್ತವನ್ನು ಹಿಡಿದು ಇವರು ಬರುತ್ತಿದ್ದರೆ ದೂರದಿಂದಲೇ ಘಮುಘಮಿಸುವ ಸುವಾಸನೆ ಇವರ ಬರುವಿಕೆಯನ್ನು ಸಾರುತ್ತಿತ್ತು. ಇವರು ನೋಡಲು ಆಕರ್ಷಕ ವ್ಯಕ್ತಿಯಾಗಿದ್ದರು. ಇವರಿಗೆ ತಮ್ಮ ಅಪಾರ ಔದಾರ್ಯದ ಫಲವಾಗಿ ತಮ್ಮ ಕೊನೆಯ ದಿನಗಳಲ್ಲಿ ಬಡತನವನ್ನು ಅನುಭವಿಸಬೇಕಾಯಿತು. ಇವರು ವಾಗ್ಗೇಯಕಾರರಾಗಿದ್ದು ಸ್ವರಜತಿ, ವರ್ಣಗಳು, ಕೃತಿಗಳು ಮತ್ತು ಕನ್ನಡದಲ್ಲಿ ಒಂದು ನವರಾಗ ಮಾಲಿಕೆಯನ್ನು ರಚಿಸಿದ್ದಾರೆ. ಇವರ 'ಶ್ರೀನಿವಾಸ ನನ್ನು ಬ್ರೋವರಾದ' ಎಂಬ ಅಠಾಣರಾಗದ ವರ್ಣ ಬಹಳ ಪ್ರಸಿದ್ಧಿಯಾಗಿದೆ. ಇವರು ಅನೇಕ ಶಿಷ್ಯರಿಗೆ ವಿದ್ಯಾದಾನ ಮಾಡಿದರು. ಅವರಲ್ಲಿ ಚಿಕ್ಕರಾಮರಾಯರು, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಆರ್.ಎಸ್. ಕೇಶವಮೂರ್ತಿ (ಇವರು ತಮ್ಮ ಗುರುವಿನಿಂದ ಬೆಳ್ಳಿ, ರತ್ನ ಖಚಿತವಾದ ವೀಣೆಯನ್ನು ಪಡೆದರು), ವಿ. ಶ್ರೀಕಂಠ ಅಯ್ಯರ್, ವಿ.ಎನ್. ರಾವ್, ಸುಬ್ಬಮ್ಮ ಮತ್ತು ಎ. ಸುಬ್ಬರಾವ್ ಪ್ರಮುಖರು.

# ವೈಸೂರು ವಾಸುದೇವಾಚಾರ್ಯ (1805–1961)

ವಾಸುದೇವಾಚಾರ್ಯರ ಮಾತಾಪಿತೃಗಳಾದ ಸುಬ್ರಹ್ಮಣ್ಯಾಚಾರ್ಯರು ಮತ್ತು ಕೃಷ್ಣಬಾಯಿ ತಮಿಳುನಾಡಿನ ಕೊಯಮತ್ತೂರಿನ ಚೇವೂರಿನಲ್ಲಿ ಪ್ರಖ್ಯಾತವಾಗಿದ್ದ ಒಂದು ಮಾಧ್ವ ಬ್ರಾಹ್ಮಣ ವೈದಿಕ ಮನೆತನಕ್ಕೆ ಸೇರಿದವರು. ಇವರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿಗೆ ಬಂದು ರಾಜಾಶ್ರಯವನ್ನು ಪಡೆದು ಪ್ರಸಿದ್ಧಿ ಪಡೆದರು.

ವಾಸುದೇವಾಚಾರ್ಯರು ಮೈಸೂರಿನಲ್ಲಿ ಜನ್ಮ ತಾಳಿದರು. ಅವರ ಮೂರನೆಯ ವಯಸ್ಸಿನಲ್ಲಿ ಪಿತೃವಿಯೋಗವಾಗಿ, ತಾತ ಗೋಪಾಲಾಚಾರ್ಯರ ಪೋಷಣೆಯಲ್ಲಿ ಬೆಳೆದರು. ಮೈಸೂರು ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಸಂಗ ಮಾಡುತ್ತಾ ವೀಣೆ ಪದ್ಮನಾಭಯ್ಯನವರಲ್ಲಿ ಸಂಗೀತ ಶಿಕ್ಷಣವನ್ನು ಪಡೆದರು. ಮಹಾರಾಜ ಚಾಮರಾಜ ಒಡೆಯರ ಸಹಾಯದಿಂದ ತಂಜಾವೂರು ಬಳಿ ಇರುವ ತಿರುವೈಯ್ಯಾರಿಗೆ ಹೋಗಿ ಸದ್ಗುರು ತ್ಯಾಗರಾಜ ಸ್ವಾಮಿಯ ಪ್ರಶಿಷ್ಯರೂ, ಪ್ರಸಿದ್ಧ ಗಾಯಕರೂ, ವಾಗ್ಗೇಯಕಾರರೂ ಆಗಿದ್ದ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಶಿಷ್ಯರಾಗಿ 1884ರಿಂದ 1890ರವರೆಗೆ ಪ್ರೌಢ ಶಿಕ್ಷಣವನ್ನು ಪಡೆದರು. ಅಲ್ಲಿ ಗುರುಕುಲ ವಾಸ ಮಾಡುತ್ತಿದ್ದಾಗ ತಮ್ಮ ಗುರುವಿಗೆ ಕೃತಿ ರಚನೆಯಲ್ಲಿ, ಸಾಹಿತ್ಯ ಜೋಡಣೆ ಮಾಡುವುದರಲ್ಲಿ ನೆರವಾಗುತ್ತಿದ್ದರು.

ಮೈಸೂರು ಆಸ್ಥಾನದ ಖ್ಯಾತ ವಿದ್ವಾಂಸರಾಗಿದ್ದ ವೀಣಾ ಶೇಷಣ್ಣ, ಸುಬ್ಬಣ್ಣ ಮತ್ತು ಬಿಡಾರಂ ಕೃಷ್ಣಪ್ಪನವರು ಆಚಾರ್ಯರ ಸಮಕಾಲೀನರೂ, ಪರಮಮಿತ್ರರೂ ಆಗಿದ್ದರು. ಆಗಿನ ಶ್ರೇಷ್ಠ ವಿದ್ವಾಂಸರ ಸಂಪರ್ಕದಿಂದ ತಮ್ಮ ಜ್ಞಾನ ಭಂಡಾರವನ್ನು ಮತ್ತಷ್ಟು ಬೆಳೆಸಿಕೊಂಡರು. ಇವರಿಗೆ ಸಂಸ್ಕೃತ, ತೆಲುಗು, ಕನ್ನಡ ಮತ್ತು ಸಂಗೀತ ಶಾಸ್ತ್ರದಲ್ಲಿ ಅಪಾರ ಪಾಂಡಿತ್ಯವಿದ್ದಿತು. ರಚನಾಕೌಶಲ್ಯ ಮತ್ತು ಕೂಲಂಕಷವಾಗಿ ವಿಮರ್ಶೆ ಮಾಡುವ ಅಪಾರ ಲಕ್ಷ್ಯ ಜ್ಞಾನವಿದ್ದಿತು. ಇವರ ಹಾಡುಗಾರಿಕೆಯು ಹೆಚ್ಚಾಗಿ ಮನೋಧರ್ಮ ಸಂಗೀತವಾಗಿತ್ತು. ಇವರು ಸಾಧಿಸಿದ್ದು ಮುಖ್ಯವಾಗಿ ಮಧ್ಯಮ ಕಾಲ (ಎಂದರೆ ತಾನ). ಮಂದರ ಪಂಚಮದಿಂವ ತಾರಷಡ್ಜದವರೆಗೆ ಇವರ ಮಧ್ಯಮ ಕಾಲದ ನಡೆ ದುಂಡುದುಂಡಾಗಿ, ನಿಸ್ಸಂದೇಹವಾಗಿ, ವರ್ಚಸ್ವಿಯಾಗಿ ಪರಿಧಾವಿಸುತ್ತಿತ್ತು. ಗಂಭೀರವಾದ, ವಿಥವಿಥವಾಗಿ, ತೇಜಸ್ವಿಯಾಗಿ, ನಿರ್ಣಯವಾಗಿ ತಾನ ಹಾಡುವುದರಲ್ಲಿ ಇವರು ಅದ್ವಿತೀಯರಾಗಿದ್ದರು. ಇವರು ಸಂಗೀತದಲ್ಲಿ ಸಾಧಿಸಿದ್ದ ಶೃತಿಶುದ್ಧಿ ಅಪೂರ್ವವಾಗಿತ್ತು. ಇವರು ತ್ಯಾಗರಾಜರ ಸಾವೇರಿ ರಾಗದ "ರಾಮಬಾಣ", ಶಹಾನ ರಾಗದ "ಗಿರಿಪೈ", ಭೈರವಿ ರಾಗದ "ಇಕನನ್ನ ಬ್ರೋವ", ದೇವ ಗಾಂಧಾರಿ ರಾಗದ "ಕ್ಷೀರ ಸಾಗರ ಶಯನ", ದೀಕ್ಷಿತರ ಕಾಂಭೋಜಿ ರಾಗದ "ಶ್ರೀಸುಬ್ರಹ್ಮಣ್ಯಾಯನಮಸ್ತೇ", ಮುಂತಾದುವುಗಳನ್ನು ಹಾಗೂ ಹರಿದಾಸರ ದೇವರ ನಾಮಗಳನ್ನು ಹಾಡುತ್ತಿದ್ದ ವೈಖರಿಯನ್ನು ಇಂದಿಗೂ ಅನೇಕ ಮಂದಿ ಸ್ಮರಿಸಿಕೊಳ್ಳುತ್ತಾರೆ. ಇವರು ಭಾರತಾದ್ಯಂತ ಪ್ರವಾಸ ಮಾಡಿ ಹಲವಾರು ಸಂಗೀತ ಕಚೇರಿಗಳನ್ನು ಮಾಡಿ ಮೈಸೂರಿನ ಕೀರ್ತಿಯನ್ನು ಹರಡಿದರು. ಆಗಿನ ಸುಪ್ರಸಿದ್ಧ ಹಿಂದೂಸ್ಥಾನಿ ಗಾಯಕ ಅಲ್ಲಾದಿಯಾ ಖಾನರು 1928ರಲ್ಲಿ

ಮೈಸೂರಿಗೆ ಬಂದಿದ್ದಾಗ ಸುಗ್ರಾವ್ ಮತ್ತು ಭೈರವ ರಾಗಗಳನ್ನು ಆಚಾರ್ಯರು ಹಾಡಿ ಎಲ್ಲರನ್ನೂ ಅಚ್ಚರಿಗೊಳಿಸಿದರು. ಅರಮನೆಯ ನಾಟಕ ಮಂಡಲಿಯ ಅನೇಕ ನಾಟಕಗಳಿಗೆ ಇವರು ಸಂಗೀತ ಮತ್ತು ಸಾಹಿತ್ಯವನ್ನು ಒದಗಿಸುತ್ತಿದ್ದರು.

ಆಚಾರ್ಯರು ಪ್ರತಿಭಾವಂತರಾದ ವಾಗ್ಗೇಯಕಾರರಾಗಿದ್ದರು. ''ವಾಸುದೇವ'' ಎಂಬ ಸ್ವನಾಮ ಮುದ್ರೆಯಲ್ಲಿ 300ಕ್ಕೂ ಹೆಚ್ಚಿನ ಕೃತಿಗಳನ್ನು ಸಂಸ್ಕೃತ ಮತ್ತು ತೆಲುಗಿನಲ್ಲಿ ರಚಿಸಿದ್ದಾರೆ. ಇವು 'ವಾಸುದೇವ ಕೀರ್ತನ ಮಂಜರಿ' ಎಂಬ ಹೆಸರಿನ ಎರಡು ಸಂಪುಟಗಳಲ್ಲಿ ಪ್ರಕಟವಾಗಿವೆ. ಖಮಾಚ್ ರಾಗವನ್ನು ಭಾಷಾಂಗರಾಗವನ್ನಾಗಿ ಮಾರ್ಪಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸರಸ್ವತೀ ಮನೋಹರಿ ರಾಗದ 'ಕರುಣಿಸೌ ಕಾಯೆ ಮಾಯೆ' ಎಂಬ ಒಂದೇ ಒಂದು ರಚನೆ ಇವರ ಕನ್ನಡದ ಕೃತಿ. ವಿದ್ವಾಂಸರೆಲ್ಲರೂ ಇವರನ್ನು ''ಅಭಿನವ ತ್ಯಾಗರಾಜ'' ಎಂದು ಗೌರವಿಸುತ್ತಿದ್ದುದು ಗಮನಾರ್ಹವಾಗಿದೆ.

ಆಚಾರ್ಯರಿಗೆ ಸಂದ ಬಿರುದುಗಳು, ಗೌರವಗಳು ಅನೇಕ, ವಿಶ್ವಕವಿ ರವೀಂದ್ರನಾಥ ಠಾಕೂರರು ಇವರಿಗೆ 'ಸಂಗೀತ ಭಾವಜ್ಞ ಶಿಖಾಮಣಿ', ಉಡುಪಿಯ ಮಠಾಧೀಶರು 'ಸಂಗೀತ ಕಲಾಕೋವಿ', ರಾಘವೇಂದ್ರ ಸ್ವಾಮಿಗಳು 'ಸಂಗೀತ ಸಾಹಿತ್ಯ ವಿದ್ವನ್ಮಣಿ', ನಾಲ್ವಡಿ ಕೃಷ್ಣರಾಜ ಒಡೆಯರು 'ಸಂಗೀತ ಶಾಸ್ತ್ರರತ್ನ', ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ 'ಸಂಗೀತ ಕಲಾನಿಧಿ', ಮಾಧ್ವ ಸಂಘವು 'ಗಾಯನಾಚಾರ್ಯ', ಜಯಚಾಮರಾಜ ಒಡೆಯರು 'ಸಂಗೀತ ಶಾಸ್ತ್ರ ವಿಶಾರದ', ಮೈಸೂರು ಮ್ಯೂಸಿಕ್ ಅಕಾಡೆಮಿಯು 'ಸಂಗೀತ ಸುಧಾನಿಧಿ' ಮತ್ತು 1954ರಲ್ಲಿ ಭಾರತ ಸರ್ಕಾರವು 'ಪದ್ಮಭೂಷಣ' ಎಂಬ ಪದವಿಗಳನ್ನಿತ್ತು ಗೌರವಿಸಿತು.

ಮದ್ರಾಸಿನ ಆಡ್ಯಾರಿನ ಕಾಲಕ್ಷೇತ್ರದ ರುಕ್ಮಿಣೀ ದೇವಿಯವರ ಕೋರಿಕೆಯಂತೆ 1954ರಲ್ಲಿ ಮದ್ರಾಸಿಗೆ ಹೋಗಿ ನೆಲೆಸಿ, ಅಲ್ಲಿ ಪ್ರಾಧಾನಾಚಾರ್ಯರಾಗಿದ್ದು ಶ್ರೀಮದ್ರಾಮಾಯಣ ನೃತ್ಯನಾಟಕ ರಚನೆಯ ಕಾರ್ಯದಲ್ಲಿ ತಮ್ಮ ಕೊನೆಯ ದಿನದವರೆಗೂ ನಿರತರಾಗಿದ್ದರು. ಸೀತಾ ಸ್ವಯಂವರ, ಶ್ರೀರಾಮವನಾಗಮನ ಮತ್ತು ಪಾದುಕಾ ಪಟ್ಟಾಭಿಷೇಕ ಎಂಬ ಇವರ ನೃತ್ಯನಾಟಕಗಳು 1956 ಮತ್ತು 1960ರಲ್ಲಿ ರಂಗಮಂಟಪದ ಮೇಲೆ ಪ್ರದರ್ಶಿಸಲ್ಪಟ್ಟುವು.

ಆಚಾರ್ಯರ ಕೃತಿಗಳಲ್ಲಿ ಶ್ರೀಚಾಮುಂಡೇಶ್ವರಿ, ರಾರಾ ರಾಜೀವಲೋಚನ, ಬ್ರೋಚೇವಾರೆವರುರಾ, ಶ್ರೀಮದಾದಿ ತ್ಯಾಗರಾಜ, ಪಲುಕವದೇಮಿರ, ರಾಘವೇಂದ್ರ ಗುರುಮಾನಕೋಸ್ಮಿ ದೇವಾದಿದೇವ ಮುಂತಾದುವು ಬಹು ಪ್ರಸಿದ್ಧವಾಗಿವೆ. ಆಚಾರ್ಯರು 'ನಾ ಕಂಡ ಕಲಾವಿದರು' ಮತ್ತು 'ನೆನಪುಗಳು' ಎಂಬ ಎರಡು ಪುಸ್ತಕಗಳನ್ನು ಲಲಿತವಾದ ಶೈಲಿಯಲ್ಲಿ ಬರೆದಿದ್ದಾರೆ. ಇವರ ಗಾಯನದಲ್ಲಿ ಸುಮಾರು ಒಂದು ಶತಮಾನ ಕಾಲದ ನಿಲುವಿನ ಲಕ್ಷ್ಯ ಸಂಪ್ರದಾಯವು ಕಂಡು ಬರುತ್ತಿತ್ತು. ಇವರು ಮೃದು ಹಾಸ್ಯಭರಿತವಾದ ಭಾಷಣ ಮಾಡುವುದರಲ್ಲಿ ನಿಸ್ಸೀಮರಾಗಿದ್ದರು. ಜಯಚಾಮರಾಜ ಒಡೆಯರ ಕೃತಿ ರಚನೆಯಲ್ಲಿ ಇವರ ಪಾತ್ರ ಗುರುತರವಾದುದು. ಯಳಂದೂರು ರಂಗಾಚಾರ್ಯ, ಸಿ. ರಂಗಯ್ಯ, ಬಿ.ಕೆ. ಪದ್ಮನಾಭರಾವ್, ಡಿ. ಪಶುಪತಿ, ನಾ. ಚೆನ್ನಕೇಶವಯ್ಯ ಮತ್ತು ಜಯಚಾಮರಾಜ ಒಡೆಯರು ಇವರ ಶಿಷ್ಯರಲ್ಲಿ ಪ್ರಮುಖರು.

# ಬಿಡಾರಂ ಕೃಷ್ಣಪ್ಪ (1866–1931)

ಕೃಷ್ಣಪ್ಪನವರು ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಆಸ್ಥಾನದ ಒಬ್ಬ ಪ್ರಮುಖ ವಿದ್ವಾಂಸರು. ಇವರು ಕೊಂಕಣ ದೇಶಸ್ಥ ಬ್ರಾಹ್ಮಣರು. ಉಡುಪಿಯ ಬಳಿಯಿರುವ ನಂದಳಿಕೆ ಗ್ರಾಮ ಇವರ ಪೂರ್ವಜರ ಸ್ಥಳ. ಇವರ ತಂದೆ ವಿಶ್ವನಾಥಯ್ಯನವರು ಧರ್ಮಸ್ಥಳದ ದಶಾವತಾರ ಮಂಡಲಿಯಲ್ಲಿ ಸ್ತ್ರೀಪಾತ್ರ ವಹಿಸುತ್ತಿದ್ದರು. ಇವರು ಸೀತಾದೇವಿಯ ಪಾತ್ರಕ್ಕೆ ಎತ್ತಿದ ಕೈ. ಒಮ್ಮೆ ಮುಮ್ಮಡಿ ಕೃಷ್ಣರಾಜ ಒಡೆಯರು ಸುಬ್ರಹ್ಮಣ್ಯ ಯಾತ್ರೆ ಮುಗಿಸಿಕೊಂಡು ಧರ್ಮಸ್ಥಳಕ್ಕೆ ಭೇಟಿಯಿತ್ತಾಗ ಅವರ ಗೌರವಾರ್ಥವಾಗಿ ಏರ್ಪಡಿಸಿದ್ದ ದಶಾವತಾರದ ಆಟಗಳನ್ನು ನೋಡಿ ಆನಂದಪಟ್ಟು, ಮೈಸೂರಿಗೆ ಹಿಂದಿರುಗಿದ ನಂತರ ಆ ನಾಟಕ ಮಂಡಲಿಯನ್ನು ಮೈಸೂರಿಗೆ ಆಹ್ವಾನಿಸಿದರು. ಆಗ ಬಂದ ವಿಶ್ವಾನಾಥಯ್ಯನವರು ಮೈಸೂರಿನಲ್ಲಿ ನೆಲೆಸಿದರು. ಪರಸ್ಥಳದಿಂದ ಬಂದು ಬಿಡಾರಮಾಡಿದ ನಟರೆಲ್ಲರಿಗೂ ಬಿಡಾರದವರು ಎಂಬ ಹೆಸರು ಬಂದಿತು. ವಿಶ್ವಾನಾಥಯ್ಯನವರ ಹಿರಿಯ ಪುತ್ರ ಸುಬ್ಬರಾಯರು ಮತ್ತು ಕಿರಿಯ ಪುತ್ರ ಕೃಷ್ಣಪ್ಪನವರು.

ಕೃಷ್ಣಪ್ಪನವರ ಮೈಸೂರಿನಲ್ಲಿ ಜನಿಸಿದರು. ಪಿತೃವಿಯೋಗದ ನಂತರ ಸಂಸಾರ ನಿರ್ವಹಣೆ ಈ ಸಹೋದರರ ಮೇಲೆ ಬಿದ್ದಿತು. ತಂಬೂರಿಯನ್ನು ಹಿಡಿದು ದಿನವೂ ದೇವರ ನಾಮಗಳನ್ನು ಹಾಡುತ್ತಾ ಉಂಛ ವೃತ್ತಿಯಿಂದ ಬದುಕು ಸಾಗಿಸುತ್ತಿದ್ದರು. ಕೃಷ್ಣಪ್ಪನವರು ದಿನವೂ ಕೋಟೆ ಆಂಜನೇಯನ ಗುಡಿಯ ಮುಂದೆ ಕುಳಿತು ದೇವರ ನಾಮಗಳನ್ನು ಹಾಡುತ್ತಾ ಜೀವನ ಸಾಗಿಸುತ್ತಿದ್ದರು. ಒಂದು ದಿನ ಗುಡಿಗೆ ಬಂದಿದ್ದ ಸಾಹುಕಾರ್ ತಿಮ್ಮಯ್ಯನವರ ದೃಷ್ಟಿ ತೇಜಸ್ವಿಯಾದ ಈ ಯುವಕನ ಮೇಲೆ ಬಿದ್ದಿತು. ಅವರು ಕೃಷ್ಣಪ್ಪನವರಿಗೆ ಕರೂರು ರಾಮಸ್ವಾಮಯ್ಯನವರಲ್ಲಿ ಸಂಗೀತ ಶಿಕ್ಷಣಕ್ಕೆ ಏರ್ಪಾಡು ಮಾಡಿದರು. ನಂತರ ಗಿರಿಭಟ್ಟರ ತಮ್ಮಯ್ಯ, ಮೈಸೂರು ಕರಿಗಿರಿರಾಯರು ಮತ್ತು ವೀಣಾ ಶೇಷಣ್ಣನವರಲ್ಲಿ ಪ್ರೌಢಶಿಕ್ಷಣ ಪಡೆದರು. ತರುವಾಯ ರಾಜರ ಆಸ್ಥಾನದಲ್ಲಿ ಆರು ರೂ. ಸಂಬಳಕ್ಕೆ ನೇಮಕಗೊಂಡರು. ಅರಮನೆಯ ನಾಟಕ ಸಂಸ್ಥೆಯಲ್ಲಿ ಹಲವು ವರ್ಷಗಳ ಕಾಲ ಪಾತ್ರಾಭಿನಯ ಮಾಡುತ್ತಿದ್ದರು. ಸಂಗೀತ ಕಛೇರಿಗಳನ್ನು ಮಾಡಿ ಪ್ರವರ್ಧಮಾನಕ್ಕೆ ಬಂದರು. ದಕ್ಷಿಣದ ರಾಜ್ಯಗಳಿಗೆಲ್ಲಾ ಹೋಗಿ ತಮ್ಮ ಗಾನ ಪ್ರತಿಭೆಯಿಂದ ಯಶೋಧನಗಳನ್ನು ಗಳಿಸಿದರು. ಇವರ ಪ್ರವಾಸಗಳಿಂದ ಮೈಸೂರಿನ ಮತ್ತು ದಕ್ಷಿಣ ಭಾರತದ ವಿದ್ವಾಂಸರ ಪರಸ್ಪರ ಮಿಲನಕ್ಕೆ ಹೆಚ್ಚು ಅವಕಾಶವಾಗಿ ಗಾನವಾಹಿನಿಯ ರೂಪುರೇಖೆಗಳ ಮೇಲೆ ಪ್ರಭಾವ ಉಂಟಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ 'ಗಾನವಿಶಾರದ' ಎಂಬ ಬಿರುದನ್ನಿತ್ತು ಸನ್ಮಾನಿಸಿದರು.

ಕೃಷ್ಣಪ್ಪನವರು ಅಜಾನುಬಾಹು, ಕಾಂತಿ ಸಂಪನ್ನರಾದ ಗೌರವರ್ಣದ ಸುಂದರ ವ್ಯಕ್ತಿ. ಭವ್ಯವಾದ ಶಾರೀರ ಸಂಪತ್ತುಳ್ಳವರು, ಹೆಸರಾದ ಲಕ್ಷ್ಯ ವಿದ್ವಾಂಸರು. ಇವರು ತಮ್ಮ ಕಛೇರಿಗಳನ್ನು ಒಂದು ತಾನವರ್ಣದಿಂದ ಆರಂಭಿಸಿ, ಕಲ್ಯಾಣಿ, ಕಾಂಭೋಜಿ, ಶಂಕರಾಭರಣ, ಭೈರವಿ ರಾಗಗಳಲ್ಲಿ ಗಣಪತಿ ಮತ್ತು ದೇವಿಯನ್ನು ಕುರಿತ ಕೃತಿಗಳನ್ನು, ತ್ಯಾಗರಾಜ ಸ್ವಾಮಿಯ ಮತ್ತು ಸದಾಶಿವರಾಯರ ಕೃತಿಗಳನ್ನು ಹಾಡಿ,

ರಾಗ, ತಾನ, ಪಲ್ಲವಿ, ದೇವರ ನಾಮಗಳು ಮತ್ತು ಜಾವಳಿಗಳನ್ನು ಹಾಡುತ್ತಿದ್ದರು. ತ್ರಿಸ್ಥಾಯಿಯಲ್ಲಿ ಹಾಡುತ್ತಿದ್ದರು. ಇವರಿಗೆ ಖಚಿತವಾದ ಲಯಜ್ಞಾನವಿದ್ದಿತು. ಅಳಗನಂಬಿ, ಪಾಲ್‌ಘಾಟ್ ಸುಬ್ಬಯ್ಯರ್, ಪಿಟೀಲು ತಾಯಪ್ಪ ಮುಂತಾದವರ ಪಕ್ಕವಾದ್ಯಗಳೊಂದಿಗೆ ನೂರಾರು ಕಛೇರಿಗಳನ್ನು ನಡೆಸಿಕೊಟ್ಟರು. ಪುರಂದರದಾಸರ ದೇವರ ನಾಮಗಳನ್ನು ಕಛೇರಿಗಳಲ್ಲಿ ಹಾಡಲು ಪ್ರಾರಂಭಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಗಾಯನದಲ್ಲಿ ಭಾವರಸಾಭಿವೇಶ ಮತ್ತು ಸ್ಪಷ್ಟ ಉಚ್ಛಾರಣೆ ಇದ್ದಿತು. ಧ್ವನಿವರ್ಧಕವಿಲ್ಲದ ಆ ಕಾಲದಲ್ಲಿ ಇವರ ಗಾಯನವು ನೂರಾರು ಜನರಿಗೆ ಚೆನ್ನಾಗಿ ಕೇಳಿಸುವಂತಿತ್ತು. ದೇವರ ನಾಮಗಳ ಕಛೇರಿಗಳನ್ನು ದಕ್ಷಿಣ ಭಾರತಾದ್ಯಂತ ಮಾಡಿ ಹಣ ಗಳಿಸಿ ಎಲ್ಲವನ್ನೂ ವಿನಿಯೋಗಿಸಿ ಮೈಸೂರಿನಲ್ಲಿರುವ ಪ್ರಸನ್ನ ಸೀತಾರಾಮ ಮಂದಿರವನ್ನು ಕಟ್ಟಿಸಿದರು. ತನ್ಮೂಲಕ ತಮ್ಮ ಪ್ರಬಲ ಅಭಿಲಾಷೆಯನ್ನು ಈಡೇರಿಸಿಕೊಂಡರು. ಇವರ ಕಛೇರಿಗಳನ್ನು ತಪ್ಪದೆ ಕೇಳುತ್ತಿದ್ದ ಮದ್ರಾಸಿನ ಆಳ್ವಾರ್ ಚೆಟ್ಟಿಯಾರ್ ಎಂಬುವರು ತಮ್ಮ ಉದ್ಯಮದಲ್ಲಿ ಒಂದು ಸಲ ವಿಪರೀತ ನಷ್ಟವನ್ನು ಅನುಭವಿಸಿ ತಮ್ಮ ಬುದ್ಧಿ ಸ್ವಾಸ್ಥ್ಯವನ್ನು ಕಳೆದುಕೊಂಡರು. ಅವರ ಬಂಧುಗಳ ಕೋರಿಕೆಯ ಮೇಲೆ ಕೃಷ್ಣಪ್ಪನವರು ಮದ್ರಾಸಿಗೆ ಹೋಗಿ 15 ದಿನದ ಅವಧಿಯಲ್ಲಿ ಪ್ರತಿನಿತ್ಯ ಚೆಟ್ಟಿಯಾರರ ಮುಂದೆ ಹಾಡಿ ಅವರು ಮೊದಲಿನಂತಾಗುವಂತೆ ಮಾಡಿದರು. ಈ ಘಟನೆಯು ಕೃಷ್ಣಪ್ಪನವರ ಸಂಗೀತದ ಗುಣಕ್ಕೆ ನಿದರ್ಶನವಾಗಿದೆ. ಇವರ ಸಂಗೀತವು ಸ್ವಾನುಭವದ, ಶೃತಿಶುದ್ಧವಾದ ಸಂಗೀತವಾಗಿತ್ತು.

ಕೃಷ್ಣಪ್ಪನವರಿಗೆ ಅಪಾರ ಶಿಷ್ಯರಿದ್ದರು. ರಾಚಪ್ಪ, ಕೋಲಾರದ ನಾಗರತ್ನಮ್ಮ ಮತ್ತು ಬೆಂಗಳೂರು ನಾಗರತ್ನಮ್ಮ ಇವರ ಪ್ರಥಮ ಶಿಷ್ಯರು. ಮೈಸೂರು ಟಿ. ಚೌಡಯ್ಯ, ರಾಳ್ಳಪಳ್ಳಿ ಅನಂತ ಕೃಷ್ಣಶರ್ಮ, ಟಿ. ಪುಟ್ಟಸ್ವಾಮಯ್ಯ, ಟಿ.ಎಂ. ಪುಟ್ಟಸ್ವಾಮಯ್ಯ, ಎ.ಎಸ್. ಶಿವರುದ್ರಪ್ಪ, ಎ.ಕೆ. ಸುಬ್ಬರಾವ್, ಟಿ. ಗುರುರಾಜಪ್ಪ, ಬಿ. ದೇವೇಂದ್ರಪ್ಪ, ಎ. ಸುಬ್ಬರಾವ್, ಆರ್.ಆರ್. ಕೇಶವ ಮೂರ್ತಿ, ಟಿ. ಚಂದ್ರಮುಖಿ , ಟಿ. ಶಾರದಮ್ಮ ಟಿ. ನಾಗಮ್ಮ ಮುಂತಾದವರು ಇವರ ಪ್ರಮುಖ ಶಿಷ್ಯರು. ಕೃಷ್ಣಪ್ಪನವರು 'ಶ್ರೀ ಕೃಷ್ಣ' ಎಂಬ ಅಂಕಿತದೊಂದಿಗೆ ಹಲವು ಕೃತಿಗಳನ್ನು ರಚಿಸಿದ್ದಾರೆ.

# ವೀಣಾ ಶಿವರಾಮಯ್ಯ (1886 – 1946)

ಶಿವರಾಮಯ್ಯನವರು ಮೈಸೂರಿನ ಪ್ರಸಿದ್ಧ ವೈಣಿಕರಾಗಿದ್ದ ಆಸ್ಥಾನ ವಿದ್ವಾನ್ ವೀಣಾ ಪದ್ಮನಾಭಯ್ಯನವರ ಏಕೈಕ ಪುತ್ರ. ಇವರ ಸ್ಥಳ ತುಮಕೂರು ಜಿಲ್ಲೆಯ ಶ್ರೀರಾಮಪುರ. ತಮ್ಮ ತಂದೆಯವರಲ್ಲಿ ಗಾಯನ, ವೀಣಾವಾದನ ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಶಿಕ್ಷಣವನ್ನು ಪಡೆದು, 16ನೆಯ ವಯಸ್ಸಿನಲ್ಲೇ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡರು. ನಂತರ ಸ್ವಲ್ಪಕಾಲ ಮೈಸೂರು ಕರಿಗಿರಿರಾಯರು ಮತ್ತು ವಾಸುದೇವಾಚಾರ್ಯರಲ್ಲಿ ಗಾಯನದಲ್ಲೂ, 1908ರಿಂದ 8 – 9 ವರ್ಷಗಳ ಕಾಲ ವೀಣಾ ಶೇಷಣ್ಣನವರಲ್ಲಿ ವೀಣಾ ವಾದನದಲ್ಲೂ ಉನ್ನತ ಶಿಕ್ಷಣ ಪಡೆದರು. ತಮ್ಮ 35ನೆಯ ವಯಸ್ಸಿನಲ್ಲಿ ರಾಜ್ಯದ ಹೊರಗೆ ಪ್ರವಾಸ ಮಾಡಿ ತಿರುವಾಂಕೂರಿನ ರಾಜ ಸಭೆಯಲ್ಲಿ ಕಛೇರಿ ಮಾಡಿ 'ವೀರಸಂಗಲಿ' ಎಂಬ ಖಿಲ್ಲತ್ತುಗಳಿಂದ ಸನ್ಮಾನಿತರಾದರು. ಬರೋಡಾ, ಇಂದೂರು, ಭೂಪಾಲ್, ಶೃಂಗೇರಿ ಮುಂತಾದೆಡೆಗಳಲ್ಲಿ ಕಛೇರಿಗಳನ್ನು ಮಾಡಿ ಖ್ಯಾತರಾದರು.

ಶಿವರಾಮಯ್ಯನವರು ವಾಗ್ಗೇಯಕಾರರೂ ಆಗಿದ್ದರು. ಸ್ವರಜತಿಗಳು, ವರ್ಣಗಳು, ಕೃತಿಗಳು, ತಿಲ್ಲಾನಗಳು, ರಾಗಮಾಲಿಕೆಗಳು, ಸ್ವಯಂಭೂ ಸ್ವರರಾಗ ಪಂಚರತ್ನ ಕೃತಿ, ಸರಸ್ವತೀ ನವರತ್ನ ಮಾಲಿಕಾ, ಅನಂತ ಪದ್ಮನಾಭ ಚತುರ್ದಶ ರಾಗಮಾಲಿಕಾ ಮುಂತಾದುವನ್ನು ರಚಿಸಿದ್ದಾರೆ. ಇವುಗಳೆಲ್ಲವೂ ಪ್ರಕಟವಾಗಿಲ್ಲ.

ಮಹಾರಾಜರು ಇವರಿಗೆ "ವೈಣಿಕ ಪ್ರವೀಣ" ಎಂಬ ಬಿರುದನ್ನಿತ್ತು ಗೌರವಿಸಿದರು. ಇವರು 1940ರ ವರೆಗೆ ಮೈಸೂರಿನ ಕಿವುಡರ ಮತ್ತು ಮೂಗರ ಪಾಠ ಶಾಲೆಯಲ್ಲಿ ವೀಣಾ ಉಪಾಧ್ಯಾಯರಾಗಿದ್ದರು. ಸುಬ್ರಹ್ಮಣ್ಯ ಶರ್ಮ, ಶಂಕರನಾರಾಯಣ ಶಾಸ್ತ್ರಿ, ಎನ್. ಚೆನ್ನಕೇಶವಯ್ಯ ಮತ್ತು ಇವರ ಪುತ್ರ ಅನಂತ ಪದ್ಮನಾಭರಾವ್ ಇವರ ಶಿಷ್ಯರಲ್ಲಿ ಪ್ರಮುಖರು.

# ವೀಣಾ ವೆಂಕಟಗಿರಿಯಪ್ಪ (1887 – 1952)

ವೆಂಕಟಗಿರಿಯಪ್ಪನವರು ಮೈಸೂರಿನ ಹೊಯ್ಸಳ ಕರ್ನಾಟಕ ಬ್ರಾಹ್ಮಣ ಪಂಗಡಕ್ಕೆ ಸೇರಿದ ವೈದಿಕ ಮನೆತನದ ವೆಂಕಟರಾಮಯ್ಯ ಮತ್ತು ನರಸಮ್ಮ ಎಂಬ ದಂಪತಿಗಳ ಪುತ್ರರಾಗಿ ಜನಿಸಿದರು. ಇವರು ಕೇವಲ ಹನ್ನೊಂದು ತಿಂಗಳ ಮಗುವಾಗಿದ್ದಾಗಲೇ ಪಿತೃವಿಯೋಗವಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಪ್ರಮುಖ ವೀಣಾ ವಿದ್ವಾಂಸರಾಗಿದ್ದ ಇವರ ಮಾತಾಮಹರಾದ ದೊಡ್ಡ ಸುಬ್ಬರಾಯರು ಇವರನ್ನು ಸಾಕಿದರು ಮತ್ತು 1892ರಲ್ಲಿ ಇವರಿಗೆ ವೀಣಾ ಪಾಠವನ್ನು ಆರಂಭಿಸಿದರು. ದೊಡ್ಡ ಸುಬ್ಬರಾಯರ ಪುತ್ರ ಚಿಕ್ಕ ಸುಬ್ಬರಾಯರು ತಮ್ಮ ತಂದೆಯಂತೆಯೇ ಸುಪ್ರಸಿದ್ಧ ವೈಣಿಕರಾಗಿ ಮುಮ್ಮಡಿ ಮತ್ತು ನಾಲ್ವಡಿ ಕೃಷ್ಣರಾಜರ ಆಸ್ಥಾನಗಳಲ್ಲಿ ಸೇವೆ ಸಲ್ಲಿಸಿದರು. ತಂಗಿಯ ಮಗ ವೆಂಕಟಗಿರಿಯನ್ನು ತಮ್ಮ ದತ್ತು ಪುತ್ರನೆಂದು ಭಾವಿಸಿ ಸಾಕಿ, ಸಲಹಿ, ವೀಣಾವಾದನದಲ್ಲಿ ಶಿಕ್ಷಣವಿತ್ತು ವಿದ್ವಾಂಸರನ್ನಾಗಿ ಮಾಡಿದರು. ತರುವಾಯ ವೆಂಕಟಗಿರಿಯಪ್ಪನವರು ತಮ್ಮ ಶಿಕ್ಷಣವನ್ನು ಶೇಷಣ್ಣನವರಲ್ಲಿ ಮುಂದುವರೆಸಿ ಅವರ ಸಂಪೂರ್ಣ ಆಶೀರ್ವಾದಕ್ಕೆ ಪಾತ್ರರಾದರು.

ವೆಂಕಟಗಿರಿಯಪ್ಪನವರು ಚಿಕ್ಕಂದಿನಲ್ಲೇ ಆಸ್ಥಾನ ವಿದ್ವಾಂಸರಾಗಿ ಮಹಾರಾಜರ ವಿಶೇಷ ಕೃಪೆಗೆ ಪಾತ್ರರಾಗಿ ಆಸ್ಥಾನಕ್ಕೂ ಸಂಗೀತಕ್ಕೂ ನಾನಾ ರೀತಿಯ ಸೇವೆ ಸಲ್ಲಿಸಿದರು. ಮಹಾರಾಜರು ಅಪೇಕ್ಷಿಸಿದಾಗಲೆಲ್ಲಾ ಇವರು ವೀಣೆ ನುಡಿಸಬೇಕಾಗಿತ್ತು. ಅರಮನೆಯ ಇಂಗ್ಲೀಷ್ ಬ್ಯಾಂಡ್‌ನ ಸಂಗೀತ ನಿರ್ದೇಶಕರಾಗಿದ್ದ ಸ್ಮಿತ್ ಎಂಬುವರಿಂದ ಇಂಗ್ಲೀಷ್ ನೊಟೇಷನ್ ಪದ್ಧತಿಯನ್ನು ಇವರು ಕಲಿತರು. ಅದರಲ್ಲಿ ಕರ್ನಾಟಕ ಸಂಗೀತದ ಕೃತಿಗಳನ್ನು ಸುಮಾರು 20ಸಂಪುಟಗಳಲ್ಲಿ ಬರೆದರು. ಅರಮನೆಯ ಕರ್ನಾಟಕ ಸಂಗೀತ ವಾದ್ಯಗೋಷ್ಠಿಯ ಮುಖ್ಯಸ್ಥರೂ ಮತ್ತು ವಿದ್ವಾಂಸರ ವಾದ್ಯಗೋಷ್ಠಿಯ ಮುಖ್ಯಸ್ಥರೂ ಆದರು. ಇದಲ್ಲದೆ ಅರಮನೆಯ ಚಂದ್ರಶಾಲೆ ತೊಟ್ಟಿಯಲ್ಲಿ ನಡೆಯುತ್ತಿದ್ದ ಸಂಗೀತ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವೀಣಾ ಪಾಠವನ್ನು ಹೇಳಿಕೊಡುತ್ತಿದ್ದರು. ನವರಾತ್ರಿ ಮಹೋತ್ಸವದಲ್ಲಿ ಪ್ರತಿ ವರ್ಷವೂ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಲು ಅರ್ಹರಾದವರನ್ನು ಆಯ್ಕೆ ಮಾಡುವ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಇದಲ್ಲದೆ ಸರ್ಕಾರದ ಟ್ರೈನಿಂಗ್ ಕಾಲೇಜ್ ಮತ್ತು ಮಹಾರಾಣಿ ಪ್ರೌಢಶಾಲೆಯಲ್ಲಿ ಸಂಗೀತದ ಉಪಾಧ್ಯಾಯರಾಗಿ ಅಮೋಘವಾದ ಸೇವೆ ಸಲ್ಲಿಸಿದರು. ಮೈಸೂರು ಸರ್ಕಾರವು ನಡೆಸುವ ಸಂಗೀತ ಪರೀಕ್ಷೆಗಳ ಅಧೀಕ್ಷರಾಗಿ ಹತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಮದ್ರಾಸ್, ತಿರುಚಿ, ಮೈಸೂರು ಬಾನುಲಿ ಕೇಂದ್ರಗಳು ಇವರ ವೀಣಾ ಕಛೇರಿಗಳನ್ನು ಹಲವಾರು ಸಲ ಪ್ರಸಾರ ಮಾಡಿವೆ.

ವೆಂಕಟಗಿರಿಯಪ್ಪನವರು ಉತ್ತರ ಮತ್ತು ದಕ್ಷಿಣ ಭಾರತದ ಪ್ರವಾಸ ಮಾಡಿ ಕೊಲ್ಲಿಂಗೋಡ್, ತಿರುವಾಂಕೂರು, ಭರತಪುರ, ಕೋಟಾಸಾಂಗಣಿ, ಧರ್ಮಪುರ, ಬರೋಡ ಜಯಪುರ ಜೋಧ್‌ಪುರ, ಪುದುಕೋಟೆ ಮುಂತಾದ ಅನೇಕ ಕಡೆ

ಕಛೇರಿಗಳನ್ನು ನೀಡಿ ಸನ್ಮಾನಗಳನ್ನು ಪಡೆದು ಯಶಸ್ಸನ್ನು ಗಳಿಸಿದರು. ಕುಂಭಕೋಣದ ಜಗದ್ಗುರುಗಳು ಇವರಿಗೆ 'ವೈಣಿಕ ಶಿಖಾಮಣಿ' ಎಂಬ ಬಿರುದನ್ನಿತ್ತು ಸನ್ಮಾನಿಸಿದರು.

ಕೃಷ್ಣರಾಜ ಒಡೆಯರು 1937ರಲ್ಲಿ ಇವರಿಗೆ 'ವೈಣಿಕ ಪ್ರವೀಣ' ಎಂಬ ಬಿರುದನ್ನಿತ್ತು ಖಿಲ್ಲತ್ತುಗಳೊಂದಿಗೆ ಗೌರವಿಸಿದರು. ವೆಂಕಟಗಿರಿಯಪ್ಪನವರು ಅಖಿಲ ಭಾರತ ಸಂಗೀತ ಸಮ್ಮೇಳನ, ಮದ್ರಾಸ್ ಸಂಗೀತ ಸಮ್ಮೇಳನ ಮುಂತಾದುವುಗಳಲ್ಲಿ ಮೈಸೂರಿನ ಪ್ರತಿನಿಧಿಯಾಗಿ ಭಾಗವಹಿಸಿದರು.

ಸಂಗೀತ ಶಿಕ್ಷಕರಾಗಿ ಶಿಷ್ಯರಿಗೆ ಉಚಿತವಾಗಿ ಸಹನೆ ಮತ್ತು ಉತ್ಸಾಹದಿಂದ ಕಲಿಸುತ್ತಿದ್ದರು. ವಿದ್ಯಾರ್ಥಿಗಳಲ್ಲಿ ಇವರ ಪ್ರೀತಿ ವಾತ್ಸಲ್ಯವೂ ಅಪಾರ. 2–3 ಗಂಟೆಗಳ ಕಾಲಕ್ಕೆ ಕಡಿಮೆಯಿಲ್ಲದೆ ಇವರ ಪಾಠ ಸಾಗುತ್ತಿತ್ತು. ಇವರ ಶಿಷ್ಯರಲ್ಲಿ ಮೊದಲ ತಂಡಕ್ಕೆ ಸೇರಿದವರು ವೆಂಕಟೇಶ ಅಯ್ಯಂಗಾರರು (ವೀಣಾ ದೊರೆಸ್ವಾಮಿ ಅಯ್ಯಂಗಾರರ ತಂದೆ). ವೇಣು, ವೀಣಾ ಎರಡರಲ್ಲೂ ವಿದ್ವಾಂಸರಾಗಿದ್ದರು. ಸಂಗೀತ ಶಾಸ್ತ್ರವೇತ್ತರಾಗಿದ್ದ ಎಂ. ಚೆಲುವರಾಯಸ್ವಾಮಿ, ಮತ್ತು ಡಾ|| ನರಸಿಂಹಮೂರ್ತಿ (ಇವರು ವೆಂಕಟಗಿರಿಯಪ್ಪನವರ ಅಳಿಯಂದಿರಾದರು) ಇವರ ಇತರ ಹಿರಿಯ ಶಿಷ್ಯರು. ಇವರ ಖ್ಯಾತ ಶಿಷ್ಯರು ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್, ಆರ್.ಎನ್. ದೊರೆಸ್ವಾಮಿ, ಎಂ.ಜೆ. ಶ್ರೀನಿವಾಸ ಅಯ್ಯಂಗಾರ್, ವಿ. ದೇಶಿಕಾಚಾರ್ ಮುಂತಾದವರು. ಇವರ ಶಿಷ್ಯರ ಪೈಕಿ ರಾಜಕುಮಾರಿಯರಾದ ವಿಜಯ, ಸುಜಯ, ಮಹಾರಾಣಿ ತ್ರಿಪುರಸುಂದರಮ್ಮಣ್ಣಿ, ಅವರ ದೊಡ್ಡಮ್ಮ ಪಚ್ಚಿ ಅಮ್ಮಣ್ಣಿ, ರಂಗನಾಯಕಿ, ರಾಜಮ್ಮ ಮುಂತಾದವರನ್ನು ಹೆಸರಿಸಬಹುದು.

ವೆಂಕಟಗಿರಿಯಪ್ಪನವರಿಗೆ ತನ್ನ ಸಮಕಾಲೀನ ವಿದ್ವಾಂಸರಾಗಿದ್ದ ಮುತ್ತಯ್ಯ ಭಾಗವತರು, ಟೈಗರ್ ವರದಾಚಾರ್ಯ, ವಾಸುದೇವಾಚಾರ್ಯ ಮುಂತಾದವರಲ್ಲಿ ಅಪಾರ ಗೌರವವಿದ್ದಿತು. ಇವರು 'ಮೈಸೂರು ಬಾನಿ' ಎಂದು ಪ್ರಸಿದ್ಧಿಯಾಗಿರುವ ಶೈಲಿಯನ್ನು ಬೆಳೆಸಿದವರಲ್ಲಿ ಅಗ್ರಗಣ್ಯರು. ಈ ಶೈಲಿಯು ಮಾಧುರ್ಯ, ಕಲಾ ನೈಪುಣ್ಯ ಮತ್ತು ಗಾಯಕಿ ಆಕರ್ಷಣೆಯಿಂದ ಕೂಡಿದೆ. ಇವರು 300 ವರ್ಷಗಳಿಗೂ ಹಳೆಯದಾದ ವೀಣೆಯನ್ನು ನುಡಿಸುತ್ತಿದ್ದರು. ಇವರು ವೀಣಾ ಶಿಕ್ಷಕರಾಗಿ ಮೈಸೂರಿನ ಮಹಾರಾಣಿ ಪ್ರೌಢಶಾಲೆಯಲ್ಲಿ ಸಂಗೀತ ಕಲಿಸುತ್ತಿದ್ದರು. ಆ ಶಾಲೆಯ ಹೆಣ್ಣು ಮಕ್ಕಳ ಒಂದು ತಂಡವನ್ನು ಆರಿಸಿ ಅವರಿಗೆ ವಾದ್ಯಗೋಷ್ಠಿಯಲ್ಲಿ ತರಪೇತು ನೀಡಿ ಮಹಾರಾಜರ ಮುಂದೆ ಅವರ ಒಂದು ಕಾರ್ಯಕ್ರಮವನ್ನು ಏರ್ಪಡಿಸಿ ಪ್ರದರ್ಶಿಸಿದರು. ಮಹಾರಾಜರು ಆ ವಾದ್ಯಗೋಷ್ಠಿಯ ಉತ್ತಮವಾದ ಸಂಗೀತವನ್ನು ಮೆಚ್ಚಿ ಹೆಚ್ಚಿನ ಮೊತ್ತದ ಬಹುಮಾನವನ್ನಿತ್ತರು. ವೆಂಕಟಗಿರಿಯಪ್ಪನವರು ಹೈಸ್ಕೂಲಿನ ವಿದ್ಯಾರ್ಥಿಗಳಿಗಾಗಿ 'ಸಂಗೀತಾಮೃತಸಾರ' ಎಂಬ ಪಠ್ಯಪುಸ್ತಕವನ್ನು ರಚಿಸಿದರು.

ವೆಂಕಟಗಿರಿಯಪ್ಪನವರು ಮಹಾರಾಜರ ಪ್ರೇರಣೆಯಿಂದ ವಾಗ್ಗೇಯಕಾರರಾದರು. ಅವರ ದೀರ್ಘ ಕಾಲದ ಅಪಾರ ಅನುಭವ ಮತ್ತು ಹಿನ್ನೆಲೆ ತಮ್ಮ ಸೃಜನಶೀಲತೆಯನ್ನು ವ್ಯಕ್ತಗೊಳಿಸುವುದರಲ್ಲಿ ಸಹಾಯಕವಾದುವು.

ಸಾಹಿತ್ಯದ ನಿರ್ಮಿತಿಯಲ್ಲಿ ಅವರು ತಮ್ಮ ಶಿಷ್ಯ ಎಂ. ಚೆಲುವರಾಯಸ್ವಾಮಿಯ ನೆರವನ್ನು ಪಡೆದರು. ಅವರು 5 ವರ್ಣಗಳು, 26 ಕೃತಿಗಳು, 7 ರಾಗ ಮಾಲಿಕೆಗಳು, 4 ತಿಲ್ಲಾನಗಳು ಮತ್ತು 2 ನಗಮಾಗಳನ್ನು ರಚಿಸಿದ್ದಾರೆ. ಸಂಗೀತ ತ್ರಿಮೂರ್ತಿಗಳ ದಾರಿಯನ್ನು ಅನುಸರಿಸಿದ್ದಾರೆ ಮತ್ತು ಇತರ ಹಿರಿಯ ವಾಗ್ಗೇಯಕಾರರಿಂದಲೂ ಪ್ರಭಾವಿತರಾಗಿದ್ದಾರೆ. ಇವರ ರಚನೆಗಳಲ್ಲಿ ತಮ್ಮ ಅಂಕಿತವನ್ನು ಅಳವಡಿಸಿಲ್ಲ. ಇವೆಲ್ಲವೂ ಭಕ್ತಿ ರಸ ಪ್ರಧಾನವಾಗಿದ್ದು, ಆರ್ತಭಾವವುಳ್ಳ ದೇವತಾ ಸ್ತುತಿಗಳಾಗಿವೆ. ಇವಲ್ಲದೆ ಗಾಯಿತ್ರಿ ರಾಮಾಯಣ, ಲಕ್ಷ್ಮೀ ಅಷ್ಟಕ, ಶಿವಪಂಚಾಕ್ಷರಿ, ಶಾರದಾ ಪಂಚರತ್ನ ಮೊದಲಾದ ಭಕ್ತಿ ಸಾಹಿತ್ಯದ ಶ್ಲೋಕಗಳಿಗೆ ಅನುಗುಣವಾದ ರಾಗಗಳನ್ನು ಅಳವಡಿಸಿ ರಾಗಮಾಲಿಕೆಗಳನ್ನು ರಚಿಸಿದ್ದಾರೆ. ವಾದ್ಯಗಳಿಗೇ ಮೀಸಲಾದ ವಾದ್ಯ ಪ್ರಬಂಧಗಳೆಂಬ ಪ್ರಕಾರಗಳನ್ನು (ನಗ್ಮಾ) ರಚಿಸಿರುವವರಲ್ಲಿ ಇವರೇ ಮೊದಲಿಗರು. ಇವರ ಭಕ್ತಿರಸ ಪ್ರಧಾನವಾದ ಕೃತಿಗಳು ಇವರ ತಾತ್ವಿಕ ಸ್ವಭಾವದ ಪ್ರತೀಕಗಳಾಗಿವೆ. ಇವರ ಬೇಹಾಗ್ ರಾಗದ ವರ್ಣ ಮತ್ತು ತಿಲ್ಲಾನಗಳು ಇವರ ಗುರು ವೀಣಾ ಶೇಷಣ್ಣನವರ ರಚನೆಗಳಂತೆಯೇ ಅತ್ಯುತ್ತಮವಾದವುಗಳು. ಇವರ ವರ್ಣವು ಅಪರೂಪವಾದ ದಾಟುಸ್ವರ ಪ್ರಯೋಗಗಳು ಮತ್ತು ರಾಗದ ಸೂಕ್ಷ್ಮವಾದ ಸೊಗಸನ್ನು ಒಳಗೊಂಡಿದೆ.

ಇವರು ಅನೇಕ ಅಪರೂಪ ರಾಗಗಳಲ್ಲಿ ಕೃತಿ ರಚನೆ ಮಾಡಿರುವುದಲ್ಲದೆ ವೇದಂಡ ಗಮನ, ಪ್ರಭುಪ್ರಿಯ, ಶಾರದಾಪ್ರಿಯ, ಲಲಿತಪ್ರಿಯ, ಶಂಕರಪ್ರಿಯ, ಉಷಾಪ್ರಿಯ, ಮಹೇಶ್ವರಿ, ಭುವನಗಾಂಧಾರಿ, ಗೌಳೀಪಂತು, ದುರ್ಗಾ ಮುಂತಾದ ರಾಗಗಳಲ್ಲಿ ಸುಂದರವಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಶ್ರೀರಾಘವೇಂದ್ರ ಸ್ವಾಮಿಗಳಲ್ಲಿ ಪರಮ ಭಕ್ತಿ, ಅವರನ್ನು ಕುರಿತು "ಶ್ರೀರಾಘವೇಂದ್ರ ಜಗದ್ಗುರುವೇ" ಎಂಬ ಕೃತಿಯನ್ನು ಹಾಗೂ 'ಶ್ರೀಗೋಪಾಲ ಸೇವಾ ನಿರತಂ' ಎಂಬ ಶುಭ ಪಂತುವರಾಳಿ ರಾಗದಲ್ಲಿ ಮತ್ತೊಂದು ಸುಂದರ ಕೃತಿಯನ್ನು ರಚಿಸಿದ್ದಾರೆ. ಹೀಗೆ ವೆಂಕಟಗಿರಿಯಪ್ಪನವರು ಕರ್ನಾಟಕ ಸಂಗೀತ ಮತ್ತು ಮೈಸೂರು ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ.

## ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ (1888–1936)

ಮೈಸೂರು ಜಿಲ್ಲೆಯಲ್ಲಿ ಕಾವೇರಿ ನದಿ ತೀರದಲ್ಲಿ ಬೆಳಕವಾಡಿ ಎಂಬ ಗ್ರಾಮದಲ್ಲಿ ಶ್ರೀನಿವಾಸ ರಂಗಾಚಾರ್ಯರೆಂಬುವರು ಸಂಗೀತ ಜ್ಞಾನವುಳ್ಳವರಾಗಿದ್ದರು. ಇವರು ಶಿವನಸಮುದ್ರ ಜಗನ್ಮೋಹನ ರಂಗನಾಥ ಸ್ವಾಮಿಯ ಸೇವೆಯಲ್ಲಿ ನಿರತರಾಗಿದ್ದರು. ಇವರ ಆರನೆಯ ಮಗುವಾಗಿ ಶ್ರೀನಿವಾಸ ಅಯ್ಯಂಗಾರರು ಶಿವಗಂಗೆಯ ಸಮೀಪದಲ್ಲಿರುವ ಶಿವಗಿರಿಪುರಂ ಎಂಬಲ್ಲಿ ಜನಿಸಿದರು. ಇವರಿಗೆ 10ನೆಯ ವರ್ಷದಲ್ಲಿ ಪಿತೃವಿಯೋಗವಾಯಿತು. ನಂತರ ವೈಣಿಕರಾಗಿದ್ದ ತಮ್ಮ ಚಿಕ್ಕಪ್ಪನವರ ಆಶ್ರಯದಲ್ಲಿ ಬೆಳೆದರು. ಪ್ರಾರಂಭದ ಸಂಗೀತ ಶಿಕ್ಷಣವನ್ನು ಅವರಲ್ಲಿ ಪಡೆದು ತರುವಾಯ ಕೊಳ್ಳೇಗಾಲದಲ್ಲಿದ್ದ ಕೃಷ್ಣಭಾಗವತರಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆದರು.

ತಮ್ಮ ಇಪ್ಪತ್ತನಾಲ್ಕನೆಯ ವಯಸ್ಸಿನ ವೇಳೆಗೆ ಗದ್ವಾಲ್, ವಾರಂಗಲ್, ಆತ್ಮಕೂರು ಮತ್ತು ಇತರ ಸ್ಥಳಗಳಲ್ಲಿ ಹಾಡಿ ಗೌರವ ಹಾಗೂ ಸನ್ಮಾನಗಳನ್ನು ಪಡೆದರು. ತರುವಾಯ ಮೈಸೂರಿಗೆ ಬಂದು ವೀಣೆ ಸುಬ್ಬಣ್ಣನವರ ಶಿಷ್ಯರಾಗಿ 1912ರಿಂದ ನಾಲ್ಕು ವರ್ಷಗಳ ವಿದ್ಯಾರ್ಜನೆ ಮಾಡಿದರು. ವೀಣಾ ಶೇಷಣ್ಣನವರ ಮನೆಯಲ್ಲಿ ಕೃಷ್ಣೋತ್ಸವದಲ್ಲಿ ವೀಣಾ ವೆಂಕಟಗಿರಿಯಪ್ಪ ಮುಂತಾದ ಪ್ರಮುಖ ವಿದ್ವಾಂಸರ ಮುಂದೆ ಹಾಡಿ ಎಲ್ಲರ ಪ್ರಶಂಸೆಗೆ ಪಾತ್ರರಾದರು. ಗುರು ವೀಣಾ ಸುಬ್ಬಣ್ಣನವರು ನಾಲ್ವಡಿ ಕೃಷ್ಣರಾಜ ಒಡೆಯರು ಸಮ್ಮುಖದಲ್ಲಿ ತಮ್ಮ ಈ ಶಿಷ್ಯನ ಹಾಡುಗಾರಿಕೆಯನ್ನು ಏರ್ಪಡಿಸಿದಾಗ ಮಹಾರಾಜರು ಮೆಚ್ಚಿ ಇವರನ್ನು ತಮ್ಮ ಆಸ್ಥಾನ ವಿದ್ವಾಂಸರನ್ನಾಗಿ ನೇಮಿಸಿದರು. ತರುವಾಯ ಇವರ ಕೀರ್ತಿ ಹೆಚ್ಚಲು ತೊಡಗಿತು.

ಒಂದು ಸಲ ಮಹಾರಾಜರು 72 ಮೇಳರಾಗಗಳಲ್ಲಿ ಕೃತಿಗಳನ್ನು ರಚಿಸಿದವರಿಗೆ 500 ರೂ.ಗಳ ಬಹುಮಾನ ಕೊಡುವುದಾಗಿ ಪ್ರಕಟಿಸಿದರು. ಆಸ್ಥಾನ ವಿದ್ವಾಂಸರೆಲ್ಲರೂ ಈ ಸ್ಪರ್ಧೆಗೆ ಸೇರಿದರು. ಶ್ರೀನಿವಾಸ ಅಯ್ಯಂಗಾರರು ಹಲವು ಮೇಳರಾಗಗಳಲ್ಲಿ ಕೃತಿಗಳನ್ನು ರಚಿಸಿದರು. ಇದರಿಂದ ಪ್ರೋತ್ಸಾಹಿತರಾಗಿ "ಶ್ರೀನಿವಾಸ" ಎಂಬ ಅಂಕಿತದಲ್ಲಿ ಎರಡು ವರ್ಣಗಳನ್ನೂ, 22 ಕೃತಿಗಳನ್ನು ರಚಿಸಿದರು. ಇದನ್ನು ಬಿ.ಎಸ್. ರಾಜಯ್ಯಂಗಾರರು ಹಾಡಿ ಬಹಳ ಪ್ರಸಿದ್ಧರಾದರು. ಮೈಸೂರಿನ ನಾಗರಿಕರ ಸಮಿತಿಯು ನಗರದ ಪುರಭವನದಲ್ಲಿ ವೀಣಾ ಶೇಷಣ್ಣನವರ ಅಧ್ಯಕ್ಷತೆಯಲ್ಲಿ ಸನ್ಮಾನ ಸಭೆಯನ್ನು ನಡೆಸಿ ಇವರಿಗೆ 1500 ರೂ.ಗಳನ್ನೂ, ಸರಸ್ವತಿಯ ಚಿತ್ರವು ಕೆತ್ತಲ್ಪಟ್ಟಿರುವ ಚಿನ್ನದ ಹಾರವನ್ನೂ ಹಾಕಿ ಗೌರವಿಸಿದರು. ಇವರು ಪಿಟೀಲು, ವೀಣೆ ಮತ್ತು ಗೋಟುವಾದ್ಯ ವಾದನದಲ್ಲಿ ಪ್ರವೀಣರಾಗಿದ್ದರು. ಗೋಟುವಾದ್ಯ ವಾದನದ ಕಛೇರಿ ಮಾಡಿ ಮುತ್ತಯ್ಯ ಭಾಗವತರು ನೀಡಿದ ಚಿನ್ನದ ಪದಕವನ್ನು ಬಹುಮಾನವಾಗಿ ಪಡೆದರು. ಟಿ. ಚೌಡಯ್ಯ, ದಕ್ಷಿಣಾಮೂರ್ತಿ ಪಿಳ್ಳೆ, ದೇವಕೋಟೆ ಸುಂದರರಾಜ ಅಯ್ಯಂಗಾರರ ಪಕ್ಕವಾದ್ಯಗಳೊಡನೆ ರಾಮೇಶ್ವರ, ಮಧುರೈ ಮುಂತಾದ ಅನೇಕ ಸ್ಥಳಗಳಲ್ಲಿ ಕಛೇರಿಗಳಲ್ಲಿ ಹಾಡಿ ಮತ್ತಷ್ಟು

ಪ್ರಸಿದ್ಧರಾದರು. 1926ರ ನಂತರ ವೀಣಾ ಲಕ್ಷ್ಮೀನಾರಣಪ್ಪ ಮತ್ತು ಇವರ ಪಿಟೀಲು ವಾದನವುಳ್ಳ ಕಛೇರಿಗಳು ಆಗಿನ ಕಾಲದಲ್ಲಿ ಬಹು ಜನಪ್ರಿಯವಾಗಿದ್ದುವು.

ಇವರು ತಮ್ಮ ಗಾಯನ ಕಛೇರಿಗಳನ್ನು ಒಂದು ವರ್ಣದಿಂದ ಆರಂಭಿಸಿ ಹಲವು ಮಧ್ಯಮ ಕಾಲದ ಕೃತಿಗಳನ್ನು ರಾಗಾಲಾಪನೆ ಸಹಿತ ಹಾಡುತ್ತಿದ್ದರು. ತೋಡಿ ರಾಗವನ್ನು ಹಾಡುವುದರಲ್ಲಿ ವಿಶೇಷ ಪ್ರತಿಭಾವಂತರಾಗಿದ್ದರು. ತ್ಯಾಗರಾಜರ "ಜೇಸಿನದೆಲ್ಲ", ದೀಕ್ಷಿತರ "ಮಹಾಗಣಪತಿಂ", ಪೂಚಿ ಶ್ರೀನಿವಾಸ ಅಯ್ಯಂಗಾರರ "ಶ್ರೀವೆಂಕಟೇಶಂ" ಮತ್ತು "ಸರಗುಣ ಪಾಲಿಂಪ" ಮುಂತಾದ ಕೃತಿಗಳು ಇವರಿಗೆ ಹೆಚ್ಚು ಪ್ರಿಯವಾಗಿದ್ದುವು. ಇವರು ತಮ್ಮ ಊರಿನಲ್ಲಿ ಒಂದು ನಾಟಕದ ಕಂಪೆನಿಯನ್ನು ನಡೆಸುತ್ತಿದ್ದರು. ಮೈಸೂರಿಗೆ ಬಂದನಂತರ ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರ ಸ್ನೇಹವಾಗಿ ಅನೇಕ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದರು. ಇವರು ಅರಮನೆ ನಾಟಕದ ಮಂಡಲಿಯ ಸದಸ್ಯರಾಗಿದ್ದರು. ಇವರಿಗೆ ಶ್ರುತಿ ಶುದ್ಧವಾದ ಶ್ರೇಷ್ಠ ಶಾರೀರ ಸಂಪತ್ತಿದ್ದಿತು. ಇವರು ಒಂದು ಸಲ ತಮಿಳುನಾಡಿನ ಕೋಟ್ಟಿಯೂರು ಎಂಬಲ್ಲಿ ಒಬ್ಬ ಮಿರಾಸ್‌ದಾರರ ಮನೆಯಲ್ಲಿ ಗಾಯನ ಕಛೇರಿ ಮಾಡುತ್ತಿದ್ದುದನ್ನು ಕೇಳಿದ ಕಾರೈಕುಡಿ ಸಹೋದರರಲ್ಲಿ ಹಿರಿಯರು ಬಹಳ ಸಂತೋಷಪಟ್ಟು ಇವರ ಗಾಯನವು ಮಧುರೆ ಪುಷ್ಪವನಂ ಅಯ್ಯರ್ ಅವರನ್ನು ನೆನಪಿಗೆ ತರುತ್ತದೆ ಎಂದು ಹೇಳಿದರು. ಪುಷ್ಪವನಂ ಅವರಂತೆ ಶ್ರೀನಿವಾಸ ಅಯ್ಯಂಗಾರರು ತಮ್ಮ ಮಧ್ಯ ವಯಸ್ಸಿನಲ್ಲಿ ಕಾಲವಾದರು.

ಇವರ ಮಕ್ಕಳಾದ ಬೆಳಕವಾಡಿ ಸಹೋದರರು, ಪಿಟೀಲು ವೆಂಕಟರಮಣಯ್ಯ, ಗಾಯಕರಾದ ಸುಬ್ಬಕೃಷ್ಣಯ್ಯ, ಬಿ.ಎಸ್. ರಾಮಯ್ಯರ್ ಮುಂತಾದವರು ಇವರ ಶಿಷ್ಯರಲ್ಲಿ ಪ್ರಮುಖರು.

# ಚಿಕ್ಕರಾಮರಾಯರು (1890 – 1945)

ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಜಯಚಾಮರಾಜ ಒಡೆಯರ ಕಾಲದಲ್ಲಿ ಚಿಕ್ಕರಾಮರಾಯರು ಒಬ್ಬ ಪ್ರಸಿದ್ಧ ಆಸ್ಥಾನ ವಿದ್ವಾಂಸರಾಗಿದ್ದರು. ಇವರು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಕುರುಡಿ ಎಂಬ ಊರಿನಲ್ಲಿ ಜನ್ಮವೆತ್ತಿದರು. ಮಾಧ್ವ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಇವರ ತಂದೆ ಕೆ. ಸುಬ್ಬರಾಯರು ಪೋಲೀಸ್ ಇಲಾಖೆಯಲ್ಲಿದ್ದರು. ಇವರ ತಾಯಿ ಭಾಗಮ್ಮನವರು ದೈವಭಕ್ತೆ. ಭಾವಪೂರ್ಣವಾಗಿ ಶ್ರೀರಾಮನ ಧ್ಯಾನ ಮಾಡುತ್ತಾ ಭಕ್ತಿಗೀತೆಗಳನ್ನು ಸೊಗಸಾಗಿ ಹಾಡುತ್ತಿದ್ದರು ಮತ್ತು ಸುಶ್ರಾವ್ಯವಾಗಿ ಮಹಾಭಾರತವನ್ನೂ, ಪುರಾಣಗಳನ್ನೂ ಓದುತ್ತಿದ್ದರು. ಕೇವಲ 3 – 4 ವರ್ಷದವರಾಗಿದ್ದ ರಾಮು ತಾಯಿಯು ಹಾಡುತ್ತಿದ್ದುದನ್ನು ತದೇಕ ಚಿತ್ತದಿಂದ ಕೇಳಿ ತಾಳ ಹಾಕುತ್ತಿದ್ದರು. ಈ ವಿಷಯವು ಬಿಡಾರಂ ಕೃಷ್ಣಪ್ಪನವರಿಗೆ ತಿಳಿದು ಆ ಬಾಲಕನನ್ನು ನೋಡಲು ಇಚ್ಛಿಸಿದರು. 5 – 6 ವರ್ಷದ ಬಾಲಕ ರಾಮುವನ್ನು ತಂದೆ ಸುಬ್ಬರಾಯರು ಬಿಡಾರಂ ಕೃಷ್ಣಪ್ಪನವರ ಬಳಿ ಸಂಗೀತಾಭ್ಯಾಸಕ್ಕಾಗಿ ಕರೆತಂದಾಗ, ಆ ಬಾಲಕನು .ಸಣ್ಣಪುಟ್ಟ ಕೀರ್ತನೆಗಳನ್ನೂ, ವರ್ಣವನ್ನೂ, ತಾಳ, ಲಯಬದ್ಧವಾಗಿ ಹಾಡಿದ್ದನ್ನು ಕೇಳಿ ಸಂತೋಷಪಟ್ಟು 2ವರ್ಷಗಳ ಕಾಲ ಸಂಗೀತವನ್ನು ಕಲಿಸಿ, ನಂತರ ವೀಣಾ ಸುಬ್ಬಣ್ಣನವರ ಬಳಿ ಹೆಚ್ಚು ವಿದ್ಯೆಯನ್ನು ಕಲಿಯಲು ಕಳಿಸಿದರೆಂದು ತಿಳಿದುಬರುತ್ತದೆ. ರಾಮರಾಯರು ಮೈಸೂರು ಕರಿಗಿರಿರಾಯರು ಮತ್ತು ತಿರುವೈಯ್ಯಾರ್ ಸುಬ್ರಹ್ಮಣ್ಯ ಅಯ್ಯರ್‌ರವರಲ್ಲಿ ಇನ್ನೂ ಹೆಚ್ಚಿನ ಶಿಕ್ಷಣ ಪಡೆದು ಕಾಲಕ್ರಮದಲ್ಲಿ ಉತ್ತಮ ಗಾಯಕರಾದರು. ರಾಯರು ಶಾಕುಂತಲ ಕರ್ನಾಟಕ ಸಭಾ ಕಂಪೆನಿಯಲ್ಲೂ, ಅರಮನೆಯ ಚಾಮರಾಜೇಂದ್ರ ನಾಟಕ ಸಭೆಯಲ್ಲೂ ಹಲವಾರು ಪಾತ್ರ ವಹಿಸುತ್ತಿದ್ದರು. ಅರಮನೆಯಲ್ಲೇ ಇವರಿಗೆ ಚಿಕ್ಕರಾಮು ಎಂಬ ಹೆಸರಿನಿಂದ ಕರೆಯಲಾಯಿತು.

ರಾಯರು ಕೊಯಮತ್ತೂರ್, ಮದ್ರಾಸ್, ತಿರುಚಿರಪ್ಪಳ್ಳಿ, ತಿರುಪತಿ ಮುಂತಾದ ದಕ್ಷಿಣ ಭಾರತದ ಹಲವಾರು ಕಡೆ ಕಛೇರಿಗಳನ್ನು ಮಾಡಿ ಕೀರ್ತಿ ಮತ್ತು ಧನವನ್ನು ಗಳಿಸಿದರು. ಗಾನರತ್ನ ಮುಂತಾದ ಬಿರುದುಗಳನ್ನು ಪಡೆದರು. ಇವರು ಮನೋಧರ್ಮ ಸಂಗೀತದಲ್ಲಿ ಅಸಾಧಾರಣರಾಗಿದ್ದು, ನೆರವಲ್, ಸ್ವರ ಕಲ್ಪನೆ, ಪಲ್ಲವಿಗಳನ್ನು ಕೇವಲ ಮನೋಧರ್ಮದಿಂದಲೇ ಹಾಡುತ್ತಿದ್ದರು. ಇವರಿಗೆ ತಾಳಜ್ಞಾನವು ಅಪಾರವಾಗಿತ್ತು. ತಾಳಬ್ರಹ್ಮ ಎಂಬ ಹೆಸರು ಪಡೆದು ಕಛೇರಿಗಳಲ್ಲಿ ತಾಳವೇ ಹಾಕದೆ ಉಸಿರು ಲೆಕ್ಕದಲ್ಲಿ ಹಾಡುತ್ತಿದ್ದರು. ತಮ್ಮ ಸಂಗೀತ ಕಛೇರಿಗಳಲ್ಲಿ ಸಾಮಾನ್ಯವಾಗಿ "ವಾತಾಪಿ ಗಣಪತಿಂ", "ರಾಮನೀಯಡ", "ನಿಜದಾಸವರದ", "ಶ್ರೀಸುಬ್ರಹ್ಮಣ್ಯಾಯ ನಮಸ್ತೇ" ಮುಂತಾದ ಕೃತಿಗಳನ್ನು ಹಾಡುತ್ತಿದ್ದುದಲ್ಲದೆ ಬೇಹಾಗ್ ರಾಗದಲ್ಲಿ 'ಎಲ್ಲಿರುವೆ ತಂದೆ ಬಾರೋ' ಎಂಬ ದೇವರ ನಾಮವನ್ನು ತಪ್ಪದೆ ಸೊಗಸಾಗಿ ಹಾಡುತ್ತಿದ್ದರು. ಮಿಶ್ರಛಾಪುವಿನಲ್ಲಿರುವ ಕೃತಿಗಳನ್ನು ಖಂಡಛಾಪುವಿನಲ್ಲಿ ನಿರ್ವಹಿಸುತ್ತಿದ್ದರು. ವೀಣಾ ಶೇಷಣ್ಣನವರು ಪಲ್ಲವಿಗಳನ್ನು ನುಡಿಸುವಾಗ ಇವರಿಗೆ ತಾಳ ಹಾಕುವಂತೆ ಹೇಳುತ್ತಿದ್ದರು. ಜಯಚಾಮರಾಜ

ಒಡೆಯರು ಇವರಿಗೆ 'ಸಂಗೀತರತ್ನ' ಎಂಬ ಬಿರುದನ್ನಿತ್ತು ಗೌರವಿಸಿದರು. ಮಹಾರಾಜರ ಇಚ್ಛೆಯಂತೆ 'ಗ್ಲಾಸ್ ತರಂಗ್' ಎಂಬ ವಾದ್ಯವನ್ನು ಕೇವಲ 2 1/2 ತಿಂಗಳಲ್ಲಿ ಅಭ್ಯಾಸ ಮಾಡಿ ಅರಮನೆಯಲ್ಲಿ ನುಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಪ್ರತಿ ಗುರುವಾರ ತಪ್ಪದೆ ತಮ್ಮ ಮನೆಯಲ್ಲಿ ಭಜನೆ ನಡೆಸುತ್ತಿದ್ದರು. ಹಾಗೆಯೇ 25 ವರ್ಷಗಳ ರಾಮೋತ್ಸವವನ್ನು ವಿಜೃಂಭಣೆಯಿಂದ ನಡೆಸಿದರು.

ಚಿಕ್ಕರಾಮರಾಯರು ಖ್ಯಾತ ಸೃಜನಶೀಲ ಗಾಯಕರಾಗಿದ್ದುದಲ್ಲದೆ, ವಾಗ್ಗೇಯಕಾರರೂ ಆಗಿದ್ದರು. ವರ್ಣಗಳು, ಸ್ವರಜತಿಗಳು, ತಿಲ್ಲಾನಗಳು ಮತ್ತು ಕನ್ನಡ, ಮಾರುವ, ನಾಟ, ಆಂಧಾಳಿ, ಪಹಾಡಿ, ಮಲಯಮಾರುತ, ಶುದ್ಧ ಭೈರವಿ ಮುಂತಾದ ರಾಗಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಈ ರಚನೆಗಳು ಇವರ ಸೃಜನಶೀಲತೆ, ಪ್ರತಿಭೆ ಮತ್ತು ಕಲ್ಪನೆಯನ್ನು ಪ್ರತಿಬಿಂಬಿಸುತ್ತವೆ.

ಅರಕೆರೆ ನಾರಾಯಣರಾವ್, ರಂಗ ಮತ್ತು ಚಲನಚಿತ್ರ ನಟ ಆರ್. ನಾಗೇಂದ್ರರಾವ್, ಬೆಂಗಳೂರು ನಾಗರತ್ನಮ್ಮ, ಸೋಮಸುಂದರಂ, ಹೆಚ್.ವಿ. ರಾಮರಾವ್, ಹೆಚ್.ವಿ. ಕೃಷ್ಣರಾವ್, ಎ. ಸುಬ್ಬರಾವ್ ಮುಂತಾದವರು ಇವರ ಶಿಷ್ಯರಲ್ಲಿ ಪ್ರಮುಖರು.

## ರಾಳಪಳ್ಳಿ ಅನಂತಕೃಷ್ಣ ಶರ್ಮ (1893–1979)

ಅನಂತಕೃಷ್ಣ ಶರ್ಮ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ರಾಳಪಳ್ಳಿ ಎಂಬ ಊರಿನಲ್ಲಿ ಶ್ರೀ ವೈಷ್ಣವ ವೈದಿಕ ದಂಪತಿಗಳಾದ ಪಂಡಿತ ಕರ್ನಮಡಕಲ ಕೃಷ್ಣಮಾಚಾರ್ಯಲು ಮತ್ತು ಅಲಮೇಲು ಮಂಗಮ್ಮ ಇವರ ಪುತ್ರರಾಗಿ ಜನಿಸಿದರು. ತಮ್ಮ 13ನೆಯ ವಯಸ್ಸಿನಲ್ಲಿ ಮನೆಬಿಟ್ಟು ಮೈಸೂರಿಗೆ ಬಂದು ಪರಕಾಲ ಮಠಾಧೀಶರಾಗಿದ್ದ ಕೃಷ್ಣ ಬ್ರಹ್ಮತಂತ್ರ ಯತೀಂದ್ರ ಸ್ವಾಮಿಗಳ ಶಿಷ್ಯರಾಗಿ, ಪ್ರಾಕೃತ, ವ್ಯಾಕರಣ, ಛಂದಸ್ಸು, ಕಾವ್ಯ ನಾಟಕಗಳನ್ನೂ, ಮಹಾರಾಜ ಸಂಸ್ಕೃತ ಮಹಾಪಾಠ ಶಾಲೆಯಲ್ಲೂ ವಿದ್ಯಾಭ್ಯಾಸ ಮಾಡಿ ವಿದ್ವಾಂಸರಾದರು. ತೆಲುಗು ಸಾಹಿತ್ಯದಲ್ಲಿ ಪಂಡಿತರಾದರು. ಗುರುಗಳ ಪ್ರೋತ್ಸಾಹದಿಂದ ಮೈಸೂರು ಕರಿಗಿರಿರಾಯರು, ಚಿಕ್ಕ ರಾಮರಾಯರು ಮತ್ತು ಬಿಡಾರಂ ಕೃಷ್ಣಪ್ಪನವರಲ್ಲಿ ಸಂಗೀತ ಶಿಕ್ಷಣ ಪಡೆದರು. ಸ್ವಲ್ಪ ಕಾಲದಲ್ಲೇ ಆಸ್ಥಾನ ವಿದ್ವಾಂಸರಾಗಿ ನೇಮಕಗೊಂಡರು.

ಪ್ರಸಿದ್ಧ ವಿದ್ವಾಂಸರೂ, ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದ ಸಿ.ಆರ್. ರೆಡ್ಡಿಯವರು ಇವರನ್ನು ಮಹಾರಾಜಾ ಕಾಲೇಜಿನ ತೆಲುಗು ಪಂಡಿತರಾಗಿ ನೇಮಿಸಿದರು. ಸ್ವಲ್ಪ ಕಾಲದಲ್ಲೇ ಶರ್ಮರವರು ಎಲ್ಲರ ಪ್ರೀತಿ, ಗೌರವಗಳಿಗೆ ಪಾತ್ರರಾದರು. 1948ರಲ್ಲಿ ಸೇವೆಯಿಂದ ನಿವೃತ್ತರಾದರು ಮತ್ತು ತಿರುಪತಿಯ ಶ್ರೀವೆಂಕಟೇಶ್ವರ ವಿಶ್ವವಿದ್ಯಾನಿಲಯದ ಸಂಗೀತದ ಇಲಾಖೆಯ ಮುಖ್ಯಸ್ಥರಾಗಿ ನೇಮಕಗೊಂಡರು. ಈ ಅಧಿಕಾರಾವಧಿಯಲ್ಲಿ ಕಾಳ್ಳಪಾಕಂ ಅಣ್ಣಮಾಚಾರ್ಯರ ರಚನೆಗಳ ಏಳು ಮತ್ತು ಎಂಟನೆಯ ಸಂಪುಟಗಳನ್ನೂ, ಶೃಂಗಾರ ಮತ್ತು ಅಧ್ಯಾತ್ಮ ಕೀರ್ತನೆಗಳ ಐದು ಸಂಪುಟಗಳನ್ನು ಸಂಪಾದಿಸಿ ಹೊರತಂದರು. ಕಾಳ್ಳಪಾಕಂ ವಾಗ್ಗೇಯಕಾರರ ಕೆಲವು ರಾಗಗಳಿಗೆ ಜೀವಕಳೆ ತುಂಬಿದರು ಮತ್ತು ಅವರ 108 ರಚನೆಗಳಿಗೆ ಸ್ವರಲಿಪಿಯನ್ನು ಸಿದ್ಧಗೊಳಿಸಿದರು. ತಾಮ್ರ ಶಾಸನಗಳಲ್ಲಿದ್ದ ಅಣ್ಣಮಾಚಾರ್ಯರ ರಚನೆಗಳು ಪ್ರಕಾಶಕ್ಕೆ ಬರಲು ಇವರೇ ಕಾರಣರು. ಪುರಂದರದಾಸರ 40 ದೇವರ ನಾಮಗಳನ್ನು ತೆಲುಗಿಗೆ ರೂಪಾಂತರಿಸಿದರು ಮತ್ತು ಜಯಸೇನಾಪತಿಯ ವೃತ್ತ ರತ್ನಾವಳಿಯನ್ನು ತೆಲುಗಿಗೆ ಭಾಷಾಂತರಿಸಿದರು. ಇವರು ಸ್ವಲ್ಪ ಕಾಲ ಉಪಾಧ್ಯಾಕ್ಷರಾಗಿದ್ದ ಆಂಧ್ರ ಪ್ರದೇಶ ಸಂಗೀತ ನಾಟಕ ಅಕಾಡೆಮಿಯು ವೇಮನ, ತೆನಾಲಿರಾಮ, ಕೃಷ್ಣ ಕವಿಯ ಪಾಂಡುರಂಗ ಮಹಿಮೆಗಳನ್ನು ಕುರಿತ ಇವರ ವಿದ್ವತ್ಪೂರ್ಣವಾದ ಉಪನ್ಯಾಸಗಳು, ಗಾಥಾ ಸಪ್ತಶತಿಯ ಮತ್ತು ಸುಂದರಪಾಂಡ್ಯನ ಆರ್ಯ ಇವುಗಳ ತೆಲುಗು ಭಾಷಾಂತರ, ಸಾರಸ್ವತೋಪನ್ಯಾಸಮುಲು ಮತ್ತು ಶಾಲೀವಾಹನ ಗಾಥಾಸಪ್ತಶತಿ ಇವುಗಳನ್ನೂ ಪ್ರಕಟಿಸಲಾಗಿದೆ. ಇವರು ಸಂಗೀತ ಮತ್ತು ಸಾಹಿತ್ಯವನ್ನು ಕುರಿತು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿದ್ದಾರೆ. ಇವರ ಪ್ರಬಂಧಗಳು, ಉಪನ್ಯಾಸಗಳನ್ನೊಳಗೊಂಡ 1954ರಲ್ಲಿ ಪ್ರಕಟವಾದ ಪುಸ್ತಕವು 1971ರಲ್ಲಿ ಬಿ.ಎ. ತರಗತಿಗಳಿಗೆ ಪಠ್ಯಪುಸ್ತಕವಾಗಿತ್ತು.

ಶರ್ಮರವರಿಗೆ ಸಂದಿರುವ ಸನ್ಮಾನಗಳು ಗೌರವಗಳು ಬಿರುದುಗಳು

ಹಲವಾರು. ಶ್ರೀವೆಂಕಟೇಶ್ವರ ವಿಶ್ವವಿದ್ಯಾನಿಲಯವು ಇವರಿಗೆ ಡಿ.ಲಿಟ್. ಪದವಿಯನ್ನು, 1974ರಲ್ಲಿ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯು ಸಂಗೀತ ಕಲಾನಿಧಿ ಎಂಬ ಬಿರುದನ್ನು ನೀಡಿ ಗೌರವಿಸಿತು. ಇವರು ತಿರುಮಲೆ ತಿರುಪತಿ ದೇವಸ್ಥಾನಗಳ ಆಸ್ಥಾನ ವಿದ್ವಾಂಸರಾಗಿದ್ದರು. ಮೈಸೂರು ಪ್ರಸನ್ನ ಸೀತಾರಾಮ ಮಂದಿರದ ಸಂಗೀತ ಸಮ್ಮೇಳನಾಧ್ಯಕ್ಷರಾಗಿ 'ಗಾನಕಲಾ ಸಿಂಧು' ಎಂಬ ಬಿರುದನ್ನೂ 1970ರಲ್ಲಿ ಬೆಂಗಳೂರು ಗಾಯನ ಸಮಾಜದ ಎರಡನೆಯ ಸಂಗೀತ ಸಮ್ಮೇಳನಾಧ್ಯಕ್ಷರಾಗಿ 'ಸಂಗೀತ ಕಲಾರತ್ನ' ಎಂಬ ಬಿರುದನ್ನೂ ಆಂಧ್ರ ಪ್ರದೇಶದ ಸರ್ಕಾರದ 'ಸಂಗೀತ ಕಲಾ ಪ್ರಪೂರ್ಣ' ಎಂಬ ಬಿರುದನ್ನೂ, ಆಂಧ್ರ, ಕರ್ನಾಟಕ ಮತ್ತು ಕೇಂದ್ರ ಸರ್ಕಾರಗಳ ಅಕಾಡೆಮಿಗಳ ಪ್ರಶಸ್ತಿಗಳನ್ನು ಪಡೆದರು.

ಶರ್ಮರವರು ಗಾಯಕರಾಗಿದ್ದು ಮಾತ್ರವಲ್ಲದೆ, ಕೊಳಲು ಮತ್ತು ಪಿಟೀಲು ವಾದನದಲ್ಲಿ ಪ್ರವೀಣರಾಗಿದ್ದು ವಾಗ್ಗೇಯಕಾರರೂ ಆಗಿದ್ದರು. ಇವರು ಸಂಸ್ಕೃತ ಮತ್ತು ತೆಲುಗಿನಲ್ಲಿ ತಮ್ಮ ಒಳಗಿನ ಪ್ರೇರೇಪಣೆಯನ್ನು ಈಡೇರಿಸಿಕೊಳ್ಳಲು ಕೃತಿಗಳನ್ನು ರಚಿಸಿದರು. ಅವು ದೇವರಿಗೆ ಅರ್ಪಿಸಿದ ಹೂಗಳು. ತಮ್ಮ ಶಿಷ್ಯರಿಗೆ ಹೇಳಿಕೊಡುವುದಾಗಲೀ, ಅವುಗಳನ್ನು ಪ್ರಕಟಿಸುವುದಾಗಲೀ ಮಾಡಲಿಲ್ಲ. ಇವರ ರಚನೆಗಳು ಕಾವ್ಯ ಸೌಂದರ್ಯ, ರಾಗಭಾವ ಮತ್ತು ಭಕ್ತಿಯ ಸುಂದರ ಸಂಗಮವಾಗಿವೆ. ಜಯನಗರದ (ಬೆಂಗಳೂರು) ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲರಾಗಿದ್ದ ಇವರ ಪುತ್ರ ಆರ್.ಎ. ಫಣಿಶಾಯಿಯವರು ಒಂದು ಸಂದರ್ಭದಲ್ಲಿ ಇವರ ಕೆಲವು ರಚನೆಗಳನ್ನು ಹಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಶರ್ಮರ ಅಪಾರ ವಿದ್ವತ್ತು ಆಗಿನ ಪ್ರಮುಖ ವ್ಯಕ್ತಿಗಳಾದ ವೀಣಾ ಶೇಷಣ್ಣ, ಸುಬ್ಬಣ್ಣ, ಮೈಸೂರು ವಾಸುದೇವಚಾರ್ಯ, ಟೈಗರ್ ವರದಾಚಾರ್ಯ, ಮುತ್ತಯ್ಯ ಭಾಗವತರು ಮುಂತಾದವರ ನಿಕಟ ಸಂಪರ್ಕವನ್ನು ಉಂಟುಮಾಡಿತು. ಅವರು ಡಾ|| ಎಸ್. ರಾಧಕೃಷ್ಣನ್, ಡಾ|| ರಾಧಾ ಕುಮುದ ಮುಖರ್ಜಿ, ಪ್ರೊ|| ಎ.ಆರ್. ಕೃಷ್ಣಶಾಸ್ತ್ರಿ ಪ್ರೊ|| ವಿ. ಸೀತಾರಾಮಯ್ಯ, ಪ್ರೊ|| ಬಿ.ಎಂ. ಶ್ರೀಕಂಠಯ್ಯ, ಪ್ರೊ|| ವಿ.ಟಿ. ತಿರುನಾರಾಯಣ ಅಯ್ಯಂಗಾರ್ ಮತ್ತು ಡಾ|| ಎಸ್. ಶ್ರೀಕಂಠಶಾಸ್ತ್ರಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಾ|| ಎಂ.ಹೆಚ್. ಕೃಷ್ಣ ಅವರ ಆತ್ಮೀಯ ಗೆಳೆಯರಾಗಿದ್ದರು.

ಶರ್ಮ ಅವರು ಅನೇಕ ಶಿಷ್ಯರಿಗೆ ಸಂಗೀತ ವಿದ್ಯಾದಾನ ಮಾಡಿದರು. ಅವರಲ್ಲಿ ಪಿಟೀಲು ವಿದ್ವಾಂಸರಾದ ಟಿ.ಎಸ್. ತಾತಾಚಾರ್ಯರು, ಎ.ವಿ. ಕೃಷ್ಣಮಾಚಾರ್ಯರು, ವೀಣಾ ವಿದುಷಿ ಸರೋಜಮ್ಮ ಮುಂತಾದವರು ಪ್ರಮುಖರು. ಶರ್ಮರು ನಿವೃತ್ತರಾದ ನಂತರ ಬೆಂಗಳೂರಿನಲ್ಲಿ ನೆಲೆಸಿದರು.

# ಟಿ. ಚೌಡಯ್ಯ (1894–1967)

ಮೈಸೂರು ನಗರದಿಂದ ಸುಮಾರು 18 ಮೈಲಿ ದೂರದಲ್ಲಿ ಕಾವೇರಿ ನದಿ ತೀರದಲ್ಲಿ ತಿರುಮಕೂಡಲು ನರಸೀಪುರ ಗ್ರಾಮವಿದೆ. ಸುತ್ತಮುತ್ತಲೂ ಹಸಿರಿನಿಂದ ಕೂಡಿದ ಸ್ವಾಭಾವಿಕ ಸೌಂದರ್ಯದಿಂದ ತುಂಬಿದ ಈ ಗ್ರಾಮದ ಮಧ್ಯದಲ್ಲಿ ಪುರಾತನವಾದ ಅಗಸ್ತೇಶ್ವರ ಸ್ವಾಮಿಯ ದೇವಾಲಯವಿದೆ. ಇದರ ಒಂದು ಕಂಬದಲ್ಲಿ ಒಬ್ಬ ಸ್ತ್ರೀ ಕಮಾನಿನಿಂದ ಒಂದು ತಂತಿ ವಾದ್ಯವನ್ನು ಮಿಡಿಸುತ್ತಿರುವ ಶಿಲ್ಪವಿದೆ. ಈ ಶಿಲ್ಪವು ಸುಮಾರು ಸಾವಿರ ವರ್ಷಕ್ಕಿಂತಲೂ ಪುರಾತನ ಮತ್ತು ಚಾರಿತ್ರಿಕ ದೃಷ್ಟಿಯಿಂದ ಮುಖ್ಯವಾದುದು. ಚೌಡ್ಯಯ್ಯನವರು ಇದೇ ಊರಿನ ಸುಂದರಮ್ಮ ಮತ್ತು ಅಗಸ್ತ್ಯಗೌಡ ದಂಪತಿಗಳ ಮಗನಾಗಿ ಜನಿಸಿದರು. ತಾಯಿ ಸುಂದರಮ್ಮನವರು ಖ್ಯಾತ ನಾಟ್ಯ ವಿಶಾರದೆಯಾಗಿ, ಅಭಿನಯ ಶಾಸ್ತ್ರಗಳು ಮತ್ತು ಸಂಸ್ಕೃತದಲ್ಲಿ ಪರಿಣತರಾಗಿದ್ದರು ಮತ್ತು ಉತ್ತಮವಾದ ನಾಟ್ಯ ಪ್ರದರ್ಶನಕ್ಕೆ ಪ್ರಸಿದ್ಧರಾಗಿದ್ದರು. ಚೌಡಯ್ಯನವರು ಸಂಗೀತದಲ್ಲಿ ಪ್ರಾರಂಭಿಕ ಶಿಕ್ಷಣವನ್ನು ತಮ್ಮ ತಾಯಿಯಿಂದ ಪಡೆದರು.

ಚೌಡಯ್ಯನವರಿಗೆ ಶಾಲಾಶಿಕ್ಷಣವು ಇಷ್ಟವಿರಲಿಲ್ಲ. ಒಂದು ದಿನ ಅವರು ಕಾವೇರಿಯನ್ನು ದಾಟಲು ದೋಣಿಗೆ ಕಾಯುತ್ತಿದ್ದಾಗ ಸಮೀಪದ ಶ್ರೀವ್ಯಾಸರಾಯಸ್ವಾಮಿ ಮಠದ ಒಬ್ಬ ಪಂಡಿತರು ಬಾಲಕ ಚೌಡಯ್ಯನೊಂದಿಗೆ ಮಾತನಾಡುತ್ತಾ ಆತನ ಇಚ್ಛೆಯನ್ನು ತಿಳಿದು, ಹಸ್ತಲಕ್ಷಣವನ್ನು ಪರೀಕ್ಷಿಸಿ, ಪುಸ್ತಕಗಳನ್ನು ಕಿತ್ತುಕೊಂಡು ನದಿಗೆ ಎಸೆದು, ಬಾಲಕನನ್ನು ಅವನ ತಂದೆ ತಾಯಿಯ ಬಳಿಗೆ ಕರೆತಂದು, ಆತನಿಗೆ ಶಾಲಾ ಲೌಕಿಕ ವಿದ್ಯೆಯಿಂದ ಏನೂ ಪ್ರಯೋಜನವಾಗದು. ಆತನು ಮುಂದೆ ಒಬ್ಬ ಮಹಾಸಂಗೀತ ವಿದ್ವಾಂಸನಾಗುವನು ಎಂದು ಭವಿಷ್ಯ ನುಡಿದು ಅವನಿಗೆ ಸಂಗೀತ ಶಿಕ್ಷಣದ ಏರ್ಪಾಡು ಮಾಡಬೇಕೆಂದು ಹೇಳಿದರು.

ಮೊದಲು ಚೌಡಯ್ಯನವರು ಅವರ ಬಂಧು ಪಕ್ಕಣ್ಣನಲ್ಲಿ ಸ್ವಲ್ಪ ಶಿಕ್ಷಣ ಪಡೆದರು. ಆತನು ಅಸೂಯಾಪರನಾಗಿ ಸಂಗೀತ ಕಲಿಯಬೇಡವೆಂದು ತೊಂದರೆ ಕೊಟ್ಟನು. ಆದರೆ 1910ರಲ್ಲಿ ಚೌಡಯ್ಯನವರ ಸೋದರಮಾವ ಅವರನ್ನು ಮೈಸೂರಿಗೆ ಕರೆತಂದು ಮೈಸೂರು ಆಸ್ಥಾನ ವಿದ್ವಾಂಸರಾಗಿ ಕೀರ್ತಿ ಶಿಖರವನ್ನೇರಿದ್ದ ಬಿಡಾರಂ ಕೃಷ್ಣಪ್ಪನವರ ಗುರುಕುಲಕ್ಕೆ ಸೇರಿಸಿದರು. ಇಲ್ಲಿಂದ ಮುಂದೆ ಮೈಸೂರು ಚೌಡಯ್ಯನವರ ಮನೆಯಾಯಿತು.

ಕೃಷ್ಣಪ್ಪನವರು ಗಾಯಕರಾಗಿದ್ದುದಲ್ಲದೆ ಉತ್ತಮ ಪಿಟೀಲು ವಿದ್ವಾಂಸರಾಗಿದ್ದರು. ಗಾಯನಕ್ಕೆ ಅನುಕೂಲವಾದ ಶಾರೀರಿಕ ಸೌಖ್ಯವು ಚೌಡಯ್ಯನವರಿಗೆ ಇಲ್ಲದ್ದನ್ನು ಗುರುತಿಸಿ, ಪಿಟೀಲು ವಾದನದಲ್ಲಿ ಶಿಕ್ಷಣವನ್ನು ಕೊಡಲು ಆರಂಭಿಸಿದರು. ಕೃಷ್ಣಪ್ಪನವರಲ್ಲಿ ಗುರುಕುಲವಾಸವು ಹೂವಿನ ಸುಪ್ಪತ್ತಿಗೆಯಾಗಿರಲಿಲ್ಲ. ಪ್ರೀತಿ, ವಾತ್ಸಲ್ಯದಿಂದಿದ್ದರೂ, ಕೃಷ್ಣಪ್ಪನವರು ಬಹು ಕಠಿಣವಾದ ಶಿಸ್ತುಪಾಲಕರಾಗಿ, ದೀರ್ಘ ಕಾಲಾವಧಿಯ ಪಾಠಗಳನ್ನು ಹೇಳುತ್ತಿದ್ದರು.

ದೈಹಿಕ ವ್ಯಾಯಾಮವಲ್ಲದೆ, ಯೋಗಾಭ್ಯಾಸವಮಾಡಿ, 9–10 ಗಂಟೆಗಳ ಕಾಲಕ್ಕೆ ಕಡಿಮೆಯಿಲ್ಲದೆ ಮಧ್ಯರಾತ್ರಿ ಕಳೆಯುವವರೆಗೂ ಚೌಡಯ್ಯನವರು ಸಾಧನೆ ಮಾಡಬೇಕಿತ್ತು. ಚೌಡಯ್ಯನವರು ಈ ಕಠಿಣಕರ ಶಿಕ್ಷಣವನ್ನು ಸುಮಾರು 8 ವರ್ಷಗಳ ಕಾಲ ಪಡೆದು ಉತ್ತಮ ಪಿಟೀಲು ವಾದಕರಾದರು. ಶಿಷ್ಯನ ಪಕ್ಕವಾದ್ಯವನ್ನು ಗುರು ಕೃಷ್ಣಪ್ಪನವರು ಬಳಸಿಕೊಳ್ಳಲು ಆರಂಭಿಸಿದರು. ಕೃಷ್ಣಪ್ಪನವರ ಜೀವಿತದ ಕೊನೆಯ ದಿನಗಳವರೆಗೆ ಚೌಡಯ್ಯನವರು ತಮ್ಮ ಗುರುವಿನ ಅನೇಕ ಕಛೇರಿಗಳಿಗೆ ಪಕ್ಕವಾದ್ಯ ನುಡಿಸಿದರು.

1920ರ ದಿನಗಳಲ್ಲಿ ಧ್ವನಿವರ್ಧಕಗಳು ಬಳಕೆಗೆ ಬಂದಿರಲಿಲ್ಲ. ದೊಡ್ಡ ಸಭಾಂಗಣಗಳಲ್ಲಿ ತಮ್ಮ ವಾದನವು ಎಲ್ಲರಿಗೂ ಕೇಳಿಸುವಂತೆ ನುಡಿಸುವುದು ಪಿಟೀಲುವಾದಕರಿಗೆ ಒಂದು ಸಮಸ್ಯೆಯಾಗಿತ್ತು. ಪಿಟೀಲಿನ ಧ್ವನಿಯನ್ನು ಹೆಚ್ಚಿಸುವುದೇ ಇದಕ್ಕೆ ಉತ್ತರವೆಂದು ಚೌಡಯ್ಯನವರು ಅರಿತರು. ರಾಮಪ್ಪ ಎಂಬ ಸ್ಥಳೀಯ ವಾದ್ಯ ನಿರ್ಮಾಪಕರ ಸಹಾಯದಿಂದ 1927ರ ವೇಳೆಗೆ ಏಳು ತಂತಿಯ ಪಿಟೀಲನ್ನು ರೂಪಿಸಿದರು. ಇದರಲ್ಲಿ ಮೊದಲಿನ ಮೂರು ತಂತಿಗಳು ಆರು ಆಗಿ ಕೊನೆಯದು ಒಂದಾಗಿ ಒಟ್ಟು ಏಳು ತಂತಿಗಳಾದುವು. ಈ ಹೆಚ್ಚು ತಂತಿಗಳನ್ನು ಒಂದು ಸ್ಥಾಯಿ ಕಡಿಮೆಯಾಗಿ ಸ್ವರಕ್ಕೆ ಶೃತಿ ಮಾಡಲಾಗುವುದು. ಸದ್ಗುರು ತ್ಯಾಗರಾಜರ ಸಮಕಾಲೀನರಾದ ಷಟ್ಕಾಲ ಗೋವಿಂದ ಮಾರಾರ್, ಪಂಚಮ, ಸಾರಣಿ ಮತ್ತು ಅನುಸಾರಣಿಯ ಎರಡು ತಂತಿಗಳೊಂದಿಗೆ ಏಳು ತಂತಿಗಳುಳ್ಳ ತಂಬೂರಿಯನ್ನು ಬಳಸುತ್ತಿದ್ದರು. 19ನೆಯ ಶತಮಾನದಲ್ಲಿ ಅನುಮಂದ್ರ ಪಂಚಮಕ್ಕೆ ಶೃತಿ ಮಾಡಿದ ಐದನೆಯ ತಂತಿಯುಳ್ಳ ಐದು ತಂತಿಗಳ ಪಿಟೀಲನ್ನು ಮೂಸಿಲಾಮಣಿ ಮೊದಲಿಯಾರರು ರೂಪಿಸಿದ್ದರು. ಮಾರಾರರ ತಂಬೂರಿಯು ಬಹುಶಃ ಚೌಡಯ್ಯನವರಿಗೆ ಸ್ಫೂರ್ತಿ ನೀಡಿರಬಹುದು. ತಮ್ಮ ಸೃಷ್ಟಿಯನ್ನು ಚೌಡಯ್ಯನವರು ತಮ್ಮ ಎರಡನೆಯ ಆತ್ಮವೆಂದು ಪರಿಗಣಿಸಿ ಅದರಲ್ಲಿ ತಮ್ಮ ಇಷ್ಟ ದೈವವನ್ನು ಕಂಡರು. ಅದನ್ನು ಅಪಾರ ಶ್ರದ್ಧಾಭಕ್ತಿಯಿಂದ ಅಭ್ಯಸಿಸಿ, ಅದರ ಮೇಲೆ ಸ್ವಾಮ್ಯವನ್ನು ಪಡೆದರು.

ಚೌಡಯ್ಯನವರ ಈ ನೂತನ ವಾದ್ಯವು ಅವರ ಗುರುವಿಗೆ ಸರಿ ಬರಲಿಲ್ಲ. ಚೌಡಯ್ಯನವರು ಅದನ್ನು ಗುರುವಿಗೆ ತಿಳಿಯದೆ ಗುಟ್ಟಾಗಿ ಸಾಧಕ ಮಾಡುತ್ತಿದ್ದರು. ಒಂದು ಸಲ ತಮ್ಮ ಗುರುವಿಗೆ 7 ತಂತಿಗಳ ಪಿಟೀಲು ಪಕ್ಕವಾದ್ಯವನ್ನು ವೀಣಾ ಶೇಷಣ್ಣನವರ ಮುಂದೆ ನುಡಿಸಿದರು. ಈ ಪಿಟೀಲಿನ ಧ್ವನಿಯಿಂದ ಆಕರ್ಷಿತರಾದ ಶೇಷಣ್ಣನವರು ಇನ್ನು ಮುಂದೆ ಅದನ್ನೇ ಪಕ್ಕವಾದ್ಯವಾಗಿ ನುಡಿಸಲು ಅವಕಾಶ ಕೊಡಬೇಕೆಂದು ಕೃಷ್ಣಪ್ಪನವರಿಗೆ ಹೇಳಿದರು. ಬೇರೆ ದಾರಿಯಿಲ್ಲದೆ ಅವರು ಇದಕ್ಕೆ ಒಪ್ಪಿದರೂ, ತಮ್ಮ ಕೊನೆಯ ದಿನಗಳವರೆಗೂ ಇದರ ಪರವಾಗಿರಲಿಲ್ಲ. ಆದರೆ ತನ್ನ ಶಿಷ್ಯ ಕೀರ್ತಿಶಾಲಿಯಾದುದರಿಂದ ಸಂತೋಷಪಟ್ಟರು. ಚೌಡಯ್ಯ ಮತ್ತು ಅವರ ಏಳು ತಂತಿಗಳ ಪಿಟೀಲು ಇವೆರಡೂ ಒಂದೇ ಎಂದು ರಸಿಕರು ಭಾವಿಸಿದರು. ಜಿ.ಎನ್.ಬಿ. ಅವರು ಚೌಡಯ್ಯನವರು ಸೌಂಡಯ್ಯ ಎಂದು ಉದ್ಗರಿಸಿ ಪ್ರಶಂಸಿಸಿದರು.

ದಕ್ಷಿಣ ಭಾರತದಲ್ಲೆಲ್ಲಾ ಇವರ ರಸಿಕರ ವೃಂದವು ಬೆಳೆಯಿತು ಮತ್ತು ಆಗಿನ ಎಲ್ಲಾ ಪ್ರಮುಖ ವಿದ್ವಾಂಸರು ಇವರ ಪಕ್ಕವಾದ್ಯವನ್ನು ಬಯಸುತ್ತಿದ್ದರು.

ಅವರು ಒಬ್ಬ ಅತ್ಯುತ್ತಮ ಸೋಲೋ ಅಥವಾ ತನಿವಾದಕರಾಗಿ ತಮ್ಮ ಕೀರ್ತಿಗೆ ಮತ್ತೊಂದು ತಂತಿಯನ್ನು ಸೇರಿಸಿಕೊಂಡರು. ಆಗಿನ ಖ್ಯಾತ ಮೃದಂಗ ವಿದ್ವಾಂಸರಾಗಿದ್ದ ಪುದುಕೋಟೆ ದಕ್ಷಿಣಾಮೂರ್ತಿ ಮತ್ತು ಪಾಲ್‌ಘಾಟ್ ಮಣಿ ಅಯ್ಯರ್ ಮುಂತಾದವರು ಇವರ ತನಿ ಕಛೇರಿಗಳಿಗೆ ಪಕ್ಕವಾದ್ಯ ನುಡಿಸುತ್ತಿದ್ದರು. ಕೆಲವು ಸಲ ವೀಣೆಯನ್ನು ತಮ್ಮ ಸಹವಾದನಕ್ಕಾಗಿ ಇಟ್ಟುಕೊಳ್ಳುತ್ತಿದ್ದರು. ಪ್ರಾರಂಭದಲ್ಲಿ ಎಂ.ಜೆ. ಶ್ರೀನಿವಾಸ ಅಯ್ಯಂಗಾರರೂ, ನಂತರ ಸುಮಾರು ಹತ್ತು ವರ್ಷಗಳ ಕಾಲ ಮೈಸೂರು ದೊರೆಸ್ವಾಮಿ ಅಯ್ಯಂಗಾರರೂ ಸಹ ವೀಣಾವಾದನ ಮಾಡುತ್ತಿದ್ದರು.

ಅವರ ವಾದನವು ಯಾವಾಗಲೂ ಸಂಪೂರ್ಣತೆಯಿಂದ ತುಂಬಿರುತ್ತಿತ್ತು. ಅವರು ನುಡಿಸಲು ಪ್ರಾರಂಭಿಸಿದರೆ ಇಡೀ ಸಭಾಂಗಣವು ಸಂಗೀತಮಯವಾಗುತ್ತಿತ್ತು. ಪಿಟೀಲಿನ ಮೇಲ್ಭಾಗದಲ್ಲಿ ಅವರು ನುಡಿಸುತ್ತಿದ್ದುದು ಮನಸೆಳೆಯುತ್ತಿತ್ತು. ತಾರಸ್ಥಾಯಿ ಪಂಚಮವನ್ನು ಮೀರಿ, ಅತಿ ತಾರಸ್ಥಾಯಿಯನ್ನು ಮೀರಿ ಸುಲಭವಾಗಿ ನುಡಿಸುತ್ತಿದ್ದರು.

ಚಲನಚಿತ್ರದ ತಯಾರಿಕೆಗೆ ಕೈಹಾಕಿ 'ವಾಣಿ' ಎಂಬ ಚಿತ್ರವನ್ನು ತೆಗೆಯಲು ಪ್ರಾರಂಭಿಸಿ, ಅದಕ್ಕಾಗಿ ಹಾಡುಗಳನ್ನು ರಚಿಸಬೇಕಾಯಿತು. ಅವರು ವಾಗ್ಗೇಯಕಾರರಾಗಲು ಇದೊಂದು ಪ್ರೇರೇಪಣೆ. ಇವರು ಸುಮಾರು 27–30 ಕೃತಿಗಳನ್ನು 'ತ್ರಿಮಕುಟ' ಎಂಬ ಅಂಕಿತದಲ್ಲಿ ರಚಿಸಿದ್ದಾರೆ. ಇದು ಅವರ ಅಪಾರವಾದ ಸಂಗೀತಾನುಭವದ ಫಲ. ದೇಶದ ಹಲವು ಸ್ಥಳಗಳ ದೇವಾಲಯಗಳಿಗೆ ಹೋದಾಗ ಸ್ಫೂರ್ತಿ ಹೊಂದಿ ವಿವಿಧ ದೇವರುಗಳನ್ನು ಕುರಿತು ಕೃತಿಗಳನ್ನು ರಚಿಸಿದರು. ಕೃತಿಗಳ ಮಾತು ಸರಳ, ಅಂತ್ಯಪ್ರಾಸಗಳಿಂದ ಕೂಡಿದೆ. ಬಹುದಾರಿ ರಾಗದಲ್ಲಿ 'ಪ್ರಸನ್ನ ಗಣಪತಿ' ಎಂಬುದು ಇವರ ಪ್ರಥಮ ರಚನೆ. 'ವರಗಣಪತೇ' 'ಶಂಭೋಶಿವ' ಎಂಬ ಅಗಸ್ತೇಶ್ವರ ಸ್ವಾಮಿಯನ್ನು ಕುರಿತುದು ಎರಡನೆಯದು 'ಶೇಷಾಚಲವಾಸ' ಎಂಬುದು ತಿರುಪತಿ ಶ್ರೀನಿವಾಸ ದೇವರನ್ನು ಕುರಿತದ್ದು, 'ದೇವಿಶ್ರೀ' ಮೈಸೂರಿನ ಚಾಮುಂಡೇಶ್ವರಿ ದೇವಿಯನ್ನು, "ದೇವದೇವ ಶಯನೇಶ್ವರ" ಮತ್ತು "ಶರವಣಭವ" ಎಂಬುವು ಪಳನಿಯ" ಸುಬ್ರಹ್ಮಣ್ಯ ಸ್ವಾಮಿಯನ್ನು ಹಾಗೂ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿಯನ್ನು ಕುರಿತು ಎರಡು ರಚನೆಗಳನ್ನು ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಧಾತುವಿಗೆ ಪ್ರಮುಖ ಸ್ಥಾನವಿದೆ. ಹಮೀರ್ ಕಲ್ಯಾಣಿ, ನಳಿನಕಾಂತಿ, ಬಿಲಹರಿ, ಧನ್ಯಾಸಿ, ಸಾರಂಗ, ಬೇಗಡೆ, ಷಣ್ಮುಖಪ್ರಿಯ, ನೀಲಾಂಬರಿ, ಕದನ ಕುತೂಹಲ, ಕಾಪಿ, ಕಲ್ಯಾಣಿ ಮತ್ತು ದೇಶೀರಾಗಗಳು ಇವರಿಗೆ ವಿಶೇಷ ಪ್ರಿಯವಾಗಿದ್ದುವು. ಇವರ 27ರಚನೆಗಳಲ್ಲಿ 6ತಿಲ್ಲಾನಗಳು ಸೇರಿವೆ. ಇವರ ಶಿಷ್ಯರಾದ ಪ್ರೊ. ರಾಮರತ್ನಂ ಇವರ ರಚನೆಗಳ ಪುಸ್ತಕವೊಂದನ್ನು ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಪ್ರಕಟಿಸಿದ್ದಾರೆ.

ಚೌಡಯ್ಯನವರಿಗೆ ಲಭಿಸಿದ ಬಿರುದುಗಳು, ಗೌರವಗಳು, ಸನ್ಮಾನಗಳು ಅನೇಕ.

1940ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ ಸಂಗೀತರತ್ನ ಎಂಬ ಬಿರುದನ್ನಿತ್ತು ಖಿಲ್ಲತ್ತುಗಳೊಡನೆ ಗೌರವಿಸಿದರು. ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಅಧ್ಯಕ್ಷತೆಯನ್ನು ವಹಿಸಿ 1957ರಲ್ಲಿ ಸಂಗೀತ ಕಲಾನಿಧಿ ಎಂಬ ಬಿರುದನ್ನು ಪಡೆದರು. ಇವರು ಮೈಸೂರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲೆಗಳ ಕಾಲೇಜಿನ ಸ್ಥಾಪನೆಗೆ ಕಾರಣರಾದರು. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಮತ್ತು ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದರು.

ಇವರಿಗೆ ಅನೇಕ ಶಿಷ್ಯರಿದ್ದರು. ಪಾಲ್‌ಘಾಟ್ ಸಿ.ಆರ್. ಮಣಿ, ಕಂಡದೇವಿ, ಅಳಗಿರಿ ಸ್ವಾಮಿ, ಆರ್.ಕೆ. ವೆಂಕಟರಾಮಶಾಸ್ತ್ರಿ, ವಿ. ಸೇತುರಾಮಯ್ಯ, ಹೆಚ್.ಆರ್. ಸೀತಾರಾಮ ಶಾಸ್ತ್ರಿ, ಪ್ರೊ॥ ವಿ. ರಾಮರತ್ನಂ, ಹೆಚ್.ಎಸ್. ಅನಸೂಯ ಮುಂತಾದವರು ಇವರಲ್ಲಿ ಪ್ರಮುಖರು. ಇವರ ತಮ್ಮಂದಿರೇ ಆಗಿದ್ದ ಟಿ. ಗುರುರಾಜಪ್ಪನವರು ಪಿಟೀಲು ವಾದಕರಾಗಿದ್ದರು. (ಇವರ ಪುತ್ರ ಟಿ.ಜಿ. ತ್ಯಾಗರಾಜನ್ ಈಗಿನ ಒಬ್ಬ ಖ್ಯಾತ ತರುಣ ಪಿಟೀಲು ವಾದಕರು), ಇವರ ಶಿಷ್ಯರಲ್ಲಿ ವಿ. ಸೇತುರಾಮಯ್ಯ ಮತ್ತು ಸಿ.ಆರ್. ಮಣಿ ಏಳು ತಂತಿಗಳ ಪಿಟೀಲು ವಾದನವನ್ನು ಮುಂದುವರಿಸಿದರು. ಇವರ ಶಿಷ್ಯ ರಂಗಸ್ವಾಮಿಯ ಶಿಷ್ಯರಾದ ಕೆ.ಜೆ. ವೆಂಕಟಾಚಾರ್ ಏಳು ತಂತಿಯ ಪಿಟೀಲನ್ನು ನುಡಿಸುತ್ತಾರೆ. ಇವರು ದೌಹಿತ್ರ ಅಂಬರೀಷ್ ಒಬ್ಬ ಖ್ಯಾತ ಕನ್ನಡ ಚಲನಚಿತ್ರ ನಟರಾಗಿದ್ದಾರೆ.

ತಮ್ಮ ಗುರು ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ, 'ಅಯ್ಯನಾರ್ ಸಂಗೀತದ ಕಾಲೇಜ್' ಎಂಬ ಕಲಾಶಾಲೆಯನ್ನೂ, ಅದರ ಒಂದು ಶಾಖೆಯನ್ನು ಬೆಂಗಳೂರಿನಲ್ಲೂ ಸ್ಥಾಪಿಸಿದರು. ಈಗ ರಾಮಮಂದಿರದಿಂದ ಬೇರೆ ಕಡೆಗೆ ವರ್ಗಾಯಿಸಲ್ಪಟ್ಟಿರುವ ಮೈಸೂರಿನ ಕಲಾಶಾಲೆಗೆ ಕೆ.ಜೆ. ವೆಂಕಟಾಚಾರ್ಯರು ಪ್ರಾಂಶುಪಾಲರಾಗಿದ್ದಾರೆ. ಚೌಡಯ್ಯನವರು ಇದೇ ರಾಮಮಂದಿರದ ಕಾರ್ಯದರ್ಶಿಯಾಗಿದ್ದು ಪ್ರತಿವರ್ಷವೂ ರಾಮೋತ್ಸವವನ್ನು ನಡೆಸಿಕೊಂಡು ಬರುತ್ತಿದ್ದರು. ಅವರಿಂದ ಆಹ್ವಾನಿತರಾಗಿ ಬರುವುದು ಒಂದು ಗೌರವವೆಂದು ಭಾವಿಸಿ ರಾಜ್ಯದ ಹೊರಗಿನ ಅನೇಕ ಖ್ಯಾತ ವಿದ್ವಾಂಸರು ಈ ಉತ್ಸವದಲ್ಲಿ ಭಾಗವಹಿಸಿ ಕಛೇರಿಗಳನ್ನು ಮಾಡುತ್ತಿದ್ದರು. ಹೊರಗಿನ ಸಂಗೀತದಿಂದ ಮೈಸೂರು ಬಾಣಿಯು ಪಚ್ಚು ಗಮಕಯುತವಾಗಿ ಲಲಿತವಾಗಲು ಚೌಡಯ್ಯನವರು ಪರೋಕ್ಷವಾಗಿ ಕಾರಣರಾದರು. ಸಂಗೀತ ಲೋಕದ ತಾರೆಯಾದ ಚೌಡಯ್ಯನವರು ಪಿಟೀಲಿನ ಇಂಪಾದ ನಾದ ಸ್ವಾಮ್ಯವನ್ನು ಸಾಧಿಸಿದ ಒಬ್ಬ ಮಹಾನ್ ಕಲಾವಿದರು.

# ವೀಣಾ ಕೃಷ್ಣಮಾಚಾರ್ಯ

ಕೃಷ್ಣಮಾಚಾರ್ಯರು ಪ್ರತಿಭಾವಂತ ಗಾಯಕರಾಗಿದ್ದ ಟೈಗರ್ ವರದಾಚಾರ್ಯ ಮತ್ತು ಸಂಗೀತಶಾಸ್ತ್ರ ವಿದ್ವಾಂಸರಾಗಿದ್ದ ಕೆ.ವಿ. ಶ್ರೀನಿವಾಸ ಅಯ್ಯಂಗಾರರ ಕಿರಿಯ ಸಹೋದರರು. ಇವರು ಗಾಯಕರಾಗಿದ್ದುದಲ್ಲದೆ, ಶ್ರೇಷ್ಠ ವೈಣಿಕರೂ, ಸಾಹಿತ್ಯ, ನಾಟ್ಯಶಾಸ್ತ್ರ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳು ತೆಲುಗು, ತಮಿಳು, ಕನ್ನಡ, ಸಂಸ್ಕೃತಗಳಲ್ಲಿ ವಿದ್ವಾಂಸರಾಗಿದ್ದರು. ಹಲವು ವರ್ಷಗಳ ಕಾಲ ಮದ್ರಾಸಿನಲ್ಲಿದ್ದು ನಂತರ ಬೆಂಗಳೂರಿನಲ್ಲಿ ನೆಲೆಸಿದರು. ಇವರು ವೀಣೆಯನ್ನು ಊರ್ಧ್ವಮುಖವಾಗಿ ನಿಲ್ಲಿಸಿಕೊಂಡು ನುಡಿಸುತ್ತಿದ್ದರು. ಅನಾರೋಗ್ಯದಿಂದಿದ್ದರೂ ಅವರ ದೈವಭಕ್ತಿಗೆ ಅದು ಅಡಚಣೆಯಾಗಲಿಲ್ಲ. ಸಂಗೀತ ಮಾಧ್ಯಮದ ಮೂಲಕ ದೈವ ಕೃಪೆಗಾಗಿ ತಮ್ಮನ್ನು ಅರ್ಪಿಸಿಕೊಂಡರು.

ಕೃಷ್ಣಮಾಚಾರ್ಯರು ಒಬ್ಬ ಶ್ರೇಷ್ಠ ವಾಗ್ಗೇಯಕಾರರಾಗಿದ್ದರು. ಆದಿತಾಳ ಮತ್ತು ಅಟತಾಳಗಳಲ್ಲಿ ಜತಿಸ್ವರಗಳು ಮತ್ತು ವರ್ಣಗಳನ್ನೂ, ಪದವರ್ಣಗಳನ್ನೂ, ತೆಲುಗು, ತಮಿಳು ಮತ್ತು ಮಣಿಪ್ರವಾಳದಲ್ಲಿ ಕೃತಿಗಳನ್ನೂ, ಜಾವಳಿಗಳು, ತಿಲ್ಲಾನಗಳು, ತರಾನಗಳು ಮತ್ತು ದೇವರ ನಾಮಗಳನ್ನೂ ರಚಿಸಿರುವರು. ಅವರ ವಿವಿಧ ರಚನೆಗಳು 400 ಕ್ಕಿಂತ ಮಿಗಿಲಾಗಿವೆ. ತಮ್ಮ ರಚನೆಗಳಲ್ಲಿ ''ಪದ್ಮಪೂರಿವರದ'' ಎಂಬ ಮುದ್ರೆಯನ್ನು ಹೆಚ್ಚಾಗಿಯೂ, ''ಪಾಂಡುರಂಗ'' ಮತ್ತು ''ತಿರುವೆಂಗಡ'' ಎಂಬ ಅಂಕಿತಗಳನ್ನು ಹೆಚ್ಚಾಗಿ ತಮಿಳು ಕೃತಿಗಳಲ್ಲೂ, ''ವರದ'' ಎಂಬುದನ್ನು ಕೆಲವು ಕೃತಿಗಳಲ್ಲೂ, ಇನ್ನು ಕೆಲವಲ್ಲಿ ''ವಸಂತಪುರೀಶ'' ಮತ್ತು ''ತಿಲ್ಲೆನಟರಾಜ'' ಎಂಬ ವಿವಿಧ ಮುದ್ರೆಗಳನ್ನು ಬಳಸಿದ್ದಾರೆ. ಹಿಂದೂಸ್ಥಾನಿ ಖಮಾಚ್ ಮುಂತಾದ ರಾಗಗಳಲ್ಲೂ, ಹಿಂದೂಸ್ಥಾನೀ ಅಸಾವೇರಿ, ಭೈರವಿ, ಕೇದಾರ್, ಹಮೀರ್ ಕಲ್ಯಾಣಿ, ದೇಶ್, ಭಾಗೇಶ್ರೀ, ಜೋಗಿಯಾ, ಮಿಶ್ರಝಂಝೂಟಿ ಮತ್ತು ಪೀಲ್ ರಾಗಗಳಲ್ಲಿ ಜಾವಳಿಗಳನ್ನೂ ರಚಿಸಿದ್ದಾರೆ. ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಕೆಲವು ಪದ್ಯಗಳಿಗೆ ಸ್ವರ ಸಂಯೋಜನೆ ಮಾಡಿದ್ದಾರೆ. ಅವರು ರಚಿಸಿ ಭಗವಂತನ ಪಾದಾರವಿಂದಗಳಲ್ಲಿ ಅರ್ಪಿಸಿರುವ ರಚನೆಗಳಲ್ಲಿ ಸದ್ಗುರು ತ್ಯಾಗರಾಜರ ಪ್ರಭಾವ ಎದ್ದು ತೋರುತ್ತದೆ. ಇದು ಅವರ ಆತ್ಮನಿವೇದನಾ ರೀತಿಯಾಗಿತ್ತು.

ಕೃಷ್ಣಮಾಚಾರ್ಯರಿಗೆ ಹಲವು ಶಿಷ್ಯರಿದ್ದರು. ಅವರಲ್ಲಿ ಪ್ರಮುಖರಾದ ಬೆಂಗಳೂರು ಜಿ. ಚೆನ್ನಮ್ಮನವರು ತಮ್ಮ ಗುರುವಿನ 108 ರಚನೆಗಳನ್ನು ಸ್ವರಲಿಪಿ ಸಹಿತ ಪುಸ್ತಕ ರೂಪದಲ್ಲಿ ಪ್ರಕಟಿಸಿ ಹೊರತಂದಿದ್ದಾರೆ.

# ಸಿ. ರಂಗಯ್ಯ (1895 – 1984)

ರಂಗಯ್ಯನವರು ಮೈಸೂರು ಜಿಲ್ಲೆಯ ಚಿಲಕುಂದ ಗ್ರಾಮದ ಒಂದು ಬ್ರಾಹ್ಮಣ ಮನೆತನದಲ್ಲಿ ಜನಿಸಿದರು. ಮೈಸೂರಿನ ಸದ್ವಿದ್ಯಾಪಾಠಶಾಲಾ ಮತ್ತು ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದರು. ತರುವಾಯ ಉಪಾಧ್ಯಾಯ ವೃತ್ತಿಯ ತರಬೇತಿಯನ್ನು ಪಡೆದು ಸರ್ಕಾರಿ ಉಪಾಧ್ಯಾಯರ ತರಬೇತಿ ಸಂಸ್ಥೆಯಲ್ಲಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಶ್ರೀಕೃಷ್ಣಗಾನ ಸಭೆಯಲ್ಲಿ ನಡೆಯುತ್ತಿದ್ದ ಸಂಗೀತ ಕಛೇರಿಗಳನ್ನು ಕೇಳಿ ಆಕರ್ಷಿತರಾಗಿ ಪ್ರಾರಂಭದಲ್ಲಿ ವೀಣಾ ಶಿವರಾಮಯ್ಯ ನಂತರ ಚಿಕ್ಕರಾಮರಾವ್ ತರುವಾಯ ವೀಣಾ ವೆಂಕಟಗಿರಿಯಪ್ಪನವರಲ್ಲಿ ಸಂಗೀತ ಶಿಕ್ಷಣ ಪಡೆದು ಆನಂತರ ಮೈಸೂರು ವಾಸುದೇವಾಚಾರ್ಯರಲ್ಲಿ ಪ್ರೌಢ ಶಿಕ್ಷಣ ಪಡೆದು ವಿದ್ವಾಂಸರಾದರು. ತಮ್ಮದೇ ಆದ ಒಂದು ಸಂಗೀತ ಶಾಲೆಯನ್ನು ಸ್ಥಾಪಿಸಿ 50 ವರ್ಷಗಳಿಗೂ ಮೀರಿದ ಕಾಲಾವಧಿಯಲ್ಲಿ ಅನೇಕ ಶಿಷ್ಯರಿಗೆ ವಿದ್ಯಾದಾನ ಮಾಡಿದರು. ಸಂಗೀತದ ಪ್ರಥಮ ಪಾಠಗಳು ಮುಂತಾದ ಪಠ್ಯಪುಸ್ತಕಗಳನ್ನು ಸಂಗೀತದ ವಿವಿಧ ದರ್ಜೆಯ ವಿದ್ಯಾರ್ಥಿಗಳಿಗಾಗಿ ಬರೆದು ಪ್ರಕಟಿಸಿದರು. ದೇಶಾದ್ಯಂತ ಪ್ರವಾಸ ಮಾಡಿ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ತಮ್ಮ ಗಾಯನ ಕಛೇರಿಗಳನ್ನು ಮಾಡಿದರು. ಮೈಸೂರು ಆಕಾಶವಾಣಿ ಕೇಂದ್ರವೂ ಇವರ ಗಾಯನವನ್ನು ಪ್ರಸಾರ ಮಾಡಿತು. ಮದ್ರಾಸ್ ಮ್ಯೂಸಿಕ್ ಅಕಾಡೆಮಿ, ಬೆಂಗಳೂರು ಗಾಯನ ಸಮಾಜ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ರಾಗ, ತಾನ, ಪಲ್ಲವಿಗಳನ್ನು ಕುರಿತ ಪ್ರಾತ್ಯಕ್ಷಿಕೆಗಳನ್ನು ಮಾಡಿ ತಮ್ಮ ರಚನೆಗಳನ್ನು ಹಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ ಸಮ್ಮುಖದಲ್ಲಿ ಹಾಡಿ ಅವರಿಂದ ಸನ್ಮಾನಿತರಾದರು. ಇವರಿಗೆ ಸಂಗೀತ ಶಾಸ್ತ್ರ ವಿಶಾರದ ಮುಂತಾದ ಬಿರುದುಗಳು ಮತ್ತು ಸನ್ಮಾನಗಳು ದೊರಕಿವೆ.

ರಂಗಯ್ಯನವರು ಬಹಳ ಸಭ್ಯ ವ್ಯಕ್ತಿಗಳೂ, ಕ್ರೀಡೆಗಳಲ್ಲಿ ಬಹು ಆಸಕ್ತಿಯನ್ನು ಹೊಂದಿದ್ದರು. ಸೃಜನಶೀಲ ವಾಗ್ಗೇಯಕಾರರೂ ಆಗಿದ್ದರು. ತಮ್ಮ ಗುರು ವಾಸುದೇವಾಚಾರ್ಯರ ಪ್ರೇರಣೆ ಹಾಗೂ ಪ್ರೋತ್ಸಾಹದಿಂದ ಕೃತಿಗಳನ್ನು ರಚಿಸಲಾರಂಭಿಸಿದರು. ಕಲ್ಯಾಣಿ ರಾಗದಲ್ಲಿರುವ ''ಭಜಾಮ್ಯಾಹಂ ಶ್ರೀ ವಿಶ್ವೇಶ್ವರಂ' ಎಂಬುದು ಇವರ ಪ್ರಥಮ ರಚನೆ. ಶೃಂಗೇರಿ ಜಗದ್ಗುರು ಶ್ರೀಚಂದ್ರಶೇಖರ ಭಾರತಿಯವರ ಆಶೀರ್ವಾದ ಪಡೆದು ದೇವ ಮನೋಹರಿ ರಾಗದಲ್ಲಿ 'ಮಾಮವ ಶಾರದೆ ವರದೆ' ಎಂಬ ಕೃತಿಯನ್ನು ರಚಿಸಿ ಹಾಡಿದಾಗ ಜಗದ್ಗುರುಗಳು ಇತರ ದೈವಗಳನ್ನು ಕುರಿತು ರಚಿಸಬೇಕೆಂದು ಸೂಚಿಸಿದರು. ರಂಗಯ್ಯನವರ ರಚನೆಗಳು 400ಕ್ಕೂ ಹೆಚ್ಚಾಗಿವೆ. ಇವು ಗೀತ, ಸ್ವರಜತಿ, ವರ್ಣ, ಕೃತಿ ತಿಲ್ಲಾನ, ಪದ, ಪದವರ್ಣ, ದೇವರ ನಾಮ ಮತ್ತು ಸಂಗೀತ ರೂಪಕಗಳನ್ನು ಒಳಗೊಂಡಿವೆ. 72 ಮೇಳರಾಗಗಳಲ್ಲಿ ಮತ್ತು 35 ತಾಳಗಳ 5 ಗತಿಗಳಲ್ಲಿ ಕೃತಿಗಳನ್ನು ರಚಿಸಿರುವವರಲ್ಲಿ ಇವರು ಮೂರನೆಯವರು. ಇವರ ಗೀತಗಳಲ್ಲಿ ಸಪ್ತತಾಳೇಶ್ವರಿ ಗೀತವು ವಿಶಿಷ್ಟವಾದುದು. ಇದು ರಚನಾಕೌಶಲ್ಯದಲ್ಲಿ ಒಂದು ವಿಶಿಷ್ಟವಾದ ಸಾಧನೆಯಾಗಿದೆ. ಏಕೆಂದರೆ ಇದನ್ನು ಧ್ರುವ, ಮಠ್ಯ ಮುಂತಾದ ಸಪ್ತತಾಳಗಳಲ್ಲಿ ಹಾಡಬಹುದು

ಮತ್ತು ಪ್ರತಿತಾಳಕ್ಕೂ ಹೊಂದಿಕೊಳ್ಳುತ್ತದೆ. ಮಧುರಾಲಾಪ, ಸುಕುಮಾರಿ, ಶಂಕರ ಮೋಹನ, ಶಂಭುಧ್ವಜ, ನಿಗಮಗಾಮಿನಿ, ನಾದಕಲ್ಯಾಣಿ, ಕೋಕಿಲದೀಪ, ಜಯಷಣ್ಮುಖಿ, ತ್ಯಾಗಹಂಸ, ನವಸೂತಿಕಾ, ಬಿಲ್ವದಳ, ಚಂದ್ರಿಕಾತೋಡಿ, ಚಂದ್ರರೇಖಾ, ಜಯಮೋಹನ, ಗಮನವಾಣಿ, ಬಿಭಾಸು, ಗಮಕಸಾವಂತ ಮುಂತಾದ 20 ಹೊಸ ರಾಗಗಳನ್ನು ಸೃಷ್ಟಿಸಿ ಇವುಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ವೇದಗಾನವನ್ನಾಧರಿಸಿ ಏಕಸ್ವರಿ, ದ್ವಿಸ್ವರಿ, ತ್ರಿಸ್ವರಿ ಮತ್ತು ಸ್ವರಾಂತ ಚತುಸ್ವರಿ ರಾಗಗಳಲ್ಲಿ ಕೃತಿರಚನೆ ಮಾಡಿದ್ದಾರೆ. ಅವರು ತೆಲುಗಿನಲ್ಲಿ ಪರಿಣತರಾಗಿದ್ದರೂ, ಸಂಸ್ಕೃತ ಮತ್ತು ಕನ್ನಡದಲ್ಲಿ ರಚಿಸಿದ್ದಾರೆ. ಅಸುರಭಕ್ತಿ ನರಸಿಂಹಾವತಾರ, ನಿಷ್ಠುರ ವೈರಾಗ್ಯ ಮತ್ತು ದೈವರಕ್ಷಿತ ಚಂದ್ರಹಾಸ ಎಂಬುವ ಅವರ ಸಂಗೀತ ರೂಪಕಗಳು ಈ ಪೌರಾಣಿಕ ಉಪಾಖ್ಯಾನಗಳನ್ನು ಕುರಿತ ಒಂದು ನೂತನ ದೃಷ್ಟಿಯಿಂದ ರಚಿಸಲ್ಪಟ್ಟಿವೆ. ಇವರ ಕೃತಿಗಳು ಸ್ಪಷ್ಟತೆಯಿಂದಿದ್ದು ಎಲ್ಲಾ ಪ್ರದೇಶಗಳ ಶ್ರೋತೃಗಳಿಗೆ ಅರ್ಥವಾಗುವಂತಿವೆ. ಇವರು ತಮ್ಮ ರಚನೆಗಳಲ್ಲಿ "ರಂಗ", "ರಂಗನಾಥ" ಮತ್ತು "ವಾಸರಂಗ" ಎಂಬ ಅಂಕಿತಗಳನ್ನು ಬಳಸಿದ್ದಾರೆ. ಇವರ ಮೇಳರಾಗ ಕೃತಿಗಳಲ್ಲಿ ರಾಗಮುದ್ರೆಗಳನ್ನು ಬಳಸಲಾಗಿದೆ.

ಇವರ ಸಂಗೀತ ರೂಪಕಗಳನ್ನು, ಕೆಲವು ರಚನೆಗಳ ಸಾಹಿತ್ಯ ಮಾತ್ರವಿರುವ ಒಂದು ಪುಸ್ತಕ ಮತ್ತು ಸಾಹಿತ್ಯ ಮತ್ತು ಸ್ವರಮಟ್ಟು ಸಹಿತವಿರುವ ಮತ್ತೊಂದು ಪುಸ್ತಕವನ್ನು ಇವರ ಶಿಷ್ಯರಾದ ಡಾ। ಬಿ.ಜೆ. ರಂಗನಾಥ್ ಮತ್ತು ಅವರ ಪುತ್ರ ಸಿ.ಆರ್. ವಾಸುದೇವ ಹಾಗೂ ಆರ್. ಶ್ರೀಮತಿಯವರು ಪ್ರಕಟಿಸಿದ್ದಾರೆ.

ರಂಗಯ್ಯನವರು ತಮ್ಮ ಜೀವಿತದ ಕೊನೆಯ ದಿನದವರೆಗೂ ಆರೋಗ್ಯವಂತರಾಗಿದ್ದು ಚಟುವಟಿಕೆಯಿಂದಿದ್ದರು. ತಮ್ಮ ಅಂತ್ಯಕಾಲದ ಅರಿವಿದ್ದಿತೆಂದು ಕಾಣುತ್ತದೆ. ಆಗ ಅವರು ತಮ್ಮ ಎಲ್ಲಾ ಮಕ್ಕಳು ಮತ್ತು ಶಿಷ್ಯರನ್ನು ತಮ್ಮ ಸಮೀಪದಲ್ಲಿರುವಂತೆ ಹೇಳಿ, ಅವರೆಲ್ಲರೂ ಶ್ರೀರಾಮಭಜನೆ ಮಾಡುತ್ತಿರುವಾಗ ಶಾಂತವಾಗಿ ಪರಮಾತ್ಮನಲ್ಲಿ ಸೇರಿ ಹೋದರು. ಈ ಸಂದರ್ಭವು ಸದ್ಗುರು ತ್ಯಾಗರಾಜರ ಕೊನೆಯ ದಿನವನ್ನು ಸ್ಮರಣೆಗೆ ತರುತ್ತದೆ.

# ಬಿ.ಕೆ. ಪದ್ಮನಾಭರಾವ್ (1903 – 1966)

ಪದ್ಮನಾಭರಾಯರು ಗಾದೆಯಂತೆ ಚಿನ್ನದುದ್ಧರಣೆಯನ್ನು ತಮ್ಮ ಬಾಯಲ್ಲಿಟ್ಟುಕೊಂಡು ಜನಿಸಿದರು. ಇವರ ತಂದೆ 98ವರ್ಷಗಳು ಬಾಳಿದ ಶ್ರೀಮಂತ ನ್ಯಾಯವಾದಿ ಬಂಗ್ಲೆ ಕೃಷ್ಣರಾಯರು. ಕೃಷ್ಣರಾಯರು ಧಾರ್ಮಿಕ ಪ್ರವೃತ್ತಿಯುಳ್ಳ ಶಿಸ್ತಿನ ವ್ಯಕ್ತಿಯಾಗಿದ್ದು ವಾರಣಾಸಿಯಲ್ಲಿ ಒಂದು ಸ್ನಾನ ಘಟ್ಟವನ್ನು ಕಟ್ಟಿಸಿದರು.

ಪದ್ಮನಾಭರಾಯರು ಮೈಸೂರು ರಾಯಲ್ ಸ್ಕೂಲಿನಲ್ಲಿ ಎಂಟ್ರನ್ಸ್ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದರು. ತಮ್ಮ ಸಂಗೀತ ಶಿಕ್ಷಣವನ್ನು ವೀಣಾ ಸುಬ್ಬಣ್ಣ, ಮುತ್ತಯ್ಯ ಭಾಗವತರು, ಚಿಕ್ಕರಾಮರಾಯರಲ್ಲಿ ಪಡೆದು ತರುವಾಯ ಸುಮಾರು 20ವರ್ಷಗಳ ಕಾಲ ಮೈಸೂರು ವಾಸುದೇವಾಚಾರ್ಯರ ಶಿಷ್ಯರಾಗಿದ್ದರು. ನಾ. ಚೆನ್ನಕೇಶವಯ್ಯ ಮತ್ತು ವಿ.ಎನ್. ರಾವ್ ಇವರ ಸಹಪಾಠಿಗಳಾಗಿದ್ದರು. ತಮ್ಮ ಮೊದಲ ಸಂಗೀತದ ಗುರುವಾದ ವೀಣಾ ಶಿವರಾಮಯ್ಯನವರಲ್ಲಿ ಸುಮಾರು 25 ರಚನೆಗಳನ್ನು ಕಲಿತರು. ತಮ್ಮ ಗುರು ವಾಸುದೇವಾಚಾರ್ಯರೊಡನೆ ಅವರು ಕಛೇರಿಗಳಿಗಾಗಿ ದೇಶಾದ್ಯಂತ ಪ್ರವಾಸ ಮಾಡಿದರು. ನಂತರ ಟಿ. ಚೌಡಯ್ಯ ಮತ್ತು ಟಿ.ಎಂ. ಪುಟ್ಟಸ್ವಾಮಯ್ಯನವರ ಪಕ್ಕವಾದ್ಯಗಳ ಸಹಿತ ಸ್ವತಂತ್ರವಾಗಿ ಕಛೇರಿಗಾನ ಮಾಡಲಾರಂಭಿಸಿದರು. ಅನೇಕ ವರ್ಷಗಳ ಕಾಲ ಬಿಡಾರಂ ಕೃಷ್ಣಪ್ಪನವರ ಶ್ರೀರಾಮಮಂದಿರದ ಕಾರ್ಯದರ್ಶಿಯಾಗಿ ಮತ್ತು ಸಂಗೀತ ಕಲಾಭಿವರ್ಧಿನಿ ಸಭೆಯ ಪ್ರಥಮ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

ಶ್ರೀಮಂತರಾಗಿದ್ದರಿಂದ ತಮ್ಮ ಶಿಷ್ಯರಿಗೆ ರಾಯರು ಉಚಿತ ಸಂಗೀತ ಶಿಕ್ಷಣ ನೀಡುತ್ತಿದ್ದುದಲ್ಲದೆ ಅವರಿಗೆ ಇತರ ರೀತಿಯಲ್ಲಿ ಸಹಾಯ ಮಾಡುತ್ತಿದ್ದರು. ಸಂಗೀತ ಕಲಾಭಿವರ್ಧಿನಿ ಸಭೆಯ ವತಿಯಿಂದ (ವಾಸುದೇವಾಚಾರ್ಯರಿಂದ ಸ್ಥಾಪಿಸಲ್ಪಟ್ಟುದು) ಮೈಸೂರು ಸದಾಶಿವರಾಯರು ಮತ್ತು ವೀಣಾ ಶೇಷಣ್ಣನವರ ರಚನೆಗಳುಳ್ಳ ಪುಸ್ತಕಗಳನ್ನು ಪ್ರಕಟಿಸಿದರು. ಪುರಂದರದಾಸರ ಅನೇಕ ದೇವರ ನಾಮಗಳಿಗೆ ಸ್ವರಮಟ್ಟನ್ನು ಹಾಕಿ ಪ್ರಕಟಿಸಿದರು. ಸಂಗೀತಕ್ಕೆ ಸಂಬಂಧಿಸಿದ ಸುಮಾರು 220 ಗ್ರಂಥಗಳುಳ್ಳ ತಮ್ಮ ಪುಸ್ತಕ ಭಂಡಾರವನ್ನು ಕಾಲಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ದಾನ ಮಾಡಿದರು. ಪ್ರತಿ ಗುರುವಾರ ತಪ್ಪದೆ ಭಜನೆಗಳು ಮತ್ತು ಕಛೇರಿಗಳನ್ನು ನಡೆಸುತ್ತಿದ್ದರು. ಅವರ ಇಡೀ ಜೀವನವನ್ನು ಸಂಗೀತಕ್ಕೆ ಮುಡಿಪಾಗಿಟ್ಟಿದ್ದರು. ಸುಮಾರು 700 ಮಂದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸಂಗೀತ ವಿದ್ಯಾದಾನ ಮಾಡಿದರು. ಇವರಲ್ಲಿ ಪಾಲ್‌ಘಾಟ್ ಸುಬ್ರಹ್ಮಣ್ಯ ಅಯ್ಯರ್, ಹೆಚ್.ಟಿ. ರಾಮಸ್ವಾಮಿ, ಟಿ.ಆರ್. ಗೋಪಾಲನ್, ಪಿ.ಎಸ್. ಕುಮಾರಸ್ವಾಮಿ, ವಸಂತ ರಾಮಾನುಜಂ, ಶ್ರೀರಂಗಮ್ಮ ಎಸ್. ರಮಾ, ಆರ್. ತಾರ ಮತ್ತು ಆರ್. ಜಯ ಪ್ರಮುಖರು.

ರಾಯರು ತಮ್ಮ ಒಳತೋಟಿಯನ್ನು ತೋಡಿಕೊಂಡು ಆನಂದಪಡಲು ವಾಗ್ಗೇಯಕಾರರಾದರು. ಮಂತ್ರಾಲಯದ ರಾಘವೇಂದ್ರ ಸ್ವಾಮಿಯ ಅವಿಚ್ಛಿನ್ನ ಭಕ್ತರಾಗಿದ್ದರು. 13 ವರ್ಣಗಳು, 16 ಕೃತಿಗಳು, 23 ದೇವರ ನಾಮಗಳನ್ನೂ, 3

ತಿಲ್ಲಾನಗಳನ್ನೂ, ಸಂಸ್ಕೃತ, ತೆಲುಗು ಮತ್ತು ಕನ್ನಡದಲ್ಲಿ "ಪದ್ಮಜಾರ್ಚಿತ" ಮತ್ತು "ಪದ್ಮಜಾರಮಣ" ಎಂಬ ಅಂಕಿತಗಳಲ್ಲಿ ರಚಿಸಿದ್ದಾರೆ. ಶ್ರೀ ರಾಘವೇಂದ್ರ ಸ್ವಾಮಿಯನ್ನು ಕುರಿತು ಹಿಂದೋಳ, ಆಭೋಗಿ, ವಸಂತ, ಸಾರಂಗ ಮತ್ತು ಸುರುಟಿ ರಾಗಗಳುಳ್ಳ ಒಂದು ಕನ್ನಡ ರಾಗಮಾಲಿಕೆಯನ್ನು, ಸೋಸಲೆ ವ್ಯಾಸರಾಯ ಮಠಾಧೀಶರಾಗಿದ್ದ ಶ್ರೀವಿದ್ಯಾಪ್ರಸನ್ನ ತೀರ್ಥರನ್ನು ಕುರಿತು ಕಾಪಿರಾಗದಲ್ಲಿ ಒಂದು ಕೃತಿಯನ್ನು ರಚಿಸಿದ್ದಾರೆ. ಸ್ವಾಮಿಗಳು ಇವರಿಗೆ 'ಸಂಗೀತ ಚೂಡಾಮಣಿ' ಎಂಬ ಬಿರುದನ್ನಿತ್ತು ಸನ್ಮಾನಿಸಿದರು. ಮೈಸೂರಿನ ಸಂಗೀತ ಸಮ್ಮೇಳನಾಧ್ಯಕ್ಷರಾಗಿ 'ಗಾನಕಲಾ ಸಿಂಧು' ಎಂಬ ಬಿರುದನ್ನು ಪಡೆದರು.

ಅಪರೂಪ ರಾಗಗಳಲ್ಲಿರುವ ಇವರ ರಚನೆಗಳಲ್ಲಿ ಲಾವಣ್ಯ ಬಾಲಕೃಷ್ಣ (ಇಂದುಮತಿ—ರೂಪಕ), ಶ್ರೀನಾಥ ಪರಿಪಾಲಯ (ಹಂಸರೂಪಿಣಿ—ಆದಿ) ಮತ್ತು ಸತತಮು ನಿನ್ನೇ (ಶಿವಕಾಂಭೋಜಿ—ಆದಿ) ಮುಂತಾದುವನ್ನು ಹೆಸರಿಸಬಹುದು. ಸರಸ್ವತಿ ಮತ್ತು ಲಕ್ಷ್ಮಿ ಇವರ ಕೃಪಾಕಟಾಕ್ಷವಿದ್ದ ಅಪರೂಪವಾದ ಸಂಗೀತ ವಿದ್ವಾಂಸರಾಗಿದ್ದವರೆಂದರೆ ರಾಯರು ಇವರ ಶಿಷ್ಯರು ಇವರ ರಚನೆಗಳನ್ನು ಸ್ವರಮಟ್ಟು ಸಹಿತ 'ಸಂಗೀತ ಚೂಡಾಮಣಿ' ಎಂಬ ಹೆಸರಿನ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ.

# ಜಯಚಾಮರಾಜ ಒಡೆಯರ್ (1919–1974)

ಜಯಚಾಮರಾಜ ಒಡೆಯರು ತಮ್ಮ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ ನಂತರ 1940ರಲ್ಲಿ ಮೈಸೂರು ಮಹಾರಾಜರಾದರು. ಇತಿಹಾಸ ಪ್ರಸಿದ್ಧವಾದ ಮೈಸೂರು ಸಿಂಹಾಸನವನ್ನು ಅಲಂಕರಿಸಿದ ಒಡೆಯರ್ ಮನೆತನದ ರಾಜರಲ್ಲಿ ಇವರೇ ಕೊನೆಯವರು. ಇವರು ದೈವಭಕ್ತರೂ, ಲೇಖಕರೂ, ಗ್ರಂಥಕರ್ತರೂ, ವಾಗ್ಗೇಯಕಾರರೂ ಆಗಿದ್ದು ಹಿಂದು ಸಂಸ್ಕೃತಿಯ ಉತ್ತಮ ಪ್ರತಿನಿಧಿಯಾಗಿದ್ದರು. ಇವರು "ದತ್ತಾತ್ರೇಯ", "ಭಾರತೀಯ ಸೌಂದರ್ಯ ಮೀಮಾಂಸೆ" ಮತ್ತು "ನಟರಾಜ" ಎಂಬ ಗ್ರಂಥಗಳ ಕರ್ತೃ. ಇವರು ಸಂಗೀತಗಾರರೂ, ಪಿಯಾನೋವಾದಕರೂ, ಸಂಗೀತ ಶಾಸ್ತ್ರಜ್ಞರೂ ಆಗಿದ್ದರು. ಲಂಡನ್ನಿನ ಟ್ರಿನಿಟಿ ಕಾಲೇಜಿನ ಎಲ್ಲಾ ಸಂಗೀತ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು ಪಾಶ್ಚಾತ್ಯ ಸಂಗೀತದಲ್ಲಿ ವಿದ್ವತ್ತನ್ನು ಪಡೆದಿದ್ದರು. ಪಾಶ್ಚಾತ್ಯ ಸಂಗೀತದ ಗ್ರಾಮಫೋನ್ ರೆಕಾರ್ಡ್‌ಗಳುಳ್ಳ ಇವರ ಭಂಡಾರವು ಭಾರತದಲ್ಲೇ ಅತ್ಯುತ್ತಮವಾದುದು. ಇವರು ಮೈಸೂರು ವಾಸುದೇವಾಚಾರ್ಯರ ಆಪ್ತ ಶಿಷ್ಯರಾಗಿದ್ದುದಲ್ಲದೆ ಶ್ರೀವಿದ್ಯಾ ಉಪಾಸಕರಾಗಿದ್ದರು.

ಇವರ 94 ಉತ್ತಮ ಕೃತಿಗಳಿಂದ ಸಂಗೀತ ಪ್ರಿಯರು ಇವರನ್ನು ಚಿರಕಾಲ ಸ್ಮರಿಸಿಕೊಳ್ಳುತ್ತಾರೆ. ಇವರು ಮುತ್ತುಸ್ವಾಮಿ ದೀಕ್ಷಿತರ, ಅದರಲ್ಲೂ ಅವರ ನವಾವರಣ ಕೃತಿಗಳಿಂದ ಸ್ಫೂರ್ತಿ ಪಡೆದರೆಂದು ತೋರುತ್ತದೆ. ತಮ್ಮ ಮನೆತನದ ದೇವತೆಯಾದ ಚಾಮುಂಡೇಶ್ವರಿಯನ್ನು ಕುರಿತು ಅತ್ಯುತ್ತಮವಾದ ಕೃತಿಗಳನ್ನು ಇವರು ರಚಿಸಿದ್ದಾರೆ. ಇವರು ವಿನಾಯಕ, ಈಶ್ವರ, ಸರಸ್ವತಿ ಹಾಗೂ ಶ್ರೀಕೃಷ್ಣನನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ. ಗುಣದ ದೃಷ್ಟಿಯಿಂದ ಇವು ಕವಿತ್ವ, ಭಾಷೆ, ಶ್ರೇಷ್ಠತೆಯಲ್ಲಿ ದೀಕ್ಷಿತರ ಕೃತಿಗಳನ್ನು ನೆನಪಿಗೆ ತರುತ್ತವೆ.

ಒಡೆಯರ್‌ರವರು 94 ಕೃತಿಗಳನ್ನು 94 ರಾಗಗಳಲ್ಲಿ ರಚಿಸಿದ್ದಾರೆ. ಕೆಲವು ಪರಿಚಿತವಾದ ಮೇಳ ರಾಗಗಳಲ್ಲಿದ್ದರೆ, ಕೆಲವು ಅಪರೂಪವಾದ ಜನ್ಯ ರಾಗಗಳಲ್ಲಿವೆ. ಹಂಸಧ್ವನಿ ರಾಗದ 'ವಂದೇಹಂ ಸದಾ' ಸರಸ್ವತಿಯನ್ನು ಕುರಿತುದಾದರೆ, 'ಪಾಹಿ ಶ್ರೀರಾಜೇಶ್ವರೀ' ಪಂಚಮಜನ್ಯವಾದ ಕಾಮವರ್ಧಿನಿಯನ್ನು ಹೋಲುವ ಭೋಗವಸಂತ ರಾಗದಲ್ಲಿದೆ. ಧೀರ ಶಂಕರಾಭರಣದ ಒಂದು ಜನ್ಯರಾಗ ಕೋಕಿಲ ಭಾಷಿಣಿಯಲ್ಲಿರುವ 'ಶ್ರೀವಿದ್ಯಾ ಮೋದಿನಿ' ಮತ್ತು 'ವಿಜಯವಸಂತ' ರಾಗದಲ್ಲಿರುವ 'ವಿಮಲಾಂಬಿಕೆ' ಮುಂತಾದುವು ಇದಕ್ಕೆ ನಿದರ್ಶನಗಳು. ನೀಲವೇಣಿರಾಗದ 'ಬಾಲಕೃಷ್ಣಂ ಭಜೇಹಂ' ಎಂಬುದು ಅತ್ಯುತ್ತಮವಾದ ಕೃತಿಯಾಗಿದೆ. ಈ ರಾಗವು ಆರೋಹಣದಲ್ಲಿ ಸ ರಿ ಗ ಮ ಪ ದ ನಿ ದ ಸ ಮತ್ತು ಅವರೋಹಣದಲ್ಲಿ ಸ ದ ಪ ಮ ಗ ರಿ ಸ ಗಳನ್ನು ಹೊಂದಿ ನಠಭೈರವಿಯ ಒಂದು ಜನ್ಯರಾಗವಾಗಿದೆ. ಇವರು ಕೊಟ್ಟಿರುವ ಹೊಸ ರಾಗಗಳಲ್ಲಿ ಜಯಸಂವರ್ಧಿನಿ ಅತ್ಯುತ್ತಮವಾದ ಒಂದು ರಾಗ. ವಿನಾಯಕನನ್ನು ಕುರಿತು 'ಪಾಹಿಮಾಂ ಶ್ರೀ ಪಂಚಮಾತಂಗ' ಎಂಬುದು ಅಪರೂಪವಾದ ಸುಪ್ರದೀಪ ರಾಗದಲ್ಲಿದೆ. ಸದ್ಗುರು

ತ್ಯಾಗರಾಜರ 'ವರಶಿಖಿವಾಹನ' ಎಂಬ ಕೃತಿಯನ್ನುಳಿದು ಈ ಕೃತಿಯೇ ಈ ರಾಗದಲ್ಲಿ ಎರಡನೆಯದು. ಚಿಂತಯಾಮಿ (ಹಿಂದೋಳ), 'ಶ್ರೀ ಜಾಲಂಧರ ಮಾಶ್ರಯೇ' (ಗಂಭೀರ ನಾಟ), "ಕ್ಷೀರ ಸಾಗರ ಶಯನ" (ಮಾಯಾಮಾಳವ ಗೌಳ), 'ಶ್ರೀ ಮಹಾಗಣಪತಿಂ' (ಅಠಾಣ), "ಭೂರಿಭಾಗ್ಯ ಲಹರಿ" (ಪ್ರತಾಪವರಾಳಿ)., ಈ ರಾಗದಲ್ಲಿ ಸದ್ಗುರು ತ್ಯಾಗರಾಜರ 'ವಿನನಾಸಕೊನಿ' ಎಂಬ ಕೃತಿಯ ನಂತರ ಇದು ಎರಡನೆಯದು), 'ಬ್ರಹ್ಮಾಂಡವಲಯೇ' (ಮಾಂಡ್), ದುರ್ಗಾದೇವಿ ಸಂರಕ್ಷತುಮಾಂ (ಧರ್ಮವತಿ), ಶಿವಶಿವಭೋ (ನಾದನಾಮಕ್ರಿಯೆ) ಮುಂತಾದುವು ಬಹಳ ಪ್ರಸಿದ್ಧವಾಗಿವೆ. ಒಡೆಯರ್‌ರವರು ಸುಳಾದಿ ಸಪ್ತ ತಾಳಗಳನ್ನು ತಮ್ಮ ಕೃತಿಗಳಲ್ಲಿ ಬಹಳ ಸಮಂಜಸವಾಗಿ ಬಳಸಿಕೊಂಡಿದ್ದಾರೆ. ಇವರ ಶೈಲಿ ಮತ್ತು ಭಾವನೆಗಳು ದೀಕ್ಷಿತರನ್ನು ಅನುಸರಿಸಿದಂತೆ ಕಂಡುಬಂದರೂ ಅವು ಅನುಕರಣೆಯಾಗಿಲ್ಲ. ಈ ಸುಂದರವಾದ ಕೃತಿಗಳನ್ನು ರೂಪಿಸುವುದರಲ್ಲಿ ಇವರು ತಮ್ಮ ಗುರು ವಾಸುದೇವಾಚಾರ್ಯರ ಮತ್ತು ಅವರ ಶಿಷ್ಯ ಚೆನ್ನಕೇಶವಯ್ಯನವರ ಸಹಕಾರ ಹಾಗೂ ಮಾರ್ಗದರ್ಶನವನ್ನು ಪಡೆದರು. ರಾಜ ಮನೆತನದ ಈ ವಾಗ್ಗೇಯಕಾರರು ತಿರುವಾಂಕೂರಿನ ಸ್ವಾತಿ ತಿರುನಾಳ್ ಮಹಾರಾಜರನ್ನು ನೆನಪಿಗೆ ತರುತ್ತಾರೆ. ಇವರ ಕೃತಿಗಳಲ್ಲಿ ಬಳಸಿರುವ ಅಂಕಿತ 'ಶ್ರೀವಿದ್ಯಾ'

# ಟಿ.ವಿ. ಮುತ್ತಾಚಾರ್ (1927 – 1994)

ಮುತ್ತಾಚಾರ್ಯರು ಮೂಲತಃ ತುಮಕೂರಿನವರು. ಇವರು ಬಿ.ಎ. (ಆನರ್ಸ್) ಮತ್ತು ಬಿ.ಎಡ್. ಪದವೀಧರರಾಗಿ ವೃತ್ತಿಯಲ್ಲಿ ಉಪಾಧ್ಯಾಯರಾಗಿದ್ದು ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳ ಅಧ್ಯಯನ ಮಾಡಿದ್ದರು. ಖ್ಯಾತ ಗಾಯಕರಾಗಿದ್ದ ಪ್ರೊ|| ಆರ್.ಕೆ. ರಾಮನಾಥನ್‌ರವರಲ್ಲಿ ಸಂಗೀತ ಶಿಕ್ಷಣ ಪಡೆದು ಪ್ರವೃತ್ತಿಯಲ್ಲಿ ಗಾಯಕರೂ, ಪಿಟೀಲುವಾದಕರೂ ಆಗಿ ಹಂಸಧ್ವನಿ ಪ್ರೌಢ ಸಂಗೀತ ಶಾಲಾ ಎಂಬ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ಅದರ ಪ್ರಾಂಶುಪಾಲರಾಗಿ ನೂರಾರು ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣ ನೀಡಿದರು.

ಮುತ್ತಾಚಾರ್ಯರು ವಾಗ್ಗೇಯಕಾರರಾಗಿ "ಚಿದಾನಂದ" ಎಂಬ ಅಂಕಿತದಲ್ಲಿ 200ಕ್ಕೂ ಮಿಗಿಲಾಗಿ ಸಂಗೀತದ ವಿವಿಧ ಪ್ರಕಾರಗಳನ್ನು ರಚಿಸಿರುವರು. ಇವುಗಳಲ್ಲಿ 168 ಅನ್ನು ಬೇರೆ ಬೇರೆ ಶೀರ್ಷಿಕೆಗಳುಳ್ಳ ಪುಸ್ತಕಗಳಲ್ಲಿ ಪ್ರಕಟಿಸಿದ್ದಾರೆ. "ಕನ್ನಡ ಗಾನಾರಾಧನೆ" ಎಂಬ ಪುಸ್ತಕದಲ್ಲಿ ಕನ್ನಡದ ಕೃತಿಗಳು ಮತ್ತು ವರ್ಣಗಳು, "ನಾದಚೇತನ" ಎಂಬುದರಲ್ಲಿ ಸಂಸ್ಕೃತದ ಕೃತಿಗಳು ಹಾಗೂ 'ನಾದ ವೈಭವ' ಎಂಬುದರಲ್ಲಿ 20 ಆದಿತಾಳ ವರ್ಣಗಳಿವೆ, 16 ಅಟ್ಟತಾಳ ಕನ್ನಡದ ವರ್ಣಗಳು ಪ್ರಕಟವಾಗಿವೆ. ಕನ್ನಡದಲ್ಲಿ ವರ್ಣಗಳನ್ನು ರಚಿಸಿರುವವರಲ್ಲಿ ಇವರೇ ಮೊದಲಿಗರೆಂದು ತಿಳಿದುಬರುತ್ತದೆ. ಇವಲ್ಲದೆ ಕನ್ನಡ ಜಾವಳಿಗಳು, ಕವನಗಳು ಮತ್ತು ನಾಟಕಗಳನ್ನೂ ಸಹ ರಚಿಸಿದ್ದಾರೆ. ಇವರ ರಚನೆಗಳ ಸಾಹಿತ್ಯವು ಸರಳ, ದ್ವಿತೀಯಾಕ್ಷರ ಮತ್ತು ಅಂತ್ಯಪ್ರಾಸಾದಿ ಸಾಹಿತ್ಯಾಲಂಕಾರಗಳಿಂದ ಹಾಗೂ ಭಕ್ತಿಭಾವದಿಂದ ಕೂಡಿವೆ.

ರಸವಿನೋದಿನಿ, ಸೇನಾಪತಿ, ರಾಗವರ್ಧಿನಿ, ಸತ್ಯಭೂಷಿಣಿ ಮುಂತಾದ ಅಪರೂಪ ರಾಗಗಳಲ್ಲಿರುವ ಇವರ ರಚನೆಗಳು ಸಂಗೀತ ಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸಿವೆ.

# ಬಳ್ಳಾರಿ ಎಂ. ಶೇಷಗಿರಿ ಆಚಾರ್ (1935)

ಬಳ್ಳಾರಿ ಸಹೋದರರೆಂದು ಪ್ರಸಿದ್ಧ ಗಾಯಕರಾದವರಲ್ಲಿ ಶೇಷಗಿರಿ ಆಚಾರ್ಯರು, ಎಂ. ರಾಘವೇಂದ್ರಾಚಾರ್ ಮತ್ತು ಕಮಲಮ್ಮ ಎಂಬ ಮಾಧ್ವ ಬ್ರಾಹ್ಮಣ ದಂಪತಿಗಳ ಪುತ್ರರಾಗಿ 1935ರಲ್ಲಿ ಬಳ್ಳಾರಿಯಲ್ಲಿ ಜನಿಸಿದರು. ರಾಘವೇಂದ್ರಾಚಾರ್ಯರು ಮದ್ರಾಸಿನ ಕ್ವೀನ್ಸ್ ಮೇರಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಮತ್ತು ಪಿಟೀಲು ವಾದಕರೂ ಆಗಿದ್ದು ರಾಯಲಸೀಮಾ ಸಂಗೀತ ಮಂಡಲಿಯ ಅಧ್ಯಕ್ಷರಾಗಿದ್ದರು.

ಶೇಷಗಿರಿರಾಯರು ತಮ್ಮ ಪ್ರಾರಂಭದ ಸಂಗೀತ ಶಿಕ್ಷಣವನ್ನು ತಮ್ಮ ತಂದೆಯವರಿಂದಲೂ, ನಂತರ ಅಣ್ಣ ನರಸಿಂಹಮೂರ್ತಿಯವರಿಂದ ಪಡೆದರು. ಬಳ್ಳಾರಿ ಸಹೋದರರು ತಮ್ಮ ಕಛೇರಿ ಗಾಯನವನ್ನು 14 ವಯಸ್ಸಿನಲ್ಲಿ ಪ್ರಾರಂಭಿಸಿ ಖ್ಯಾತಿ ಗಳಿಸಿದರು. ಶೇಷಗಿರಿ ಆಚಾರ್ಯರು 1950ರಿಂದ 72ರ ವರೆವಿಗೂ ಧಾರವಾಡ ಮತ್ತು ಬೆಂಗಳೂರು ಆಕಾಶವಾಣಿ ಕೇಂದ್ರಗಳಿಂದ ಪ್ರಥಮ ಶ್ರೇಣಿಯ ಕಲಾವಿದರಾಗಿ ಹಾಡಿದರು. 1969ರಲ್ಲಿ ರೇಡಿಯೋ ಸಂಗೀತ ಸಮ್ಮೇಳನದಲ್ಲಿ, 1971ರಲ್ಲಿ ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಲ್ಲಿ ಹಾಡಿರುವುದಲ್ಲದೆ ಆಂಧ್ರ, ತಮಿಳುನಾಡು, ಕೇರಳ, ಕರ್ನಾಟಕ, ಬೊಂಬಾಯಿ ಮುಂತಾದ ಭಾರತದ ಎಲ್ಲಾ ಸ್ಥಳಗಳು ಸಂಘ, ಸಂಸ್ಥೆ, ಸಭೆಗಳಲ್ಲಿ ಕರ್ನಾಟಕ ಸಂಗೀತ ಕ್ಷೇತ್ರದ ಹಿರಿಯ ವಿದ್ವಾಂಸರ ಪಕ್ಕವಾದ್ಯಗಳೊಡನೆ ಹಾಡಿದ್ದಾರೆ. 1974ರಿಂದ 1981ರ ವರೆಗೆ ಬೆಂಗಳೂರು ವಿಶ್ವವಿದ್ಯಾನಿಲಯುದ ಸಂಗೀತ ನೃತ್ಯ ವಿಭಾಗದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ಇವರಿಗೆ ಅನೇಕ ಸಭೆಗಳ, ಸಂಸ್ಥೆಗಳ, ಮಠಾಧೀಶರಿಂದ ಬಿರುದುಗಳೂ ಸನ್ಮಾನಗಳೂ ಲಭಿಸಿವೆ. ಇವರು ಗಾಯಕರಾಗಿದ್ದುದಲ್ಲದೆ ಪಿಟೀಲು, ಗೋಟುವಾದ್ಯ ಮತ್ತು ಖಂಜರಿವಾದನ ಪಟುವಾಗಿದ್ದರು. ಅನೇಕ ವಿದ್ಯಾರ್ಥಿ—ವಿದ್ಯಾರ್ಥಿನಿಯನ್ನು ತಯಾರು ಮಾಡಿದ್ದಾರೆ.

ಶೇಷಗಿರಿ ಆಚಾರ್ಯರು ಒಬ್ಬ ಉತ್ತಮ ವಾಗ್ಗೇಯಕಾರರು. ಕನ್ನಡ, ಸಂಸ್ಕೃತ, ತೆಲಗು, ತಮಿಳು ಮತ್ತು ಹಿಂದಿಯಲ್ಲಿ ಹಲವು ಬಗೆಯ ವಾಗ್ಗೇಯ ರಚನೆಗಳನ್ನು ಮಾಡಿದ್ದಾರೆ. 1961ರಲ್ಲಿ ವಾಗ್ಗೇಯ ರಚನೆಯಲ್ಲಿ ತೊಡಗಿ ವರ್ಣಗಳು, ಕೃತಿಗಳು, ರಾಗಮಾಲಿಕೆ, ದೇವರ ನಾಮಗಳು, ಸ್ವರಾಕ್ಷರ ಕೃತಿಗಳು, ತಿಲ್ಲಾನ, ಜಾವಳಿ ಮುಂತಾದ 300ಕ್ಕೂ ಮಿಗಿಲಾದ ರಚನೆಗಳನ್ನು ರಚಿಸಿರುವರು. "ಓಂಕಾರ ರೂಪ ಗಜವದನ" ಎಂಬ ಹಿಂದೋಳ ರಾಗದ ರಚನೆಯು ಇವರ ಪ್ರಥಮ ಕೃತಿಯಾಗಿದೆ. ಅನೇಕ ದೇವತೆಗಳನ್ನು ಸ್ತುತಿಸಿ ರಚಿಸಿರುವುದಲ್ಲದೆ, ಶ್ರೀಪಾದರಾಜರು, ವ್ಯಾಸರಾಯರು, ಪುರಂದರ ದಾಸರು, ರಾಘವೇಂದ್ರ ಸ್ವಾಮಿಗಳು, ವಿಜಯದಾಸರು, ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ವಾದಿರಾಜರು, ಶಂಕರಾಚಾರ್ಯರು,

ಶಿರಡಿ ಸಾಯಿಬಾಬ, ರಮಣ ಮಹರ್ಷಿ, ಯೋಗಿ ಲಕ್ಷ್ಮಮ್ಮ ಮುಂತಾದವರನ್ನು ಸ್ತುತಿಸಿ ರಚಿಸಿದ್ದಾರೆ.

ವಾಡಿಕೆಯಲ್ಲಿರುವ ರಾಗ ಮತ್ತು ತಾಳಗಳಲ್ಲದೆ, 72 ಮೇಳ ರಾಗಗಳಲ್ಲಿ ಅಪರೂಪ ರಾಗಗಳಾದ ಹ್ಲಾದಿನಿ, ತ್ರಿಮೂರ್ತಿ, ರತ್ನಮಂಜರಿ, ಅಕ್ಷರಿ, ಓಂಕಾರಿ, ಸೂತ್ರಧಾರಿ, ನಿಟಲ ಪ್ರಕಾಶಿನಿ, ಸ್ವರರಂಜಿನಿ, ದೇವರಂಜಿನಿ, ನಿರಂಜನಿ, ಲೋಕರಂಜಿನಿ, ಗಗನರಂಜಿನಿ, ಸುಜನರಂಜಿನಿ, ಭವಾನಿ, ಮನೋರಂಜಿನಿ, ಶ್ರೀಚಿಂತಾಮಣಿ, ಶ್ಯಾಮಚಿಂತಾಮಣಿ, ಈಶಗಿರಿ, ನಾಗಗಿರಿ, ಭಕ್ತಪ್ರಿಯ, ಹಂಸಮೋಹನ ಇತ್ಯಾದಿಗಳಲ್ಲಿ ಮತ್ತು ಅಪರೂಪ ತಾಳಗಳಾದ ತ್ರಿಶ್ರತ್ರಿಪುಟ, ಖಂಡತ್ರಿಪುಟ, ಸಂಕೀರ್ಣತ್ರಿಪುಟ, ಚತುರಶ್ರ ಜಾತಿ ಧ್ರುವ ತಾಳ (ಶ್ರೀಕರತಾಳ), ಮಿಶ್ರಝಂಪೆ ತಾಳಗಳಲ್ಲಿ ಕೃತಿ ರಚನೆಯನ್ನು ಮಾಡಿದ್ದಾರೆ. ಕೆಲವು ಕೃತಿಗಳಲ್ಲಿ ರಾಗಮುದ್ರೆ, ಕೆಲವಲ್ಲಿ ರಾಗಮುದ್ರೆ ಮತ್ತು ತಾಳ ಮುದ್ರೆಗಳನ್ನು ಅಳವಡಿಸಿದ್ದಾರೆ. ಇವರ ಅಂಕಿತ 'ವಿಶೇಷ'. ರಚನೆಗಳು ದ್ವಿತೀಯಾಕ್ಷರ ಮತ್ತು ಪ್ರಾಸ ಮುಂತಾದ ಸಾಹಿತ್ಯಾಲಂಕಾರಗಳಿಂದ ಕೂಡಿ ಉತ್ತಮ ಸಂಗೀತ ಕವಿತೆಗಳಾಗಿವೆ. "ವಿಶೇಷ ಕೃತಿ ಮಾಲೆ" ಎಂಬ ಶೀರ್ಷಿಕೆಯುಳ್ಳ ಪುಸ್ತಕದಲ್ಲಿ 7 ತೆಲುಗು, 7 ಕನ್ನಡ, 9 ಸಂಸ್ಕೃತದ ಕೃತಿಗಳೂ, 2 ತಿಲ್ಲಾನಗಳೂ ಸ್ವರ ಸಂಯೋಜನೆ ಸಹಿತ 1985ರಲ್ಲಿ ಪ್ರಕಟಿಸಲ್ಪಟ್ಟಿವೆ. ಈ ರಚನೆಗಳು ಹೆಚ್ಚಾಗಿ ಆಶು ರಚನೆಗಳಾಗಿರುವುದು ಒಂದು ವಿಶೇಷ.

# ಇಂದಿನ ವಾಗ್ಗೇಯಕಾರರು

## ಆರ್. ಚಂದ್ರಶೇಖರಯ್ಯ (1915)

ಮೈಸೂರು ಸಹೋದರರೆಂದು ಹೆಸರುವಾಸಿಯಾದ ಸಹೋದರ ಚತುಷ್ಟಯರಲ್ಲಿ ಹಿರಿಯವರಾದ ಚಂದ್ರಶೇಖರಯ್ಯನವರು ಸಂಗೀತ ಮನೆತನದ ಬಿ. ರಾಮಯ್ಯ ಮತ್ತು ವಿದ್ವಾನ್ ಸುಂದರ ಶಾಸ್ತ್ರಿಗಳ ಶಿಷ್ಯೆ ವರಲಕ್ಷ್ಮಿ ಎಂಬ ಸ್ಮಾರ್ತ ತೆಲುಗು ಬ್ರಾಹ್ಮಣ ದಂಪತಿಗಳ ಪುತ್ರರಾಗಿ ಜನಿಸಿದರು. ತಮ್ಮ ತಾಯಿಯವರಿಂದ ಸಂಗೀತ ಶಿಕ್ಷಣವನ್ನು ಪಡೆದು ಕಾಲಕ್ರಮದಲ್ಲಿ ಅದನ್ನು ಬೆಳೆಸಿಕೊಂಡು ಗಾಯಕರಾದರು. 1929ರಲ್ಲಿ ತನ್ನ ಸಹೋದರ ಆರ್. ಸೀತಾರಂ ಅವರೊಡನೆ ದ್ವಂದ್ವ ಗಾಯನ ಮಾಡಲು ಆರಂಭಿಸಿ ಸ್ವಲ್ಪ ಕಾಲವಲ್ಲೇ ಮೈಸೂರು ಸಹೋದರರೆಂದು ಪ್ರಸಿದ್ಧರಾದರು. ಇದಲ್ಲದೆ ತಮ್ಮ ತಾಯಿಯಿಂದ ಶ್ರೀವಿದ್ಯಾ ಉಪದೇಶವನ್ನು ಪಡೆದು ಅಂದಿನಿಂದ ಶ್ರೀವಿದ್ಯಾ ಉಪಾಸಕರಾಗಿದ್ದಾರೆ.

50 ವರ್ಷಗಳಿಗೂ ಮೀರಿ ವೇದಿಕೆಯ ಗಾಯಕರಾಗಿ ದೇಶಾದ್ಯಂತ ಗಾಯನ ಕಛೇರಿಗಳನ್ನು ಮಾಡುತ್ತಾ ಬಂದಿದ್ದಾರೆ. 1945ರಲ್ಲಿ ಶ್ರೀವರಲಕ್ಷ್ಮಿ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಪಾಶ್ಚಾತ್ಯರನ್ನು ಒಳಗೊಂಡಂತೆ ನೂರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸಂಗೀತ ಶಿಕ್ಷಣವೀಯುತ್ತಾ ಬಂದಿದ್ದಾರೆ. ಪಾಶ್ಚಾತ್ಯ ದೇಶಗಳಿಂದ ಆಹ್ವಾನಿತರಾಗಿ, ಅಲ್ಲಿ ಉಪನ್ಯಾಸಗಳು, ಪ್ರಾತ್ಯಕ್ಷಿಕೆಗಳು ಮತ್ತು ಕಛೇರಿ ಗಾಯನ ಮಾಡಿದರು. 1993ರಲ್ಲಿ ಬೆಂಗಳೂರಿನ ಗಾಯನ ಸಮಾಜದ ಸಂಗೀತ ಸಮ್ಮೇಳನಾಧ್ಯಕ್ಷರಾಗಿ "ಸಂಗೀತ ಕಲಾರತ್ನ" ಹಾಗೂ ಕರ್ನಾಟಕ ಸರ್ಕಾರದ 'ಕರ್ನಾಟಕ ಕಲಾತಿಲಕ' ಎಂಬ ಬಿರುದುಗಳೂ ಸೇರಿದಂತೆ ಇವರಿಗೆ 50ಕ್ಕೂ ಮೀರಿ ಬಿರುದುಗಳೂ, ಸನ್ಮಾನಗಳೂ ಲಭಿಸಿವೆ.

ಚಂದ್ರಶೇಖರಯ್ಯನವರು ಒಬ್ಬ ಉನ್ನತಮಟ್ಟದ ವಾಗ್ಗೇಯಕಾರರು. 1938ರಿಂದ ರಚನಾಕಾರ್ಯದಲ್ಲಿ ತೊಡಗಿ ಇಲ್ಲಿಯರವೆಗೆ 300ಕ್ಕೂ ಮೀರಿ ತೆಲುಗು, ಕನ್ನಡ ಮತ್ತು ಸಂಸ್ಕೃತದಲ್ಲಿ ಸಂಗೀತದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿರುತ್ತಾರೆ. ನಂತರ ತ್ಯಾಗರಾಜರನ್ನು ಕುರಿತಾದ "ತ್ಯಾಗರಾಜ ನಿನ್ನೇ ಕೋರಿ" ಎಂಬ ಕೃತಿಯೇ ಇವರ ಮೊದಲ ರಚನೆ. ಇವರು ಗೀತ, ಕೃತಿ, ಸ್ವರಜತಿ, ವರ್ಣ, ದೇವರನಾಮ, ಪದ, ತಿಲ್ಲಾನ, ನೃತ್ಯಗೀತ, ಶಿಶುಗೀತ, ಗಮಕವಾಚನಕ್ಕೆ ವಾರ್ಧಿಕ ಮತ್ತು ಭಾಮಿನೀ ಷಟ್ಪದಿಗಳಲ್ಲಿ ಪದ್ಯಗಳನ್ನು ರಚಿಸಿದ್ದಾರೆ. ಇವರ ರಚನೆಗಳು ವಿವಿಧ ರೀತಿಯ ಪ್ರಾಸಗಳು, ಸ್ವರಾಕ್ಷರಗಳೇ ಮುಂತಾದ ಅಲಂಕಾರಯುತವಾಗಿವೆ. ಭಾಷೆಯು ಸರಳವಾಗಿದ್ದು ನವೀನ ಸಾಹಿತ್ಯಕ ಹಾಗೂ ಸಂಗೀತದ ವಿಷಯ ಹಾಗೂ ಭಾವನೆಗಳಿಂದ ಕೂಡಿವೆ. ಇವೆಲ್ಲವೂ ಹೆಚ್ಚಾಗಿ ಮಧ್ಯಮ ಕಾಲದಲ್ಲಿವೆ. ಇವರು ಕಾಂಚೀ, ಮಧುರೈ, ತಂಜಾವೂರು, ತಿರುವಾಂಕೂರು, ರಾಮೇಶ್ವರಂ, ಕನ್ಯಾಕುಮಾರಿ, ಅನಂತಶಯನ, ಶೃಂಗೇರಿ, ಧರ್ಮಸ್ಥಳ. ಕೊಲ್ಲೂರು, ತಿರುಪತಿ ಮುಂತಾದ ಪವಿತ್ರ ಕ್ಷೇತ್ರಗಳ ದರ್ಶನ ಮಾಡಿ ಸ್ಫೂರ್ತಿ ಹೊಂದಿ ಆಶುಕವಿತೆ ಮೂಲಕ ರಚಿಸಿದ ಕೃತಿಗಳನ್ನು ಇವು ಒಳಗೊಂಡಿವೆ. ಇವಲ್ಲದೆ ಗುರುಕೃತಿಗಳೆಂಬ ಸಮುದಾಯ

ಕೃತಿಗಳನ್ನು ಮಂತ್ರಾಲಯದ ರಾಘವೇಂದ್ರಸ್ವಾಮಿಗಳನ್ನೂ, ಪುರಂದರದಾಸರನ್ನೂ, ಸಂಗೀತ ತ್ರಿರತ್ನರನ್ನೂ, ಶೃಂಗೇರಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತಿ ಮತ್ತು ಅವರ ನಂತರದ ಪೀಠಾಧೀಶರು, ಸೋಸಲೆ ವ್ಯಾಸರಾಜ ಮಠಾಧ್ಯಕ್ಷರಾದ ವಿದ್ಯಾಪಯೋನಿಧಿ ತೀರ್ಥರು ಹಾಗೂ ಇನ್ನಿತರರನ್ನು ಕುರಿತು ರಚಿಸಿದ್ದಾರೆ. ಇವರು ರಚಿಸಿರುವ ಶ್ರೀ ತ್ರಿಪುರಸುಂದರಿ ನವಾವರಣ ಕೃತಿಗಳು ವಿಶಿಷ್ಟವಾದುವು. ಈ ಸಮುದಾಯ ಕೃತಗಳು ಶ್ರೀವಿದ್ಯಾ ಹಾಗೂ ಶ್ರೀಚಕ್ರದ ಸ್ಪಷ್ಟವಾದ ಚಿತ್ರವನ್ನು ನಮಗೆ ಕೊಡುತ್ತವೆ. ಸುಧಾಶೃತಿ, ಅಯೋಧ್ಯ, ಕಾಮೇಶ್ವರಿ, ಅರುಣಾಂಬಿಕಾ, ಶೃತಿ ಸ್ವರೂಪಿಣಿ ಮುಂತಾದ 50 ನೂತನ ರಾಗಗಳನ್ನು ಸೃಷ್ಟಿಸಿ ಅವುಗಳಿಗೆ ಲಕ್ಷ್ಯವನ್ನು ಕೊಟ್ಟಿದ್ದಾರೆ. ಇವಲ್ಲದೆ ವಿವಿಧ ರಾಗಮಾಲಿಕೆಗಳನ್ನೂ, ಶೃಂಗೇರಿ ಪಂಚರತ್ನವನ್ನೂ, ದೇಶಭಕ್ತಿ ಗೀತೆಗಳನ್ನೂ, ವಾದ್ಯವೃಂದಕ್ಕೆ ಮೀಸಲಾದ ಹಾಡುಗಳನ್ನೂ, ಅಷ್ಟೋತ್ತರ ಶತತಾಳಗಳಲ್ಲಿ ಪಲ್ಲವಿಗಳನ್ನು ರಚಿಸಿದ್ದಾರೆ. ''ಚಂದ್ರಶೇಖರ ಕೃತಿ ರತ್ನಮಾಲಾ'' ಎಂಬ ಶೀರ್ಷಿಕೆಯಲ್ಲಿ ಇಲ್ಲಿಯವರೆಗೆ ತಮ್ಮ ರಚನೆಗಳ 4 ಸಂಪುಟಗಳನ್ನು ಪ್ರಕಟಿಸಿದ್ದಾರೆ. ಇನ್ನೂ ಮೂರು ಸಂಪುಟಗಳನ್ನು ಪ್ರಕಟಿಸುವವರಿದ್ದಾರೆ. ಇವರ ರಚನೆಗಳಲ್ಲಿ 'ಚಂದ್ರಶೇಖರ' ಎಂಬ ಸ್ವನಾಮ ಮುದ್ರೆಯಿದೆ. ಇವರ ರಚನೆಗಳಲ್ಲಿ ರಾಗಮುದ್ರೆ ಮತ್ತು ತಾಳಮುದ್ರೆಗಳು ಸಾಹಿತ್ಯದೊಂದಿಗೆ ಮಧುರವಾಗಿ ಮಿಳನಗೊಂಡಿವೆ. ಹಿಂದೂಸ್ಥಾನಿ ರಾಗಗಳಾದ ತಿಲಂಗ್, ಕೇದಾರ್, ಬಹಾರ್, ಜೋಗ್, ಜೀವನ್‌ಪುರಿ, ಸಾರಂಗ್, ಭೀಂಪಲಾಸಿ, ಮುಲ್ತಾನಿ, ಮಾಂಡ್ ಮುಂತಾದುವುಗಳಲ್ಲಿ. ಸರಳವಾದ ದೇವರ ನಾಮಗಳನ್ನು ರಚಿಸಿದ್ದಾರೆ. ಚಂದ್ರಶೇಖರಯ್ಯನವರು ಬಿ.ಕಾಂ. ಪದವೀಧರರು, ಹವ್ಯಾಸಿ ಜ್ಯೋತಿಷ್ಯ ವಿದ್ವಾಂಸರು ಹಾಗೂ ಉತ್ತಮ ಭಾಷಣಕಾರರೂ ಆಗಿದ್ದಾರೆ.

# ಆರ್.ಎನ್. ದೊರೆಸ್ವಾಮಿ (1916)

ಆರ್.ಎನ್. ದೊರೆಸ್ವಾಮಿಯವರು ಮೈಸೂರು ವೀಣಾ ಪರಂಪರೆಗೆ ಸೇರಿದವರು. ವೆಂಕಟಗಿರಿಯಪ್ಪನವರ ಶಿಷ್ಯರು, ವೀಣಾ ದೊರೆಸ್ವಾಮಿ ಅಯ್ಯಂಗಾರರ ಹಾಗೂ ಎಂ.ಜೆ. ಶ್ರೀನಿವಾಸ ಅಯ್ಯಂಗಾರರ ಸಹಪಾಠಿಗಳು. ಹಾಸನ ಜಿಲ್ಲೆಯ ಹಲವು ಸಂಗೀತ ವಿದ್ವಾಂಸರ ಹಾಗೂ ವಾಗ್ಗೇಯಕಾರರ ಹುಟ್ಟೂರಾದ ರುದ್ರಪಟ್ಟಣದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಪ್ರಾರಂಭದ ಸಂಗೀತ ಶಿಕ್ಷಣವನ್ನು ಶತಾವಧಾನಿ ವೆಂಕಟರಾಮಯ್ಯ, ನಂತರ ಬೆಟ್ಟದಪುರ ಸೂರ್ಯನಾರಾಯಣರಾಯರಲ್ಲಿ ಪಡೆದು, ಹೈಸ್ಕೂಲು ಶಿಕ್ಷಣವನ್ನು ಮುಗಿಸಿ, ಅಣ್ಣಾಮಲೆ ವಿಶ್ವವಿದ್ಯಾನಿಲಯದ ಚಿದಂಬರಂ ಸಂಗೀತದ ಕಾಲೇಜಿಗೆ ಸೇರಿ ಮೂರು ವರ್ಷಗಳ ಕಾಲ ಸೇಲಂ ದೊರೆಸ್ವಾಮಿ ಅಯ್ಯಂಗಾರರಲ್ಲಿ ಶಿಕ್ಷಣ ಪಡೆದರು. ಅವರ ಶಾರೀರವು ಒಡೆದು ಹೋದುದರಿಂದ ಸ್ವಗ್ರಾಮಕ್ಕೆ ಹಿಂದಿರುಗಿದರು. ನಂತರ ವೀಣಾವಾದನದಲ್ಲಿ ಚಿನ್ನಕೇಶವಯ್ಯನವರಿಂದ ಮತ್ತು ಗಾಯನದಲ್ಲಿ ಚಿಕ್ಕರಾಮರಾಯರಲ್ಲೂ ಶಿಕ್ಷಣ ಪಡೆದು, ಪ್ರೌಢ ಶಿಕ್ಷಣವನ್ನು 1939ರಿಂದ 12 ವರ್ಷಗಳ ಕಾಲ ವೀಣಾ ವೆಂಕಟಗಿರಿಯಪ್ಪನವರಿಂದ ಪಡೆದರು. ಮೊದಲನೆಯ ಸಲ 1942ರಲ್ಲಿ ತಮ್ಮ ಗುರುವಿನೊಂದಿಗೆ ವೀಣಾ ವಾದನದಲ್ಲಿ ಭಾಗವಹಿಸಿದರು. ನಂತರ ಆಕಾಶವಾಣಿ ಕೇಂದ್ರಗಳಿಂದ ಇವರ ವೀಣಾವಾದನವು ಪ್ರಸಾರವಾಯಿತು. ದೇಶಾದ್ಯಂತ ವೀಣಾ ಕಛೇರಿಗಳನ್ನು ಮಾಡಿ ಖ್ಯಾತರಾದರು. 1947ರಲ್ಲಿ ಮೈಸೂರು ಅರಮನೆಯ ವಿದ್ವಾಂಸರಾಗಿ ನೇಮಕಗೊಂಡರು. 1951ರಿಂದ 1963ರ ವರೆಗೆ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ವೀಣಾ ಅಧ್ಯಾಪಕರಾಗಿಯೂ, ಲಲಿತ ಕಲಾ ಕಾಲೇಜಿನಲ್ಲಿ ರೀಡರ್ ಆಗಿಯೂ ಕೆಲಸ ಮಾಡಿ 1977ರಲ್ಲಿ ವೀಣಾ ಪ್ರಾಧ್ಯಾಪಕರಾಗಿ ನಿವೃತ್ತರಾದರು. ದೊರೆಸ್ವಾಮಿಯವರು ಹಿತಕರವಾದ ವಾದನ, ರಂಜಕವಾದ ಶೈಲಿ ಹಾಗೂ ಉತ್ತಮ ಮನೋಧರ್ಮಕ್ಕೆ ಹೆಸರಾದರು.

ದೊರೆಸ್ವಾಮಿಯವರು ವಾಗ್ಗೇಯಕಾರರಾಗಿ ತಮ್ಮ ರಚನೆಗಳನ್ನು 'ಲಕ್ಷ್ಮೀರಮಣ ಕೃತಿ ಮಂಜರಿ' ಎಂಬ ಪುಸ್ತಕದಲ್ಲಿ 1989ರಲ್ಲಿ ಪ್ರಕಟಿಸಿದ್ದಾರೆ. ಇವರ ಅಂಕಿತ 'ಲಕ್ಷ್ಮೀರಮಣ'. 2 ಜತಿಸ್ವರಗಳು, 2 ಸ್ವರಜತಿಗಳು, 4 ತಾನವರ್ಣಗಳು, ಒಂದು ಪದವರ್ಣ, 27 ಕೃತಿಗಳು, 2 ರಾಗಮಾಲಿಕೆಗಳು, 14 ತಿಲ್ಲಾನಗಳು ಹಾಗೂ 4 ನಗಮಗಳನ್ನು ರಚಿಸಿದ್ದಾರೆ. ಇವು ಹೆಚ್ಚಾಗಿ ತೆಲುಗು, ಸಂಸ್ಕೃತ, ಕನ್ನಡ ಮತ್ತು ಕೆಲವು ಹಿಂದಿಯಲ್ಲಿವೆ. ಇವರ ರಚನೆಗಳು ವಿವಿಧ ಪ್ರಾಸಗಳಿಂದ ಕೂಡಿ, ರಾಗ, ಭಕ್ತಿಭಾವಯುತವಾಗಿವೆ. ಇವೆಲ್ಲವೂ ಭಗವಂತನ ಮತ್ತು ದೇವಿಯ ಸ್ತುತಿ ರೂಪದಲ್ಲಿವೆ. ಇವರ ತಿಲ್ಲಾನಗಳು ವೀಣಾ ಶೇಷಣ್ಣನವರ ತಿಲ್ಲಾನಗಳನ್ನೂ ನಗಮಾಗಳು ಇವರ ಗುರುವಿನ ನಗಮಾಗಳನ್ನೂ ನೆನಪಿಗೆ ತರುತ್ತವೆ.

ದೊರೆಸ್ವಾಮಿಯವರು ಬೆಂಗಳೂರು ಗಾಯನ ಸಮಾಜ ಮತ್ತು ಮೈಸೂರು ಸಂಗೀತ ಕಲಾಭಿವರ್ಧಿನಿ ಸಭೆಯ ಸಂಗೀತ ಸಮ್ಮೇಳನಾಧ್ಯಕ್ಷರಾಗಿ ಸನ್ಮಾನಿತರಾಗಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಇವರಿಗೆ 'ಕರ್ನಾಟಕ ಕಲಾತಿಲಕ' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದೆ.

## ಪ್ರೊ॥ ವಿ. ರಾಮರತ್ನಂ (1917)

ರಾಮರತ್ನಂ ಅವರು ಆಂಧ್ರ ಪ್ರದೇಶದ ಚಿತ್ತೂರಿನಲ್ಲಿ ವುಪ್ಪಳಧಡಿಯಂ ಸುಬ್ಬರಾಮಯ್ಯನವರ ಪುತ್ರರಾಗಿ ಜನಿಸಿದರು. ಇವರ ಮಾತಾಮಹರಾದ ಕಾಶೀನಾಥ ಶಾಸ್ತ್ರಿಗಳು ಮೈಸೂರು ಅರಮನೆಯ ಆಸ್ಥಾನ ವಿದ್ವಾಂಸರಾಗಿದ್ದರು. ರಾಮರತ್ನಂ ಅವರು ಬೆಂಗಳೂರಿನಲ್ಲಿ ನೆಲೆಸಿ ಮೊದಲು ಗಾಯನದಲ್ಲಿ ಶಿಕ್ಷಣವನ್ನು ಗಾನಕಲಾಸಿಂಧು ಡಿ. ಸುಬ್ಬರಾಮಯ್ಯನವರಿಂದಲೂ ನಂತರ ಸೋಮೇಶ್ವರ ಭಾಗವತರಿಂದ ಪಡೆದು ಮೈಸೂರಿಗೆ ಬಂದು ಪ್ರೌಢ ಶಿಕ್ಷಣವನ್ನು ಟಿ. ಚೌಡಯ್ಯ ಮತ್ತು ಮೈಸೂರು ವಾಸುದೇವಾಚಾರ್ಯರಿಂದ ಪಡೆದರು. ತಮ್ಮ ಗುರು ಚೌಡಯ್ಯನವರ ಸಂಗಡ ಭಾರತದಾದ್ಯಂತ ಪ್ರವಾಸ ಮಾಡಿ ಅನೇಕ ಕಚೇರಿಗಳನ್ನು ಕೇಳಿ ತಮ್ಮ ಗಾಯನ ಶೈಲಿಯನ್ನು ಉತ್ತಮವಾಗಿ ರೂಪಿಸಿಕೊಂಡರು. ಅರಿಯಕ್ಕುಡಿ ರಾಮಾನುಜ ಅಯ್ಯಂಗರ್ ಮತ್ತು ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್‌ರವರ ಗಾಯನ ಶೈಲಿಗಳಿಂದ ಹೆಚ್ಚು ಪ್ರಭಾವಿತರಾದರು.

1947ರಲ್ಲಿ ಮೊಟ್ಟಮೊದಲ ಗಾಯನ ಕಚೇರಿ ಮೈಸೂರು ವಾಸುದೇವಾಚಾರ್ಯರ ಸಮ್ಮುಖದಲ್ಲಿ ನಡೆಯಿತು. ಮದ್ರಾಸ್ ಮ್ಯೂಸಿಕ್ ಅಕಾಡೆಮಿ, ಬೊಂಬಾಯಿ, ದೆಹಲಿ ಮತ್ತು ಇತರ ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಕಛೇರಿ ಮಾಡಿ ಖ್ಯಾತರಾದರು. 1965ರ ವರೆಗೆ ಮೈಸೂರಿನ ಅಯ್ಯನಾರ್ ಸಂಗೀತದ ಕಾಲೇಜಿನ ಉಪಪ್ರಾಂಶುಪಾಲರಾಗಿದ್ದು ನಂತರ 1965ರಿಂದ 1977ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಲಲಿತ ಕಲಾ ಕಾಲೇಜಿನ ಪ್ರಥಮ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಬೆಂಗಳೂರು ಗಾಯನ ಸಮಾಜದ ಸಂಗೀತ ಸಮ್ಮೇಳನಾಧ್ಯಕ್ಷರಾಗಿ 'ಸಂಗೀತ ಕಲಾರತ್ನ', ಸಂಗೀತ ನೃತ್ಯ ಅಕಾಡೆಮಿಯ 'ಕರ್ನಾಟಕ ಕಲಾತಿಲಕ' ಹಾಗೂ ಇನ್ನೂ ಹಲವು ಸಂಸ್ಥೆಗಳಿಂದ ಬಿರುದು ಹಾಗೂ ಸನ್ಮಾನಗಳನ್ನು ಪಡೆದಿದ್ದಾರೆ.

1967ರಲ್ಲಿ ಡಾ॥ ವಿ.ಎಸ್. ಸಂಪತ್ಕುಮಾರಾಚಾರ್ಯರ ಸಹಕಾರದೊಂದಿಗೆ ಕನ್ನಡದಲ್ಲಿ 'ಕರ್ನಾಟಕ ಸಂಗೀತ ಸುಧಾ' ಎಂಬ ಬಿ. ಮ್ಯೂಸಿಕ್ ಪದವಿಯ ಪ್ರಥಮ ಪಠ್ಯಪುಸ್ತಕವನ್ನೂ, ಆರ್.ಎನ್. ದೊರೆಸ್ವಾಮಿಯವರೊಂದಿಗೆ ತುಳಜಾಜಿ ಮಹಾರಾಜ ವಿರಚಿತ 'ಪಲ್ಲಕ್ಕಿ ಸೇವಾ ಪ್ರಬಂಧಂ'ವನ್ನೂ, ಸದ್ಗುರು ತ್ಯಾಗರಾಜ ಸ್ವಾಮಿಯ 'ನೌಕಾ ಚರಿತಂ' ಅನ್ನು ಕನ್ನಡಿಸಿದ್ದಾರೆ. ಇವಲ್ಲದೆ 'ಕೀರ್ತನ ದರ್ಪಣ', 'ಸಂಗೀತ ದರ್ಪಣ' ಎಂಬ ಗ್ರಂಥಗಳನ್ನು ಬರೆದಿರುವವರಲ್ಲದೆ, ಟಿ. ಚೌಡಯ್ಯನವರ ಕೃತಿಗಳ ಪುಸ್ತಕವನ್ನು ಸಂಪಾದಿಸಿದ್ದಾರೆ. ಇವೆಲ್ಲ ಪುಸ್ತಕಗಳನ್ನು ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿದೆ.

. ರಾಮರತ್ನಂ ಅವರು ಕನ್ನಡ ಕವಿ ಕುವೆಂಪು ಅವರಿಂದ ಪ್ರೇರಿತರಾಗಿ ವಾಗ್ಗೇಯಕಾರರಾಗಿ ಕೆಲವು ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ 13 ಕೃತಿಗಳನ್ನು, ತಮಗೆ ಪ್ರಿಯವಾದ ತ್ರಿರತ್ನರ ಕೆಲವು ಕೃತಿಗಳನ್ನೊಳಗೊಂಡಂತೆ "ಕರ್ನಾಟಕ ಸಂಗೀತ ಕೃತಿ ರಚನ ಸಂಗ್ರಹ" ಎಂಬ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಇವರ ಕೃತಿಗಳು ತೆಲುಗು, ಸಂಸ್ಕೃತ ಮತ್ತು ಕನ್ನಡದಲ್ಲಿವೆ ಮತ್ತು "ಶ್ರೀರಾಮ" ಎಂಬ ಅಂಕಿತದಲ್ಲಿವೆ. ಕೃತಿಗಳ ಸಾಹಿತ್ಯವು ಸರಳ, ಭಾವ, ಭಕ್ತಿಯುತವಾಗಿದ್ದು ಅವರ ಗಾಯನ ಶೈಲಿಯ ಪ್ರತೀಕಗಳಾಗಿವೆ.

ರಾಮರತ್ನಂ ಅವರಿಗೆ ಶಿಷ್ಯರು ಅನೇಕ. ಅವರಲ್ಲಿ ಎನ್. ನಂಜುಂಡಸ್ವಾಮಿ, ಟಿ.ಆರ್. ಶ್ರೀನಿವಾಸನ್, ಬಿ.ಎಸ್. ಶ್ರೀನಿವಾಸ ಅಯ್ಯಂಗಾರ್, ನೀಲಮ್ಮ ಕಡಾಂಬಿ, ಕೆ.ಜಿ. ವೆಂಕಟಾಚಾರ್, ನಾಗಮಣಿ ಶ್ರೀನಾಥ್ ಮತ್ತು ಕೆ.ಜಿ. ಕನಕಲಕ್ಷ್ಮಿ ಪ್ರಮುಖರು.

# ಆರ್. ವಿಶ್ವೇಶ್ವರನ್ (1931)

ವಿಶ್ವೇಶ್ವರನ್ ಪ್ರಸಿದ್ಧರಾದ ಮೈಸೂರು ಸಹೋದರ ಚತುಷ್ಟರಲ್ಲಿ ಕಿರಿಯರು. ಪ್ರಾರಂಭದ ಸಂಗೀತ ಶಿಕ್ಷಣವನ್ನು ತಮ್ಮ ಅಣ್ಣ ಆರ್. ಚಂದ್ರಶೇಖರಯ್ಯನವರಿಂದ ಪಡೆದು ಕಾಲಕ್ರಮೇಣ ವಿಶೇಷವಾಗಿ ಸಾಧನೆ ಮಾಡಿ ತಮ್ಮದೇ ಆದ ಶೈಲಿಯನ್ನು ವೀಣಾ ವಾದನದಲ್ಲಿ ರೂಪಿಸಿಕೊಂಡರು ಸರ್ಕಾರದ ಗಾಯನ, ವೀಣಾ ವಾದನ, ಗೋಟುವಾದ್ಯ ವಾದನಗಳ ವಿದ್ವತ್ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದರು. ಮೈಸೂರು ವಿಶ್ವವಿದ್ಯಾನಿಲಯದ ಇಂಡಾಲಜಿ ಎಂ.ಎ. ಪದವೀಧರರು. ಮೈಸೂರು ಲಲಿತ ಕಲಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕಾಲಾನುಕ್ರಮದಲ್ಲಿ ವೀಣಾ ಪ್ರೊಫೆಸರರಾಗಿ 1991ರಲ್ಲಿ ನಿವೃತ್ತರಾದರು.

ವಿಶ್ವೇಶ್ವರನ್‌ರವರು ಸಂಪ್ರದಾಯಬದ್ಧವಾದ ವೀಣಾವಾದನದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದು ಭಾರತಾದ್ಯಂತ ಹಾಗೂ ಪಾಶ್ಚಾತ್ಯ ದೇಶಗಳಲ್ಲಿ ಹಲವಾರು ಕಡೆಗಳಲ್ಲಿ ಕಛೇರಿಗಳನ್ನು ಮಾಡುತ್ತಾ ಬಂದಿದ್ದಾರೆ. ಆಕಾಶವಾಣಿ ಕೇಂದ್ರಗಳಿಂದ ಸುಮಾರು 42ವರ್ಷಗಳಿಗಿಂತಲೂ ಹೆಚ್ಚಾಗಿ ಗಾಯನ ಮತ್ತು ವೀಣಾ ಕಛೇರಿಗಳನ್ನು ಪ್ರಸಾರ ಮಾಡುತ್ತ ಬಂದಿದ್ದಾರೆ. ಭಾರತದ ಹಲವಾರು ರಾಜ್ಯಗಳಲ್ಲಿ, ಪಾಶ್ಚಾತ್ಯ ದೇಶಗಳಲ್ಲಿ ಉಪನ್ಯಾಸಗಳು, ಪ್ರಾತ್ಯಕ್ಷಿಕೆಗಳು ಹಾಗೂ ತತ್ಸಂಬಂಧವಾದ ಕಾರ್ಯಾಗಾರಗಳನ್ನು ನಡೆಸಿದ್ದಾರೆ. ಇವರ ಸಂಗೀತದ ಧ್ವನಿ ಸುರುಳಿಗಳನ್ನು ಭಾರತ ಹಾಗೂ ಪಾಶ್ಚಾತ್ಯ ದೇಶಗಳ ಹಲವು ಸಂಸ್ಥೆಗಳು ಹೊರತಂದಿವೆ.

ಇವರ ವೀಣಾ ಶೈಲಿಯು ಗಾಯನ ಶೈಲಿಯಂತಿದೆ. ಶೃತಿ ಮತ್ತು ಲಯದ ಮೇಲೆ ಸಂಪೂರ್ಣ ಸ್ವಾಮ್ಯವನ್ನು ಹೊಂದಿದೆ. ದೀಕ್ಷಿತರ ಅಪರೂಪವಾದ ಕೃತಿಗಳ ನಿರೂಪಣೆಗೆ ಇವರು ಪ್ರಸಿದ್ಧರು. ಕಠಿಣವಾದ ಪಲ್ಲವಿಗಳನ್ನೂ, ಷಟ್ಕಾಲ ಪಲ್ಲವಿಯನ್ನು ನಿರೂಪಿಸುವುದರಲ್ಲಿ ಇವರು ಪರಿಣತರು.

ವಿಶ್ವೇಶ್ವರನ್ ವಾಗ್ಗೇಯಕಾರರಾಗಿ ತೆಲುಗು, ಸಂಸ್ಕೃತ ಮತ್ತು ಕನ್ನಡದಲ್ಲಿ 50ಕ್ಕೂ ಮೀರಿ ಕರ್ನಾಟಕ ಸಂಗೀತದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವು ವಿದ್ವಾಂಸರ ಪ್ರಶಂಸೆ ಪಡೆದಿವೆ. ಸಂಗೀತ ತ್ರಿಮೂರ್ತಿಗಳ ರಚನೆಗಳಿಂದ ಸ್ಫೂರ್ತಿ ಪಡೆದು ಅವರನ್ನು ಸ್ತುತಿಸಿ ಕೃತಿಗಳನ್ನು ರಚಿಸಿದ್ದಾರೆ. ವೈಣಿಕರಾಗಿರುವುದರಿಂದ ತಮ್ಮ ರಚನೆಗಳಲ್ಲಿ ಸೂಕ್ಷ್ಮಗಳನ್ನು ಅಳವಡಿಸಿ ಕೃತಿಗಳ ಸೌಂದರ್ಯವನ್ನು ಹೆಚ್ಚಿಸಿದ್ದಾರೆ. ರಾಮುಡು ಶ್ವಾಸ (ಬಿಲಹರಿ) ಎಂಬ ಕೃತಿಯು ತ್ಯಾಗರಾಜರನ್ನು, ''ಗುರುಗುಹರೂಪಂ ಮುತ್ತುಸ್ವಾನಮಿನಂ'' ಎಂಬುದು ದೀಕ್ಷಿತರನ್ನು, ''ಕಂಚಿಕಾಮಾಕ್ಷಿ'' ಎಂಬುದು ಶ್ಯಾಮಾಶಾಸ್ತ್ರಿಗಳನ್ನು ಕುರಿತು ಸ್ತುತಿಸಿರುವ ರಚನೆಗಳು. ''ಸಕಲಜ್ಞಾನದಾತ್ರಿ'' ಎಂಬುದು ಸರಸ್ವತಿಯನ್ನು ''ಪಾಡಿಪೊಗಡುದುರಾ'' ಎಂಬುದು ಶ್ರೀರಾಮುನನ್ನು ಕುರಿತ ಕೃತಿಗಳು. ಇವರ ರಚನೆಗಳಲ್ಲಿರುವ ಅಂಕಿತ 'ವಿಶ್ವೇಶ್ವರ' ಮತ್ತು ಹಲವು ರಚನೆಗಳಲ್ಲಿ ರಾಗಮುದ್ರೆಯೂ ಇದೆ.

# ಆರ್.ಕೆ. ಸೂರ್ಯನಾರಾಯಣ (1937)

ಸೂರ್ಯನಾರಾಯಣರು ರುದ್ರಪಟ್ಟಣದ ವೈಣಿಕ ಪ್ರವೀಣ ಆರ್.ಎಸ್. ಕೇಶವಮೂರ್ತಿ ಮತ್ತು ವೆಂಕಟಲಕ್ಷಮ್ಮ ದಂಪತಿಗಳ ಪುತ್ರರಾಗಿ ಮೈಸೂರಿನಲ್ಲಿ ಜನಿಸಿದರು. ತಮ್ಮ 7ನೆಯ ವಯಸ್ಸಿನಲ್ಲಿ ಮಹಾರಾಜ ಜಯಚಾಮರಾಜ ಒಡೆಯರ ಸಮ್ಮುಖದಲ್ಲಿ ಗಾಯನ ಮಾಡಿದರು. 1951ರಿಂದ ತಮ್ಮ ತಂದೆಯವರಲ್ಲಿ ವೀಣಾವಾದನದಲ್ಲಿ ಶಿಕ್ಷಣ ಪಡೆಯಲು ಆರಂಭಿಸಿ, ಕಠಿಣ ಸಾಧನೆ ಮಾಡಿ 1952ರಿಂದ ಆಕಾಶವಾಣಿ ಕೇಂದ್ರಗಳಿಂದ ವೀಣಾ ವಾದನವನ್ನು ಪ್ರಸಾರ ಮಾಡಲು ತೊಡಗಿದರು; ರೇಡಿಯೋ ಸಂಗೀತ ಸಮ್ಮೇಳನಗಳು, ದೂರದರ್ಶನ ಮತ್ತು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ ಬಂದಿದ್ದಾರೆ. ಭಾರತದಾದ್ಯಂತ ಎಲ್ಲೆಲ್ಲೂ ನೂರಾರು ಕಛೇರಿಗಳನ್ನು ಮಾಡಿದ್ದಾರೆ. ವಿದೇಶಗಳಲ್ಲೂ ಕಛೇರಿಗಳನ್ನು ಮಾಡಿದ್ದಾರೆ. ಸರ್ಕಾರಗಳು, ಸಂಸ್ಥೆಗಳು, ವಿದೇಶಿ ಸಂಸ್ಥೆಗಳು, ಮಠಾಧೀಶರುಗಳಿಂದ ಇವರಿಗೆ ಅನೇಕ ಬಿರುದು - ಸನ್ಮಾನಗಳು ದೊರಕಿವೆ. ಇವರು ಧೈರ್ಯ ಮತ್ತು ಮುನ್ನುಗ್ಗುವ ಮನೋವೃತ್ತಿಯುಳ್ಳ ಒಬ್ಬ ಕೆಚ್ಚಿನ ವೈಣಿಕರು.

ಮಂತ್ರಾಲಯ ರಾಘವೇಂದ್ರ ಸ್ವಾಮಿಯ ಪರಮಭಕ್ತರಾಗಿ, ಪ್ರೇರೇಪಿತರಾಗಿ ವಾಗ್ಗೇಯ ರಚನೆಯಲ್ಲಿ ತೊಡಗಿ ಸ್ವರಜತಿಗಳು, ವರ್ಣಗಳು, 72ಮೇಳ ರಾಗಗಳಲ್ಲಿ ಕೃತಿಗಳು, ನವಗ್ರಹ ಕೃತಿಗಳು, ರಾಗಮಾಲಿಕೆಗಳು, ಮಣಿಪ್ರವಾಳ ರಾಗಮಾಲಿಕಾ, ಪ್ರತ್ಯಾಹರ ಪಂಚದಶ ರಾಗಮಾಲಿಕಾ, ಜಾವಳಿಗಳು ಹಾಗೂ ತಿಲ್ಲಾನಗಳನ್ನು ಒಳಗೊಂಡಂತೆ 400ಕ್ಕೂ ಮೀರಿ ಕೃತಿಗಳನ್ನು ರಚಿಸಿದ್ದಾರೆ. 1970ರಲ್ಲಿ ಇವರು ಝಂಝೂಟಿ ರಾಗದಲ್ಲಿ "ಗುರು ರಾಘವೇಂದ್ರಂ ಭಜೇಹಂ" (ಆದಿ) ಎಂಬ ತಮ್ಮ ಪ್ರಥಮ ಕೃತಿಯನ್ನು ರಚಿಸಿದರು. ಇವರ ಸ್ವರಜತಿಗಳು, ವರ್ಣಗಳು ಆದಿ, ಝಂಪ ಮತ್ತು ಅಟ್ಟ ತಾಳಗಳಲ್ಲಿವೆ. ಇವರ ತಿಲ್ಲಾನಗಳು ಹಂಸವಿನೋದಿನಿ, ಮನೋಹರಿ, ಸಾರಮತಿ, ದರ್ಬಾರಿಕಾನಡಾ, ಹಿಂದೋಳ, ಹಂಸಾನಂದಿ ಇತ್ಯಾದಿ ರಾಗಗಳಲ್ಲಿವೆ. ಇವರ ತೆಲುಗು ರಚನೆಗಳು ಅಮರಸೇನಪ್ರಿಯ, ನಾಟಕುರಂಜಿ ಹಾಗೂ ಇತರ ರಾಗಗಳಲ್ಲಿವೆ. ಸಪ್ತ ರಾಗಮಾಲಿಕೆಯು ಮಣಿಪ್ರವಾಳದಲ್ಲಿ ರೂಪಕತಾಳದಲ್ಲಿದೆ. ಗಣಪತಿಯನ್ನು ಕುರಿತು ರಚಿಸಿರುವ "ಪಂಚದಶ ಪ್ರತ್ಯಾಹಾರ" ರಾಗಮಾಲಿಕೆಯು ಅಕಾರದಿಂದ ಕ್ಷಕಾರದವರೆಗೂ, ಪಂಚ ರಾಗಮಾಲಿಕೆಯು ಶ್ರೀಲಕ್ಷ್ಮೀನರಸಿಂಹ ಸ್ವಾಮಿಯನ್ನು, ನವರಾಗ ಮಾಲಿಕೆಯು ಶಿವನನ್ನು ಹಾಗೂ ಗಣಪತಿಯನ್ನು ಕುರಿತ ಮಂಗಳ ಕೃತಿಗಳು ಸೌರಾಷ್ಟ್ರ, ವಸಂತ, ಸುರುಟಿ, ಶ್ರೀರಾಗ, ಮಧ್ಯಮಾವತಿ ರಾಗಗಳಲ್ಲಿವೆ.

ಅಪರೂಪವಾದ ಕೃಷ್ಣವೇಣಿ, ಶಂಕರ, ಸಿದ್ಧೇಶ್ವರ, ತುಳಸಿ, ತ್ರಿಮೂರ್ತಿ, ಜಲಸುಗಂಧಿ ಮುಂತಾದ ಜನ್ಯ ರಾಗಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಸ್ವರಾಕ್ಷರಗಳಾದ ರಿ1 ರಿ2 ರಿ 3–ರ1 ರಿ1 ರಿ ಮುಂತಾದುವುಗಳಲ್ಲಿ ರಚನೆ ಮಾಡಿರುವವರಲ್ಲಿ ಇವರು ಪುರೋಗಾಮಿಗಳಾಗಿದ್ದಾರೆ. ತಮ್ಮ ಕೆಲವು ರಚನೆಗಳಲ್ಲಿ "ಹರಪುರೀಶ", "ತ್ರಿಪುರಸುಂದರಿ" ಮತ್ತು "ತ್ರಿಪ್ರರಾಶ್ರಯ" ಎಂಬ ಅಂಕಿತವನ್ನು ಬಳಸಿದ್ದಾರೆ. 1991ರಲ್ಲಿ ಇವರ ನವಗ್ರಹ ಕೃತಿಗಳ ಪುಸ್ತಕವು ಹಾಗೂ 72 ಮೇಳ ರಾಗಗಳ ಕೃತಿಗಳನ್ನೊಳಗೊಂಡ ಪುಸ್ತಕವು ಇತ್ತೀಚೆಗೆ ಪ್ರಕಟವಾಗಿದೆ.

# ಗೀತಾ ಸೀತಾರಾಮ್ (1953)

ಗೀತಾ ಸೀತಾರಾಮ್ 1953ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯ ಕಲ್‌ಬಾಗಲ್ ನರಸಿಂಹ ಅಯ್ಯಂಗಾರ್ ಹಾಗೂ ಜಯಾ ದಂಪತಿಗಳ ಜ್ಯೇಷ್ಠ ಪುತ್ರಿಯಾಗಿ ಮೈಸೂರಿನಲ್ಲಿ ಜನಿಸಿದರು. ತಮ್ಮ ಎಂಟನೆಯ ವಯಸ್ಸಿನಲ್ಲಿ ಕೇಶವ ನೃತ್ಯ ಶಾಲೆಯಲ್ಲಿ ನೃತ್ಯವನ್ನು ಅಭ್ಯಾಸ ಮಾಡಿದರು. ಸಂಗೀತದಲ್ಲಿ ಇವರ ಪ್ರಥಮ ಗುರು ಇವರ ದೊಡ್ಡಮ್ಮನವರಾದ ಜಯಮ್ಮನವರು ನಂತರ ಬೆಂಗಳೂರಿನ ಎಸ್.ಬಿ. ಕೇಶವಮೂರ್ತಿ ಮತ್ತು ಶ್ರೀನಿವಾಸನ್ ಬಳಿ ಜ್ಯೂನಿಯರ್ ಸಂಗೀತ ಶಿಕ್ಷಣ ಪಡೆದರು. ಮೈಸೂರಿಗೆ ವಿದ್ಯಾಭ್ಯಾಸಕ್ಕಾಗಿ ಬಂದು ಎ.ಆರ್. ಕೃಷ್ಣಮೂರ್ತಿ ಹಾಗೂ ಬೆಳಕವಾಡಿ ರಂಗಸ್ವಾಮಿ ಅಯ್ಯಂಗಾರ್, ಟಿ.ಆರ್. ಶ್ರೀನಿವಾಸನ್ ಇವರಲ್ಲಿ ಸಂಗೀತ ಶಿಕ್ಷಣ ಪಡೆದು ಕರ್ನಾಟಕ ಸರ್ಕಾರದ ಸೀನಿಯರ್ ಮತ್ತು ವಿದ್ವತ್ ಪರೀಕ್ಷೆಗಳಲ್ಲಿ ಮೂರನೆಯ ರ‍್ಯಾಂಕ್ ಪಡೆದರು.

1985ರಿಂದ ಮೈಸೂರು ಆಕಾಶವಾಣಿಯಿಂದ ಶಾಸ್ತ್ರೀಯ ಮತ್ತು ಲಘು ಸಂಗೀತವನ್ನು ಹಾಡುತ್ತಿದ್ದಾರೆ. 'ರಾಮಾಯಣ ದರ್ಶನಂ' ಕಾವ್ಯದ ಗಮಕವಾಚನ ಮತ್ತು ಸುಗಮ ಸಂಗೀತದಲ್ಲೂ ಪರಿಣತರಾಗಿದ್ದಾರೆ. ಕರ್ನಾಟಕದಲ್ಲಿ, ಇತರ ರಾಜ್ಯಗಳಲ್ಲಿ ಹಲವು ಕಛೇರಿಗಳನ್ನು ಮಾಡಿರುವರಲ್ಲದೆ ನೃತ್ಯ ಪ್ರದರ್ಶನಗಳಲ್ಲಿ ಮುಖ್ಯ ಗಾಯಕಿಯಾಗಿಯೂ ಹಾಡಿದ್ದಾರೆ.

ಗೀತಾರವರು ವಾಗ್ಗೇಯ ರಚನೆಗೆ ತೊಡಗಿ ಸಂಸ್ಕೃತ, ಕನ್ನಡ, ತಮಿಳು, ಹಿಂದಿ ಭಾಷೆಗಳಲ್ಲಿ ವಿವಿಧ ರಚನೆಗಳನ್ನು ರಚಿಸಿದ್ದಾರೆ. ಜತಿಸ್ವರಗಳು, ಪದವರ್ಣಗಳು, ಕೃತಿಗಳು, ತಿಲ್ಲಾನಗಳು, ಶಬ್ದ ಕೀರ್ತನೆ, ಜಾವಳಿ, ಪದ ಮುಂತಾದುವನ್ನು ರಚಿಸಿದ್ದಾರೆ. ಇವರ ನೃತ್ಯ ಪ್ರಧಾನ ಸಂಗೀತ ರಚನೆಗಳ ಸಂಕಲನ—'ನೂಪುರ' ಇತ್ತೀಚೆಗೆ ಪ್ರಕಟವಾಗಿದೆ. ಇದಲ್ಲದೆ 14ನೇ ವಕುಳಾಭರಣ ಜನ್ಯವಾದ ದೀಪದರ್ಶಿನೀ ಎಂಬ ಹೊಸ ರಾಗವನ್ನು ರೂಪಿಸಿದ್ದಾರೆ. ಇವರ ರಚನೆಗಳಲ್ಲಿ ತಿಲ್ಲಾನಗಳು ಬೃಂದಾವನ ಸಾರಂಗ, ತಿಲಂಗ್, ಜನರಂಜಿನಿ, ದ್ವಿಜಾವಂತಿ, ಲವಂಗಿ, ಬಹಾರ್, ಸಿಂಧುಭೈರವಿ ರಾಗಗಳಲ್ಲಿವೆ. "ಎಂಗೆ ನೀ ಮರೈಂದಾಯ್" ಎಂಬ ಪದವು ದೀಪದರ್ಶಿನೀ ರಾಗದಲ್ಲಿದೆ.

ಸಂಗೀತದಷ್ಟೇ ಸಾಹಿತ್ಯದಲ್ಲೂ ಒಲವು ಬೆಳೆಸಿಕೊಂಡಿರುವ ಗೀತಾರವರು ಕಥೆಗಳು, ಕಾದಂಬರಿ, ನಾಟಕ, ಶಿಶುಸಾಹಿತ್ಯ, ಹಾಸ್ಯಲೇಖನ ಮುಂತಾದುವುಗಳ ಲೇಖಕರೂ ಆಗಿದ್ದಾರೆ.

ಹವ್ಯಾಸಿ ಸಂಗೀತ ಕಲಾವಿದೆಯೂ, ಸಾಹಿತಿಯೂ ಆಗಿರುವ ಗೀತಾರವರು ವೃತ್ತಿಶಃ ಗ್ರಂಥ ವಿಜ್ಞಾನಿಯಾಗಿ ಮೈಸೂರು ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಗ್ರಂಥ ವಿಜ್ಞಾನಿಯಾಗಿದ್ದಾರೆ. ಮೈಸೂರಿನಲ್ಲಿ ಮನಃಶ್ಯಾಸ್ತ್ರದಲ್ಲಿ ಎಂ.ಎ. ಪದವೀ ಪಡೆದು ಗ್ರಂಥ ವಿಜ್ಞಾನದಲ್ಲಿ ಎಂ.ಲಿಟ್. ಮಾಡಿದ್ದಾರೆ. ಇವರ ಒಬ್ಬ ಪುತ್ರ ಮೃದಂಗ ವಾದಕ ಹಾಗೂ ಮತ್ತೊಬ್ಬ ಪುತ್ರ ಪಿಟೀಲು ವಾದಕರಾಗಿ ರೂಪುಗೊಳ್ಳುತ್ತಿದ್ದಾರೆ.

# ಪಂಡಿತ್ ಆರ್.ವಿ. ಶೇಷಾದ್ರಿಗವಾಯಿ (1924)

ಶೇಷಾದ್ರಿ ಗವಾಯಿ ಅವರು ಚಿತ್ರದುರ್ಗ ಜಿಲ್ಲೆಯ ದಾವಣಗೆರೆಯಲ್ಲಿ ಮೈಸೂರು ಸರ್ಕಾರದ ಉದ್ಯೋಗದಲ್ಲಿದ್ದ ವೆಂಕಟ ಸುಬ್ಬರಾಯರ ಪುತ್ರರಾಗಿ ಜನಿಸಿದರು. ಇವರ ಊರು ಆನೇಕಲ್ ರಾಜಾಪುರ. ಶೇಷಾದ್ರಿಯವರು ಹಿಂದೂಸ್ಥಾನಿ ಸಂಗೀತದಲ್ಲಿ ಪ್ರಾರಂಭದ ಶಿಕ್ಷಣವನ್ನು ಕಲ್ಕೋಟಿ ಚೆನ್ನಬಸವಯ್ಯನವರಿಂದಲೂ, ಪ್ರೌಢ ಶಿಕ್ಷಣವನ್ನು ವೀರೇಶ್ವರ ಪುಣ್ಯಾಶ್ರಮದ ಪಂ. ಪಂಚಾಕ್ಷರಿ ಗವಾಯಿ ಮತ್ತು ಪುಟ್ಟರಾಜ ಗವಾಯಿ ಅವರಿಂದ ಪಡೆದು ಒಬ್ಬ ಶ್ರೇಷ್ಠ ಹಾರ್ಮೋನಿಯಂ ವಾದಕ, ತಬಲಾವಾದಕ ಹಾಗೂ ಗಾಯಕರಾದರು. ಗಾಂಧರ್ವ ಮಹಾವಿದ್ಯಾಲಯದ ಸಂಗೀತ ವಿಶಾರದ (ಎಂ.ಎ.) ಪದವೀಧರರಾದರು. ಇವರು ಗ್ವಾಲಿಯರ್ ಘರಾಣಕ್ಕೆ ಸೇರಿದವರಾಗಿದ್ದರೂ. ಇತರ ಘರಾಣೆಗಳ ಸಂಪೂರ್ಣ ಅರಿವು ಪಡೆದು ತಮ್ಮದೇ ಆದ ಶೈಲಿಯನ್ನು ಬೆಳೆಸಿಕೊಂಡಿದ್ದಾರೆ.

1944ರಲ್ಲಿ ಬೆಂಗಳೂರಿನಲ್ಲಿ ನೆಲೆಸಿ ಶ್ರೀ ಅರವಿಂದ ಸಂಗೀತಾ ವಿದ್ಯಾಲಯ ಎಂಬ ಸಂಸ್ಥೆಯನ್ನು ಸ್ಥಾಪಿಸಿ ನೂರಾರು ವಿದ್ಯಾರ್ಥಿ—ವಿದ್ಯಾರ್ಥಿನಿಯರಿಗೆ ಸಂಗೀತ ಶಿಕ್ಷಣ ನೀಡುತ್ತ ಬಂದಿದ್ದಾರೆ. ಸಂಗೀತದ ಏಕೈಕ ಕನ್ನಡ ಮಾಸಪತ್ರಿಕೆಯಾದ ''ಗಾಯನಗಂಗಾ''ವನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಇವರು ''ತತ್ವಗಾನ ರತ್ನಾಕರ'' ಮತ್ತು ''ಸಂಗೀತ ಕಲಾರವಿಂದ'' ಎಂಬ ಎರಡು ಗ್ರಂಥಗಳ ಕರ್ತೃವಾಗಿದ್ದಾರೆ. ಭಾರತದ ಎಲ್ಲಾ ಖ್ಯಾತ ಹಿಂದೂಸ್ಥಾನೀ ಸಂಗೀತ ವಿದ್ವಾಂಸರಿಗೆ ಹಾರ್ಮೋನಿಯಂ ಸಾಥ್ ಮಾಡಿದ್ದಾರೆ. ಇವರಿಗೆ ಕರ್ನಾಟಕ ಸಂಗೀತದಲ್ಲೂ ಪರಿಣತಿಯಿದೆ. ಸಂಗೀತದ ಸಮ್ಮೇಳನಗಳಲ್ಲಿ ಭಾಗವಹಿಸಿ, ಅನೇಕ ಪ್ರಾತ್ಯಕ್ಷಿಕೆ ಹಾಗೂ ಉಪನ್ಯಾಸಗಳನ್ನು ನೀಡಿದ್ದಾರೆ. ಇವರು ಅತ್ಯುತ್ತಮ ಹಾರ್ಮೋನಿಯಂ ಕಲಾವಿದರು. ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕಲಾತಿಲಕ ಮುಂತಾದ ಅನೇಕ ಬಿರುದುಗಳು, ಸನ್ಮಾನಗಳು ಇವರಿಗೆ ಲಭಿಸಿವೆ. ಇವರು ಕರ್ನಾಟಕ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸಂಗೀತ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ.

35ವರ್ಷಗಳಿಗೂ ಮೀರಿ ಒಂದೇ ಸಮನಾಗಿ ಪ್ರಕಟಿಸುತ್ತಿರುವ ಮಾಸಿಕ ಪತ್ರಿಕೆ ಗಾಯನ ಗಂಗಾದಲ್ಲಿ 'ಉದಯಾಚಲ' ಎಂಬ ಅಂಕಿತದಲ್ಲಿ ಕನ್ನಡದಲ್ಲಿರುವ ತಮ್ಮ ಕೃತಿಯನ್ನು ಸ್ವರ ಸಂಯೋಜನೆ ಸಹಿತ ವಿವಿಧ ಹಿಂದೂಸ್ಥಾನೀ ರಾಗಗಳಲ್ಲಿ ರಚಿಸಿ ಪ್ರತಿ ತಿಂಗಳೂ ಪ್ರಕಟಿಸುತ್ತಾ ಬಂದಿದ್ದಾರೆ. ವಿವಿಧ ಭಾಷೆಗಳ ಈ ಕೃತಿಗಳ ಮಾತು ಸರಳ, ಆಕರ್ಷಕ, ರಾಗಭಾವ ಮತ್ತು ಭಕ್ತಿಯುತವಾಗಿ ಪ್ರಾಸಾಲಂಕಾರದಿಂದ ಕೂಡಿ ಮನೋಹರವಾಗಿವೆ.

## ಲೇಖಕರ ಪರಿಚಯ



ಕರ್ನಾಟಕದ ಅಗ್ರಮಾನ್ಯ, ಪ್ರತಿಭಾನ್ವಿತ ಕಲಾ ವಿಮರ್ಶಕರಲ್ಲಿ ಪ್ರಮುಖರೂ ಪ್ರಸಿದ್ಧರೂ ಆದ ಡಾ.ಎಂ.ಸೂರ್ಯ ಪ್ರಸಾದ್ ಅವರದು ಬಹುಮುಖ ವ್ಯಕ್ತಿತ್ವ. ತಮ್ಮ ವಿದ್ವತ್ಪೂರ್ಣ ಹಾಗೂ ಪ್ರೇರಕ ವಿಮರ್ಶೆಗಳು ಮತ್ತು ಲೇಖನಗಳಿಂದ ಅವರು ಸಂಗೀತ-ನೃತ್ಯ ಕ್ಷೇತ್ರಗಳಲ್ಲಿ ಚಿರಪರಿಚಿತರಾಗಿದ್ದಾರೆ. ಎರಡು ಸಾವಿರಕ್ಕೂ ಮಿಗಿಲಾದ ಲೇಖನಾದಿಗಳು, ಹಲವಾರು ಅಭಿನಂದನ ಗ್ರಂಥಗಳು ಮತ್ತು ಪುಸ್ತಕಗಳು ಅವರ ಪಾಂಡಿತ್ಯ ಮತ್ತು ಪ್ರತಿಭೆಗೆ ಪ್ರಖರ ಉದಾಹರಣೆಗಳಾಗಿವೆ. ಕರ್ನಾಟಕ ಸಂಗೀತ ಗಾಯನ ಮತ್ತು ಪಿಟೀಲುವಾದನದಲ್ಲಿ ಉತ್ತಮ ಪರಿಣತಿಯನ್ನು ಸಾಧಿಸಿರುವ ಡಾ. ಸೂರ್ಯಪ್ರಸಾದ್ ಹಿಂದೂಸ್ಥಾನಿ ಸಂಗೀತ ಮತ್ತು ಶಾಸ್ತ್ರೀಯ ನೃತ್ಯಗಳಲ್ಲೂ ನೈಪುಣ್ಯವನ್ನು ಹೊಂದಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಅವರ ರೂಪಕ,ಭಾಷಣ ಮತ್ತು ಸಂದರ್ಶನಗಳು ಮೂಡಿ ಬಂದಿವೆ. ಆಕಾಶವಾಣಿಯ ಸ್ಥಳೀಯ ಆಡಿಷನ್ ಕಮಿಟಿಯ ಸದಸ್ಯರಾಗಿ ಅವರು ಉತ್ತಮ ಸೇವೆ ಮಾಡುತ್ತಿದ್ದಾರೆ.

ಹಲವಾರು ಸಂಘ-ಸಂಸ್ಥೆಗಳ ಸಕ್ರಿಯ ಸದಸ್ಯರಾಗಿರುವ ಡಾ. ಸೂರ್ಯ ಪ್ರಸಾದ್ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಸ್ಥಾಯಿ ಸಮಿತಿಯ ಸದಸ್ಯರಾಗಿ ಮತ್ತು ಅಕಾಡೆಮಿಯ ಎಲ್ಲ ಪ್ರಕಟಣೆಗಳ ಪ್ರಧಾನ ಸಂಪಾದಕರಾಗಿ ಅಪೂರ್ವ ಸಾಧನೆ ಮಾಡಿದ್ದಾರೆ. "ದಿ ಹಿಂದು" ಪತ್ರಿಕೆಯ ಅಂಕಣಕಾರರಾಗಿ ಕಳೆದ ಒಂದೂವರೆ ದಶಕದಿಂದ ರಾಜ್ಯದ ಸಂಗೀತ, ನೃತ್ಯ ಕಲಾ ಕ್ಷೇತ್ರಗಳಲ್ಲಿ ಅದ್ಭುತ ಚಾಲನೆಯನ್ನುಂಟುಮಾಡಿದ್ದಾರೆ.

ಹಿಂದಿಯಲ್ಲಿ ಸ್ನಾತಕೋತರ ಪದವೀಧರರೂ ಹಾಗೂ ಪಿ.ಎಚ್.ಡಿ. ಪದವಿಯನ್ನು ಪಡೆದಿರುವ ಡಾ. ಸೂರ್ಯಪ್ರಸಾದ್ ಪ್ರಸ್ತುತ ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಹಿಂದಿ ವಿಭಾಗದ ಪ್ರಾಧ್ಯಾಪಕರೂ, ಮುಖ್ಯಸ್ಥರೂ ಆಗಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಈಗಾಗಲೇ ಇಬ್ಬರು ಅಭ್ಯರ್ಥಿಗಳು ಪಿ.ಎಚ್.ಡಿ. ಪದವಿಯನ್ನು ಪಡೆದು ಕೊಂಡಿದ್ದಾರೆ.